
ಸಂಪುಟ - ೧೧ ಸಂಚಿಕೆ ೨೫

ಐಕ್ಯರಂಗ

ಜೂನ್ ೨೫-೧೯೮೯ ರೂ. ೧-೨೫

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ರಾಜ್ಯಸಮಿತಿಯ ವಾರಪತ್ರಿಕೆ



ಬಿ.ಜೆ.ಪಿ.ಯ ಚುನಾವಣಾ ವೇದಿಕೆ

ಆಂತರಿಕವಾಗಿ ಹಿಂದೂ ಪುನರುತ್ಥಾನವಾದ, ಕೋಮುವಾದ ಸಾಮ್ರಾಜ್ಯಶಾಹಿ-ಪರ ವಿದೇಶಾಂಗ ನೀತಿ. ವಿದೇಶ ಸಂಬಂಧಗಳಲ್ಲಿ ಚೀಣಾ-ವಿರೋಧಿ ರಾಜಕೀಯ ಇದು ಬಿ.ಜೆ.ಪಿ.ಯ ಚುನಾವಣಾ ವೇದಿಕೆಯ ಸಾರಸಂಗ್ರಹ

ಬಿ.ಜೆ.ಪಿ.ಯನ್ನು ಒಳಗೊಳ್ಳದೆ ಕಾಂಗ್ರೆಸ್ ವಿರುದ್ಧ ವಿರೋಧ ಪಕ್ಷಗಳ ಐಕ್ಯತೆ ಸಾಧ್ಯವಿಲ್ಲ ಎಂದು ಪತ್ರಿಕಾ ಲೇಖಕರು, ಕೆಲವು ವಿರೋಧ ಪಕ್ಷಗಳ ಮುಖಂಡರು ನಿರಂತರ ಪ್ರಚಾರ ಮಾಡುತ್ತಾ ಬರುತ್ತಿದ್ದಾರೆ. ಅವರು 1977-79ರ ಸರಕಾರಗಳನ್ನು ಉದಾಹರಿಸುತ್ತಾರೆ. ಆದರೆ ಜನತಾಪಕ್ಷ ಮತ್ತು ಅದರ ಸರಕಾರದಲ್ಲಿ, ಕಾಲೂರಲು ಸಾಧ್ಯವಾದ ಮೇಲೆ ಜನಸಂಘ ಅಲ್ಲಿ ಬೇರೂರಲು ಪ್ರಯತ್ನಿಸಿದಾಗ ಇದರ ಬಗ್ಗೆ ಜನತಾಪಕ್ಷದಲ್ಲಿ ವಿರೋಧ ಎದ್ದು, ಎಡ ಪಕ್ಷಗಳು ಅದನ್ನು ಬೆಂಬಲಿಸಿ ಇದು

8 ನೇ ಪುಟಕ್ಕೆ



ಚೀಣಾದಲ್ಲಿ "ಅಧಿಕಾರಕ್ಕಾಗಿ ಹೋರಾಟ"- ಯಾರ ನಡುವೆ?

ಸಮಾಜವಾದೀ ಪ್ರಜಾಪ್ರಭುತ್ವ ವಿಸ್ತರಣೆ ಮತ್ತು ಅಮೇರಿಕನ್ ಮಾದರಿ ಬಯಸುವವರ ನಡುವೆ

ಚೀಣಾದ ಇತ್ತೀಚಿನ ಬೆಳವಣಿಗೆಗಳ ಕುರಿತು ಹಿಂದೀ ದೈನಿಕ ನವಭಾರತ್ ಟೈಮ್ಸ್‌ನ ವರದಿಗಾರರು ಸಿ.ಪಿ.ಐ. (ಎಂ) ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್. ಅವರಿಗೆ ಕೇಳಿದ ಪ್ರಶ್ನೆಗಳು, ಅದಕ್ಕೆ ಇ.ಎಂ.ಎಸ್. ರವರ ಉತ್ತರಗಳನ್ನು ಇಲ್ಲಿ ಕೊಡುತ್ತಿದ್ದೇವೆ.

ಪ್ರಶ್ನೆ ೧: ತಿಯಾನ್.ಅನ್‌ಮೆನ್ ಚೌಕದಲ್ಲಿ ಪ್ರಜಾಪ್ರಭುತ್ವ-ಪರ ವಿದ್ಯಾರ್ಥಿಗಳ ಮೇಲೆ ಮಿಲಿಟರಿಯ ಒಂದು ತೀವ್ರ ಪ್ರಯೋಗ ನಡೆಯಿತು. ಇದರಲ್ಲಿ ಸಾವಿರಗಟ್ಟಲೆಯಲ್ಲದಿದ್ದರೂ, ನೂರಾರು ಪ್ರಜಾಪ್ರಭುತ್ವ-ಪರ ವಿದ್ಯಾರ್ಥಿಗಳು, ನಿವಾಸಿಗಳು ಕೊಲ್ಲಲ್ಪಟ್ಟರು ಎಂದು ಎಲ್ಲಾ ಕಡೆ ಸುದ್ದಿಯಾಗಿದೆ. ನಿಮ್ಮ ಪಕ್ಷ ಈ ಬಗ್ಗೆ ಸಂತಾಪ ವ್ಯಕ್ತಪಡಿಸುವಲ್ಲಿ ವಿಫಲವಾಗಿದೆ. ಇತ್ತೀಚೆಗೆ ಚೀಣಾದ ಹಿರಿಯ ಮುಖಂಡ ಡೆಂಗ್ ಕ್ಸಿಯಾವೋಪಿಂಗ್ ಜನತಾ ವಿಮೋಚನಾ ಸೇನೆಯ ಸೈನಿಕರ ಸಾವಿಗೆ ಸಂತಾಪ ಸೂಚಿಸಿದ್ದಾರೆ, ವಿದ್ಯಾರ್ಥಿಗಳ ಸಾವಿಗೆ ಸೂಚಿಸಿಲ್ಲ. ನಿಮ್ಮ ಪಕ್ಷ ಈ ಹಿನ್ನಲೆಯಲ್ಲಿ ಪಕ್ಷವಹಿಸಿ ಮಾತನಾಡುವಂತೆ ಕಾಣುತ್ತದೆ. ಸೇನೆ, ಡೆಂಗ್ ಕ್ಸಿಯಾವೋಪಿಂಗ್ ಮತ್ತು ಪ್ರಧಾನ ಮಂತ್ರಿ ಲಿಪೆಂಗ್‌ರವರನ್ನು ಖಂಡಿಸಲು ಹಿಂಜರಿಯುವಂತೆ ಕಾಣುತ್ತದೆ. ಈ ಘಟನೆಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ನಮ್ಮ ಪಕ್ಷದ ಪಾಲಿಟ್ ಬ್ಯೂರೋ ಒಂದು ಹೇಳಿಕೆ ನೀಡಿದೆ. ಅದರಲ್ಲಿ ಸಾವು ಜೀವ ಹಾನಿಯ ಬಗ್ಗೆ ನಮ್ಮ ಸಂತಾಪ ಹಾಗೂ ಕಾತರವನ್ನು ವ್ಯಕ್ತಪಡಿಸಿದ್ದೇವೆ. ಆ ಬಗ್ಗೆ ನಮಗೆ ತೀವ್ರ [illegible]ವಾಗಿದೆ.

ಒಬ್ಬ ಕಮ್ಯುನಿಸ್ಟ್‌ನಾಗಿ, ನಾನು [illegible] ಸಮಾಜವಾದೀ ಪ್ರಭುತ್ವ ಮತ್ತು ಅದರ ಶತ್ರುಗಳ ನಡುವಿನ ಹೋರಾಟದಲ್ಲಿ, ನಾವು ಪಕ್ಷವಹಿಸುತ್ತೇವೆ. ಅಂದರೆ ಸಮಾಜವಾದೀ [illegible] ಮುಖಂಡರು ತಪ್ಪೇ ಮಾಡುವುದಿಲ್ಲ, ಎಂದು ನಾನು ಭಾವಿಸುತ್ತೇನೆ ಎಂದು ಅರ್ಥವಲ್ಲ. ಕೆಲವೊಮ್ಮೆ ನಾನು ಅವರ ಧೋರಣೆಗಳನ್ನು, ಕ್ರಮಗಳನ್ನು ಟೀಕಿಸಬಹುದು. ಆದರೆ ಹೇಗೆ ಅವರು ತಪ್ಪೇ ಮಾಡುವುದಿಲ್ಲ ಎಂದು ನಾನು ಭಾವಿಸುವುದಿಲ್ಲವೋ ನಾನು ಕೂಡ ತಪ್ಪೇ ಮಾಡುವುದಿಲ್ಲ ಎಂದು ಹೇಳುವುದೂ ಸಲ್ಲ. ಚೀಣಾದಲ್ಲಿ ಸಮಾಜವಾದೀ ವ್ಯವಸ್ಥೆಯ ಭದ್ರತೆಯ, ರಕ್ಷಣೆಯ ಪ್ರಶ್ನೆ ಎದ್ದಾಗ ಅದನ್ನು ಹೇಗೆ ಎದುರಿಸಬೇಕು ಎಂದು ನಿರ್ಧರಿಸಬಲ್ಲವರು ಚೀಣಾ ಕಮ್ಯುನಿಸ್ಟ್ ಪಕ್ಷದ ಸಂಗಾತಿಗಳು ಮತ್ತು ಚೀಣಾ ಜನತಾ ಗಣತಂತ್ರದ ಸರಕಾರ ಮಾತ್ರ ಎಂಬುದು ನಿರ್ವಿವಾದ ಎಂದು ನಾನು ಪರಿಗಣಿಸುತ್ತೇನೆ.

ಪ್ರಶ್ನೆ ೨: ಚೀಣಾದಲ್ಲಿ ಅಧಿಕಾರಕ್ಕಾಗಿ ಹೋರಾಟ ನಡೆಯುತ್ತಿದೆ ಎಂದು ನಿಮಗೆ ಅನಿಸುತ್ತಿದೆಯೇ? ಪ್ರಜಾ ಪ್ರಭುತ್ವ-ಪರ ಆಂದೋಲನಾ ಇದರ ಒಂದು ಸೂಚಕವೇ? ಈ ಆಂದೋಲನದ ಮೂಲಭೂತ ಕಾರಣವೇನು?

ಉತ್ತರ: ನಿಜ. "ಅಧಿಕಾರಕ್ಕಾಗಿ ಹೋರಾಟ" ಇದೆ. ಆದರೆ ಅದು ನೀವು ಅಂದುಕೊಂಡಂತೆ ಚೀಣಾದ ಮುಖಂಡರ ಎರಡು ಗುಂಪುಗಳ ನಡುವೆ ಅಲ್ಲ. ಅದು ಒಂದೆಡೆ ಸಮಾಜವಾದವನ್ನು ಕಾಪಾಡಿಕೊಂಡು ಸಮಾಜವಾದೀ ವ್ಯವಸ್ಥೆಯೊಳಗೆ ಪ್ರಜಾಪ್ರಭುತ್ವವನ್ನು ವಿಸ್ತರಿಸ ಬಯಸುವವರು ಮತ್ತು ಇನ್ನೊಂದೆಡೆ ಸಮಾಜವಾದದ ಸ್ಥಾನದಲ್ಲಿ ಬಂಡವಾಳ ಶಾಹಿಯನ್ನು ತರಬಯಸುವವರ ನಡುವಿನ ಹೋರಾಟ. ವಿದ್ಯಾರ್ಥಿ ಸಮೂಹ ಜನತೆ ಸಮಾಜವಾದೀ ವ್ಯವಸ್ಥೆಯೊಳಗೆ, ಹೆಚ್ಚು ಪ್ರಜಾಪ್ರಭುತ್ವ ಬೇಕೆಂದು ಸರಿಯಾಗಿಯೇ ಒತ್ತಾಯಿಸುತ್ತಿದ್ದರೆ, ಅಮೆರಿಕಾದಿಂದ ಮರಳಿದ ವಿದ್ಯಾರ್ಥಿಗಳು, ಬುದ್ಧಿ ಜೀವಿಗಳ ಒಂದು ಅತೀ ಸಣ್ಣ ವಿಭಾಗ ಅಮೆರಿಕನ್ ಪ್ರಜಾಪ್ರಭುತ್ವ ಮಾದರಿಯಲ್ಲಿ ಸಾಗಬೇಕೆನ್ನುತ್ತಾರೆ. "ಸ್ವಾತಂತ್ರ್ಯ ಪ್ರತಿಮೆ" ನಿಲ್ಲಿಸುವ ಉದ್ರೇಕಕಾರಿ ಕೆಲಸವನ್ನು ನೋಡಿ. ಅದೇ ರೀತಿ ಬುಕ್‌ಗಳು ಥ್ಯಾಚರ್‌ಗಳು ಹೇಗೆ "ಪ್ರಜಾಪ್ರಭುತ್ವ-ಪರ" ಪ್ರದರ್ಶನಗಳನ್ನು ಸಮರ್ಥಿಸಲು ಚೀಣಾ ಸರಕಾರದ ಮೇಲೆ ಎಲ್ಲಾ ತರದ ಒತ್ತಡಗಳನ್ನು ತರುತ್ತಿದ್ದಾರೆ ನೋಡಿ.

ಪ್ರಶ್ನೆ ೩: ಒಬ್ಬ ಪಾರ್ಟಿ ಮುಖಂಡರಾಗಿ ನೀವು ಪ್ರಧಾನ ಕಾರ್ಯದರ್ಶಿಗಳ ಪಾತ್ರಗಳನ್ನು ಗಮನಿಸುತ್ತಿದ್ದೀರಿ. ಯಾವೋ ಬಾಂಗ್ ಮತ್ತು ಝಾವೋ ಝಿಯಾಂಗ್ ವಿದ್ಯಾರ್ಥಿಗಳನ್ನು ಬೆಂಬಲಿಸಿದರೆಂದು ಹೇಳಲಾಗುತ್ತಿದೆ. ಈ ಇಬ್ಬರು ಮುಖಂಡರ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ಇಲ್ಲಿರುವ ಅಂಶ ನನ್ನ ಅಭಿಪ್ರಾಯವೇನು ಎಂದಲ್ಲ, ಚೀಣೀ ಪಕ್ಷದ ಅಭಿಪ್ರಾಯ ಏನು ಎಂಬುದು. ಅದು ಆಗಲೇ ತಿಳಿದಿದೆ.

ಪ್ರಶ್ನೆ ೪: ಚೀಣಾದ ಬಗ್ಗೆ ಐಕ್ಯ ಕಮ್ಯುನಿಸ್ಟ್ ಪಕ್ಷದಲ್ಲಿ ಭಿನ್ನಾಭಿಪ್ರಾಯಗಳ ನಂತರ ಸಿ.ಪಿ.ಐ. (ಎಂ) ೧೯೬೪ ರಲ್ಲಿ ಹುಟ್ಟಿತು. ಚೀಣಾಕ್ಕೆ ಸಂಬಂಧಪಟ್ಟಂತೆ ಈಗ ನಿಮ್ಮ ಪಕ್ಷದ ಧೋರಣೆಯೇನು?

ಉತ್ತರ: ಒಂದು ವಿಷಯ ಸ್ಪಷ್ಟಪಡಿಸ ಬಯಸುತ್ತೇನೆ. ೧೯೬೪ ರಲ್ಲಿ ಆದದ್ದು ನೀವು ಅಂದುಕೊಂಡಂತೆ "ಸಿ.ಪಿ.ಐ.(ಎಂ) ನ ಜನ್ಮ"ಅಲ್ಲ. ಅದುವರೆಗೆ ಒಂದಾಗಿದ್ದ ಸಿ.ಪಿ.ಐ.ನಲ್ಲಿ ವಿಭಜನೆ. ವಿಭಜನೆಯ ಮೊದಲಿನ ಸಿ.ಪಿ.ಐ. ನ ಮುಂದುವರಿಕೆ ತಾವು ಎಂದು ಪರಿಗಣಿಸಲು ಈಗಿನ ಸಿ.ಪಿ.ಐ.ನ ಸಂಗಾತಿಗಳಿಗೆ ಎಷ್ಟು ಹಕ್ಕಿದೆಯೋ ಅಷ್ಟೇ ಹಕ್ಕು ನಮಗೂ ಇದೆ.

ವಿಭಜನೆಯ ಮೊದಲು ಸಿ.ಪಿ.ಐ.ನಲ್ಲಿ ಎರಡು ಮಾರ್ಗಗಳ ಬಗ್ಗೆ ಒಂದು ತೀವ್ರ ಸಮರ ನಡೆಯಿತು. ನೀವೆಂದುಕೊಂಡಂತೆ ಕೇವಲ ಚೀಣಾ ಪ್ರಶ್ನೆಯ ಮೇಲೆ ಈ ಸಮರ ನಡೆದದ್ದಲ್ಲ. ವಾಸ್ತವಿಕವಾಗಿ ವಿಭಜನೆಯ ಪೂರ್ಣ ಒಂದು ದಶಕದ ಮೊದಲೇ ಈ ಹೋರಾಟ ಆರಂಭವಾಗಿತ್ತು. ಕಾಂಗ್ರೆಸ್ ಮತ್ತು ಅದರ ಸರಕಾರ ಕುರಿತಂತೆ ಯಾವ ನಿಲುವು ತಳೆಯಬೇಕು ಎಂಬಪ್ರಶ್ನೆಯ ಮೇಲೆ ಅದು ಆರಂಭವಾಗಿತ್ತು. ನಂತರ ಅಂತರ್ರಾಷ್ಟ್ರೀಯ ಸೈದ್ಧಾಂತಿಕ ಪ್ರಶ್ನೆಗಳು ಮತ್ತು ಚೀಣಾದೊಂದಿಗೆ ಭಾರತದ ಸಂಬಂಧಗಳನ್ನು ಕುರಿತಂತೆ ಪಕ್ಷದ ನಿಲುವಿನ ಬಗ್ಗೆಯೂ ಭಿನ್ನಾಭಿಪ್ರಾಯ ಎದ್ದು ನಿಂತಿತು.

ವಿಭಜನೆಯ ಮೊದಲ ಸಿ.ಪಿ.ಐ. ನೊಳಗೆ ಎರಡು ಮಾರ್ಗಗಳ ನಡುವಿನ ಹೋರಾಟ ೧೯೬೪ ರಿಂದ ಈಗಿನ ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ನ ಹೋರಾಟವಾಗಿ ಪರಿವರ್ತನೆಗೊಂಡಿತು. ವಿಭಜನೆಗೆ ಕಾರಣವಾದ ಎಲ್ಲಾ ಪ್ರಶ್ನೆಗಳಲ್ಲಿ, ಸಿ.ಪಿ.ಐ. (ಎಂ)ನ ಮಾರ್ಗ ಸರಿಯೆಂದು ಚರಿತ್ರೆ ಸಿದ್ಧಗೊಳಿಸಿದೆ. ಆದ್ದರಿಂದ ನಮ್ಮ ಧೋರಣೆಯಲ್ಲಿ ಯಾವುದೇ ಮೂಲಭೂತ ಬದಲಾವಣೆ ಎಂಬ ಸಂಗತಿಯೇ ಇಲ್ಲ.

ಪ್ರಶ್ನೆ ೫: ಚೀಣಾದಲ್ಲಿ ಇತ್ತೀಚಿನ ಘಟನೆಗಳ ನಂತರ ನಿಮ್ಮ ಚೀಣಾ ಧೋರಣೆಯನ್ನು ಪುನರ್‌ರೂಪಿಸಬಯಸುತ್ತೀರಾ?

ಉತ್ತರ: ಈ ಪ್ರಶ್ನೆಯೇ ಏಳುವುದಿಲ್ಲ.

ಪುಟ 8 ಕ್ಕೆ



ವೈದ್ಯಕೀಯ ಎಂಜಿನಿಯರಿಂಗ್ ದುಬಾರಿ ಶಿಕ್ಷಣ ಶುಲ್ಕ ಪ್ರತಿಭಟಿಸಿ
ವಿಧಾನಸೌಧದ ಮುಂದೆ SFI ಪ್ರದರ್ಶನ

ಜೀವನಾವಶ್ಯಕ ಕನಿಷ್ಠ ವೇತನ ಸಾವಿರದೈವತ್ತು ಏಕೆ ಕೇಳುತ್ತಿದ್ದೇವೆ?

ವಿ. ಜಿ. ಕೆ. ನಾಯರ್

ಕನಿಷ್ಠ ವೇತನ ತಿಂಗಳಿಗೆ ಒಂದು ಸಾವಿರದ ಐವತ್ತು ರೂಪಾಯಿಗಳಾಗ ಬೇಕೆಂದು ಒತ್ತಾಯಿಸಿ ದೆಹಲಿ ಸುತ್ತ ಮುತ್ತ ಆರಂಭವಾದ ಚಳುವಳಿ ಈಗ ದೇಶವ್ಯಾಪಿಯಾಗಿ ಹರಡಲಾರಂಭಿಸಿದೆ. ಕರ್ನಾಟಕದಲ್ಲಿಯೂ ಈ ಬೇಡಿಕೆಗಾಗಿ ಚಳುವಳಿಯನ್ನು ಬೆಳೆಸಲು ನಿರ್ಧರಿಸ ಲಾಗಿದ್ದು ಜೂನ್ 14 ರಂದು ಬೆಂಗಳೂರು, ಮಂಗಳೂರು, ಹಾಸನ ಮತ್ತು ಇತರ ಕಡೆಗಳಲ್ಲಿ ಈ ಚಳುವಳಿಯನ್ನು ಉದ್ಘಾಟಿಸಲಾಗಿದೆ.

ಮಾಸಿಕ ಕನಿಷ್ಠ ವೇತನ ಒಂದು ಸಾವಿರದ ಐವತ್ತು ರೂಪಾಯಿಗಳಿಗಿಂತ ಕಡಿಮೆಯಾಗಬಾರದೆಂದು ಯಾವ ಆಧಾರದಲ್ಲಿ ಕೇಳಲಾಗುತ್ತದೆ? ಕರ್ನಾಟಕ ರಾಜ್ಯ ಸರ್ಕಾರ ನಿಗದಿಮಾಡಿರುವ ಕನಿಷ್ಠ ವೇತನ ಕೇವಲ ಇದರ ಅರ್ಧದಷ್ಟು ಮಾತ್ರ ಇದೆ. ಹೀಗಿರುವಾಗ ನಾವು ಅದರ ಎರಡರಷ್ಟನ್ನು ಕೇಳಬಹುದಾ ಎಂಬ ಪ್ರಶ್ನೆಯು ಒಂದುಕಡೆ ಕೇಳಬರುತ್ತಿದೆ. ಇನ್ನೊಂದು ಕಡೆ ಈ ಒಂದು ಸಾವಿರದ ಐವತ್ತು ರೂಪಾಯಿ ಮಾಸಿಕ ಕನಿಷ್ಠ ವೇತನ ಏನೇನೂ ಸಾಲದು; ಇಷ್ಟರಿಂದ ಜೀವನ ನಡೆಸುವುದು ಸಾಧ್ಯವಿಲ್ಲ ಎಂಬ ವಾದವೂ ಕೇಳಿ ಬರುತ್ತದೆ. ಅಖಿಲ ಭಾರತ ಮಟ್ಟದಲ್ಲಿ ಒಂದು ಚಳುವಳಿಯನ್ನು ಬೆಳೆಸುವುದು ಈಗ ಅತ್ಯಗತ್ಯವಾಗಿರುವುದರಿಂದ ಬೇರೆ ಬೇರೆ ರಾಜ್ಯಗಳಲ್ಲಿ ಈಗಿರುವ ಕನಿಷ್ಠ ವೇತನದ ದರಗಳನ್ನು ಪರಿಗಣಿಸಬೇಕಾಗುತ್ತದೆ. ದೆಹಲಿಯಲ್ಲಿ ಈಗಾಗಲೇ ಪರಿಣಾಮಕಾರಿಯಾಗಿ ನಡೆಸಲಾದ ಚಳುವಳಿಯಲ್ಲಿ ಮೂಡಿಬಂದಿರುವ "ಸಾವಿರದ ಐವತ್ತು" ರೂಪಾಯಿಗಳ ಬೇಡಿಕೆಯನ್ನು ನಮ್ಮ ರಾಜ್ಯದಲ್ಲಿಯೂ ಅಳವಡಿಸುವುದು ಸೂಕ್ತವೆನಿಸುತ್ತದೆ. ವೇತನದ ಬಗ್ಗೆ ಸರ್ಕಾರದ ಧೋರಣೆ ಬಂಡವಾಳಶಾಹಿಗಳ ಧೋರಣೆಯಾಗಿದೆ. 1930 ರ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ರಚಿತವಾದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ 'ಜೀವನ ವೇತನ' (Living Wage) ದ ಹಕ್ಕು ಒಂದು ಮೂಲ ಭೂತ ಹಕ್ಕು. ಆದರೆ ಸ್ವಾತಂತ್ರ್ಯ ಬಂದ ನಂತರ ಮೂಲಭೂತ ಹಕ್ಕುಗಳ ಈ ಪಟ್ಟಿ ಹಿಂದಕ್ಕೆ ತಳ್ಳಲ್ಪಟ್ಟು ಸಂವಿಧಾನದ ರಾಷ್ಟ್ರೀಯ ಧೋರಣೆಯ ನಿರ್ದೇಶನಾ ತತ್ವ (Directive Principles of State Policy) ಗಳಲ್ಲಿ ಸೇರಿಸಲ್ಪಟ್ಟಿತು. ಹಲ್ಲಿಲ್ಲದ ಬಾಯಿಯಂತಿರುವ ಈ ರಾಷ್ಟ್ರೀಯ ಧೋರಣೆಯ ನಿರ್ದೇಶನಾ ತತ್ವಗಳಲ್ಲಿ 'ಜೀವನ ವೇತನದ' ಬಗ್ಗೆ ಹೀಗೆ ಹೇಳಲಾಗಿದೆ. ಕೃಷಿ ಕೂಲಿಕಾರರೂ ಸೇರಿದಂತೆ ಎಲ್ಲಾ ಕಾರ್ಮಿಕರಿಗೂ ಅವರ ಜೀವನ ಮಟ್ಟವನ್ನು ಸುಧಾರಿಸಲು ಮತ್ತು ಅವರ ಸಾಂಸ್ಕೃತಿಕ ಮಟ್ಟವನ್ನು ಉತ್ತಮ ಗೊಳಿಸಲು ಅಗತ್ಯವಾದ 'ಜೀವನ ವೇತನ'ವನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿರುತ್ತದೆ.

1950 ರಲ್ಲಿ ರಚಿತವಾದ ಸಂವಿಧಾನದ ಈ ನಿರ್ದೇಶನವು ಜಾರಿಯಾಗಲಿಲ್ಲ. ಈ ಬಗ್ಗೆ ಪರಿಶೀಲಿಸಿದ ಭಾರತ ಸರ್ಕಾರವು 'ನ್ಯಾಯ ವೇತನ' ಆಯೋಗ' ವನ್ನು ನೇಮಿಸಿತು. ವೇತನದ ಪ್ರಶ್ನೆಯನ್ನು ಪರಿಶೀಲಿಸಿದ ಆಯೋಗವು ಕಾರ್ಮಿಕರಿಗೆ 'ಜೀವನ ವೇತನ' ಕೊಡುವುದು ಆಗುವುದಿಲ್ಲ; ಲಾಭ ಇದ್ದಲ್ಲಿ ಅದರಲ್ಲಿ ಒಂದು ಪಾಲನ್ನು ಕಾರ್ಮಿಕರಿಗೆ ಕೊಡಬೇಕು ಎಂದು ಶಿಫಾರಸು ಮಾಡಿತು. ನ್ಯಾಯ ವೇತನ ಆಯೋಗದ ಶಿಫಾರಸುಗಳು ಕಾಗದದಲ್ಲೇ ಉಳಿದಿವೆ. ಆದರೆ ಜೀವನಕ್ಕೆ ಅವಶ್ಯವಾದ ವೇತನವನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದ್ದರೂ ಅದಕ್ಕಿಂತಲೂ ಕಡಿಮೆಯಾದ "ನ್ಯಾಯಯುತ ವೇತನ" (Just Wage) ಕ್ಕೆ ಸರ್ಕಾರ ಒಪ್ಪಿದಂತಾಯಿತು. 1957 ರಲ್ಲಿ ಸೇರಿದ 15ನೇ ಇಂಡಿಯನ್ ಲೇಬರ್ ಕಾನ್ಫರೆನ್ಸ್‌ನಲ್ಲಿ 'ಜೀವನಾವಶ್ಯಕ ವೇತನ' ಕೊಡಬೇಕು ಎಂಬುದನ್ನು ಒಪ್ಪಲಾಯಿತು. ಈ ಸಮ್ಮೇಳನದಲ್ಲಿ ಮಾಲೀಕರ ಪ್ರತಿನಿಧಿಗಳು, ಕಾರ್ಮಿಕರ ಪ್ರತಿನಿಧಿಗಳು, ; ಮತ್ತು ಸರ್ಕಾರದ ಪ್ರತಿನಿಧಿಗಳು ಇದ್ದರು.

ಜೀವನಾವಶ್ಯಕ ವೇತನಕ್ಕೆ (Need based minimum Wage) ಬದುಕಿನ ವೇತನ (Subsistence Wage) ಎಂದು ಕರೆಯಲಾಗಿದೆ. ಮನುಷ್ಯನು ಬದುಕಿರಲು, ಉತ್ಪಾದನೆ ಮತ್ತು ಪುನರುತ್ಪಾದನೆ ಮಾಡಲು ಅಗತ್ಯವಿರುವ ಕನಿಷ್ಠ ಆಹಾರ, ಬಟ್ಟೆ ಮನೆ ಮತ್ತು ಇತರ ಖರ್ಚನ್ನು ಲೆಕ್ಕ ಹಾಕಿ ಅಷ್ಟನ್ನಾದರೂ ಕಾರ್ಮಿಕರಿಗೆ ಕೊಡಬೇಕೆಂಬುದೇ ಅದರ ಅರ್ಥ. ಆದರೆ ಕನಿಷ್ಠ ವೇತನದ ಈ ತತ್ವವನ್ನು ಜಾರಿ ಮಾಡಲು ಸಹ ಭಾರತ ಸರ್ಕಾರದ ವಿಫಲವಾಗಿದೆ. ಜೀವನಾವಶ್ಯಕ ಕೂಲಿಯನ್ನು ಕೊಡದೆ ವ್ಯವಹಾರ ನಡೆಸಲು ಯಾವ ಉತ್ಪಾದನಾ ಅಥವಾ ವ್ಯಾಪಾರದ ಘಟಕಕ್ಕೂ ಹಕ್ಕಿರುವುದಿಲ್ಲ ಎಂದು ಭಾರತದ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದೆ. ಈ ತೀರ್ಪು ಸಹ ಅರಣ್ಯರೋದನವಾಗಿ ಉಳಿದಿದೆ. ಕಾರ್ಮಿಕ ವರ್ಗದ ಸಂಘಟಿತ ಹೋರಾಟದಿಂದ ಮಾತ್ರ ಈ ಪ್ರಶ್ನೆಯನ್ನು ಬಗೆಹರಿಸಲು ಸಾಧ್ಯ.

ಕನಿಷ್ಠ ವೇತನದ ಹೋರಾಟಕ್ಕೆ ಕಾರ್ಮಿಕರನ್ನು ತಯಾರುಮಾಡಲು ಸಹಾಯವಾಗಲೆಂದು ಜೀವನಾವಶ್ಯಕ ವೇತನವನ್ನು ಲೆಕ್ಕ ಹಾಕುವ ವಿಧಾನವನ್ನು ಒಂದು ಉದಾಹರಣೆಯೊಂದಿಗೆ ಇಲ್ಲಿ ಕೊಡಬಯಸುತ್ತೇನೆ. ಧಾರವಾಡದ ಒಂದು ಕಾರ್ಖಾನೆಯ ಕಾರ್ಮಿಕರಿಗೆ ಕೇಳಲಾದ ವೇತನ ಹೆಚ್ಚಳವನ್ನು ಔದ್ಯಮಿಕ ನ್ಯಾಯಾಧಿಕರಣದಲ್ಲಿ ಸಮರ್ಥಿಸಲು ನಾನು ತಯಾರಿಸಿದ ಲೆಕ್ಕಾಚಾರ ಇದು. 1987 ರಲ್ಲಿ ಇದನ್ನು ತಯಾರು ಮಾಡಿರುವುದರಿಂದ ಇದರಲ್ಲಿ ಅಂದಿನ ಹುಬ್ಬಳ್ಳಿ-ಧಾರವಾಡದ ಪೇಟೆ ಧಾರಣೆಗಳನ್ನು ಬಳಸಿಕೊಳ್ಳಲಾಗಿದೆ. ಹಾಗೆಯೇ ಆ ಪ್ರದೇಶದ ಜನರ ಆಹಾರ ಸಂಪ್ರದಾಯಗಳನ್ನು ಅನುಸರಿಸಲಾಗಿದೆ. ಈ ಲೆಕ್ಕಾಚಾರವನ್ನು ರಾಜ್ಯದ ಇತರ ಕಡೆಗಳಿಗೆ ಅಳವಡಿಸುವುದಾದರೆ ಆಯಾ ಪ್ರದೇಶದ ಜನಬಳಕೆಯ ವಸ್ತುಗಳನ್ನು ಮತ್ತು ಅವುಗಳ ಬೆಲೆಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯವರು ಬಿಳಿ ಜೋಳದ ಬದಲು ಅಕ್ಕಿಯನ್ನೂ ಬೆಂಗಳೂರು ಸೀಮೆಯವರು ರಾಗಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಹುದು. ಹಾಗೆಯೇ ಇತ್ತೀಚಿಗಿನ ಬೆಲೆಗಳ ಆಧಾರದಲ್ಲಿ ಪಟ್ಟಿಯನ್ನು ಸರಿಪಡಿಸಬಹುದು.

ಒಬ್ಬ ಸಾಮಾನ್ಯ ಕೆಲಸಗಾರನಿಗೆ ಕನಿಷ್ಠ 2800 ಕ್ಯಾಲರಿ ಆಹಾರ ಅಗತ್ಯ. ಇದರಲ್ಲಿ ಧವಸಧಾನ್ಯಗಳು 475 ಗ್ರಾಂ, ಬೇಳೆಕಾಳು 80 ಗ್ರಾಂ, ಹಸಿರು ತೊಪ್ಪಲು ಪಲ್ಲೆ 125ಗ್ರಾಂ, ಇತರ ಕಾಯಿಪಲ್ಲೆಗಳು 75ಗ್ರಾಂ, ಗೆಡ್ಡೆಗೆಣಸುಗಳು 100ಗ್ರಾಂ, ಹಣ್ಣುಗಳು 30ಗ್ರಾಂ, ಹಾಲು 200ಗ್ರಾಂ, ಎಣ್ಣೆ/ತುಪ್ಪ 40ಗ್ರಾಂ ಮತ್ತು ಸಕ್ಕರೆ/ಬೆಲ್ಲ 40ಗ್ರಾಂ.

ಇದು ಸಸ್ಯಾಹಾರಿಗೆ. ಮಾಂಸಾಹಾರಿಗೆ ಮಾಂಸ ಹಾಗೂ ಮೀನು 30ಗ್ರಾಂ ಮತ್ತು ಮೊಟ್ಟೆ 30ಗ್ರಾಂ. ಇದರ ಬದಲು ಆತನಿಗೆ ಬೇಳೆಯ ಕಾಳುಗಳು 65ಗ್ರಾಂ ಸಾಕಾಗಬಹುದು. ಹಾಲು 100ಗ್ರಾಂ ಸಾಕಾಗಬಹುದು.

ಇದರ ಪ್ರಕಾರ ಒಬ್ಬ ಸಾಮಾನ್ಯ ಕೆಲಸಗಾರನಿಗೆ ಒಂದು ದಿನದ ಆಹಾರಕ್ಕೆ ಕನಿಷ್ಠ ಖರ್ಚು:

ಅಕ್ಕಿ	200 ಗ್ರಾಂ. ರೂ.	0.90
ಬಿಳಿಜೋಳ	150 ಗ್ರಾಂ.	0.35
ಗೋಧಿ	125 ಗ್ರಾಂ.	0.45
	475	1.70
ತೊಗರಿ ಬೇಳೆ 40 ಗ್ರಾಂ.		
ಹೆಸರುಕಾಳು ಇತ್ಯಾದಿ 40 ಗ್ರಾಂ.		
ಹಸಿರು ಪಲ್ಲೆ		0.62
ಇತರ ಕಾಯಿಪಲ್ಲೆ		0.27
ಗೆಡ್ಡೆಗೆಣಸುಗಳು		0.35
ಹಣ್ಣುಗಳು		
ಹಾಲು		0.90
ಒಳ್ಳೆ ಎಣ್ಣೆ 25 ಗ್ರಾಂ.		1.35
ತುಪ್ಪ 10ಗ್ರಾಂ.		
ಕೊಬ್ಬರಿ ಎಣ್ಣೆ 5 ಗ್ರಾಂ.		
ಸಕ್ಕರೆ 30ಗ್ರಾಂ.		0.20
ಬೆಲ್ಲ 10ಗ್ರಾಂ.		0.05
ಒಟ್ಟು ರೂ.		7.12

ಮಾಂಸಾಹಾರಿಗೆ ಒಟ್ಟು ರೂ 8.00 ಆಗುತ್ತದೆ. ಸರಾಸರಿ ಲೆಕ್ಕ ತಗೊಂಡರೆ ಪ್ರತಿ ದಿನಕ್ಕೆ ಆಹಾರಕ್ಕೆ ತಲಾ ಖರ್ಚು ರೂ 7.56 ಅಂದರೆ ತಿಂಗಳಿಗೆ ತಲಾ ಖರ್ಚು ರೂ. 226.80

ಇದೇ ರೀತಿ ಬಟ್ಟೆಗಳು, ಒಟ್ಟು ಒಂದು ಗಂಡಸು, ಹೆಂಗಸು ಹಾಗೂ ಇಬ್ಬರು ಮಕ್ಕಳ ಕುಟುಂಬಕ್ಕೆ ಕನಿಷ್ಠ 66 ಮೀ. (72ಗಜ) ಬಟ್ಟೆ ಬೇಕು. ಗಂಡಸಿಗೆ 2 ಪ್ಯಾಂಟ್ (5ಮೀ) 2 ಶರ್ಟ (5ಮೀ), 2 ಪಂಚೆ (6ಮೀ) ಮತ್ತು ಇತರ ಬಟ್ಟೆ (6ಮೀ). ಹೆಂಗಸಿಗೆ 2 ಸೀರೆ (12ಮೀ) , ಇತರ ಬಟ್ಟೆ (10ಮೀ). ಇಬ್ಬರು ಮಕ್ಕಳಿಗೆ 4 ಹಾಫ್ ಪ್ಯಾಂಟ್ (6ಮೀ). 4 ಶರ್ಟ (5ಮೀ), ಇತರ ಬಟ್ಟೆಗಳು (11ಮೀ). ಇದರ ವಾರ್ಷಿಕ ಖರ್ಚು.

ಗಂಡಸಿಗೆ	ರೂ.ಪೈ
ಪ್ಯಾಂಟ್‌ಗಳು	200.00
ಶರ್ಟ‌ಗಳು	130.00
ಪಂಚೆಗಳು	70.00
ಇತರ ಬಟ್ಟೆ	48.00
ಹೆಂಗಸಿಗೆ	
ಸೀರೆಗಳು	160.00
ಇತರ	80.00
ಮಕ್ಕಳಿಗೆ	
ಹಾಫ್‌ಪ್ಯಾಂಟ್‌ಗಳು	240.00
ಶರ್ಟ‌ಗಳು	130.00
ಇತರ	88.00
ಒಟ್ಟು	1146.00
ತಿಂಗಳಿಗೆ ಸರಾಸರಿ	95.50

0.15ಕ್ಕೆ ಅಗತ್ಯ ಆಧಾರಿತ ಕನಿಷ್ಠ ತಿಂಗಳ ವೇತನವನ್ನು ಹೀಗೆ ಲೆಕ್ಕ ಹಾಕಬಹುದು.

ಸಾಮಾನ್ಯ ಕುಟುಂಬ

ಗಂಡ:	1 ಯುನಿಟ್
ಹೆಂಡತಿ:	0.8 ಯುನಿಟ್
2 ಮಕ್ಕಳು:	1.2 ಯುನಿಟ್
ಒಟ್ಟು	3.0 ಯುನಿಟ್

ಆಹಾರಕ್ಕೆ 3 ಯುನಿಟಿಗೆ	680.40
ಬಟ್ಟೆ - ಬರೆ	95.50
ಮನೆ ಬಾಡಿಗೆ	50.00
	825.90
ಇತರೆ ಖರ್ಚು 25%	206.48
ಒಟ್ಟು ರೂ.	1032.38

ರೂ. 1032.38 ನ್ನು ದಿನಗೂಲಿಯಾಗಿ ಲೆಕ್ಕ ಹಾಕಿದರೆ ರೂ. 39.70 ಆಗುತ್ತದೆ. ಅಂದರೆ ಹೆಚ್ಚು ಕಮ್ಮಿ ರೂ. 40/-

1987 ರಲ್ಲಿ ಈ ಲೆಕ್ಕಾಚಾರ ಮಾಡುವಾಗ ಗ್ರಾಹಕರ ಬೆಲೆ ಸೂಚ್ಯಂಕದ 752ರ ಮೇಲಿನ ಪ್ರತಿಯೊಂದು ಪಾಯಿಂಟಿಗೆ ರೂ 1.37 ತುಟ್ಟಿ ಭತ್ತೆ ನೀಡ ಬೇಕಾಗಿತ್ತು. ಇದನ್ನು ದಿನಕೂಲಿಗೆ ಅಳವಡಿಸಿದಾಗ ಪಾಯಿಂಟಿಗೆ ಕನಿಷ್ಠ 5 ಪೈಸೆ ಸಿಗಬೇಕಾಗುತ್ತದೆ. 1989 ರ ಸೂಚ್ಯಾಂಕವನ್ನು ಆಧರಿಸಿ ಲೆಕ್ಕ ಹಾಕಿದರೆ 848 ಪಾಯಿಂಟುಗಳಿಗೆ ಮಾಸಿಕ ವೇತನ ರೂ 12/77 ಆಗುತ್ತದೆ. ಹಾಗೆಯೇ ದಿನಗೂಲಿ ರೂ. 49.

ಈ ವಿವರಗಳನ್ನು ತಮ್ಮ ತಮ್ಮ ಪ್ರದೇಶದ ಈಗಿನ ಬೆಲೆಗಳ ಆಧಾರಗಳಲ್ಲಿ ಲೆಕ್ಕ ಹಾಕಿ ಕಾರ್ಮಿಕರಿಗೆ ವಿವರಣೆ ನೀಡಿದರೆ ನಾವು ಕೇಳುತ್ತಿರುವ ಜೀವನಾವಶ್ಯಕ ಕನಿಷ್ಠ ವೇತನ ಅದು ಹೇಗೆ ನ್ಯಾಯವಾಗಿದೆ ಎಂಬುದನ್ನು ಮನವರಿಕೆ ಮಾಡಲು ಸಾಧ್ಯವಾಗುವುದಲ್ಲದೆ ಕನಿಷ್ಠ ವೇತನಕ್ಕಾಗಿ ನಡೆಯಲಿರುವ ಚಳುವಳಿಯನ್ನು ಸಂಘಟಿಸಲು ಸಹಾಯವಾಗುದು.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ 1930 ರಲ್ಲಿ 'ಜೀವನ ವೇತನ' ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿತ್ತು. ಸ್ವಾತಂತ್ರ್ಯಾ ನಂತರ 1950 ರಲ್ಲಿ ಅದು ಸಂವಿಧಾನದ ನಿರ್ದೇಶಕ ಸೂತ್ರಗಳಿಗೆ ತಳ್ಳಲ್ಪಟ್ಟಿತು. 'ಜೀವನ ವೇತನ' ಕೆಳಕ್ಕಿಳಿದು "ನ್ಯಾಯ ಯುತ ವೇತನ" ವಾಯಿತು. ಅದೂ ಜ್ಯಾರಿಯಾಗಲಿಲ್ಲ. 1957 ರಲ್ಲಿ ಇದು ಇನ್ನೂ ಇಳಿದು 'ಜೀವನಾವಶ್ಯಕ ಕನಿಷ್ಠ ವೇತನ' ಅಥವಾ 'ಬದುಕಿನ ವೇತನ' ವಾಯಿತು. ಆದರೆ ಇದನ್ನು ಜಾರಿ ಮಾಡುವುದು ಭಾರತ ಸರ್ಕಾರಕ್ಕೆ ಆಗಿಲ್ಲ. ಸುಪ್ರೀಂ ಕೋರ್ಟಿನ ತೀರ್ಪಿಗೂ ಆಗಿಲ್ಲ. ಆದ್ದರಿಂದ ಕಾರ್ಮಿಕ ವರ್ಗದ ಹೋರಾಟ ಮಾತ್ರವೇ ಇದನ್ನು ಬಗೆಹರಿಸಬಲ್ಲುದು.

ಕನಿಷ್ಠ ವೇತನ, ಸೇವಾ ಸೌಲಭ್ಯ ಒತ್ತಾಯಿಸಿ ವಿಧಾನ ಸೌಧದೆದುರು ಧರಣಿ

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕರ ಸಂಘದ ಆಶ್ರಯದಲ್ಲಿ ಏಪ್ರಿಲ್ 25 ರಂದು ಹೋಟೆಲ್ ಕಾರ್ಮಿಕರಿಗೆ ಕನಿಷ್ಠ ಕೂಲಿ 1000 ರೂ ನಿಗದಿ ಪಡಿಸಬೇಕೆಂದು ಕಾರ್ಮಿಕರಿಗೆ ತುಟ್ಟಿ ಭತ್ಯ, ಇ. ಎಸ್. ಐ. ಉದ್ಯೋಗದ ಭದ್ರತೆ ಪ್ರಾವಿಡೆಂಟ್ ಫಂಡ್, ಕನಿಷ್ಠ ಕೂಲಿಯ ಪರಿಷ್ಕಾರ ಮತ್ತು ಹೋಟೆಲುಗಳಲ್ಲಿ ಶುಚಿತ್ವವನ್ನು ಕಾಪಾಡುವುದು ಹೀಗೆ ಇನ್ನೂ ಹಲವಾರು ಬೇಡಿಕೆಗಳಿಗೆ ಒತ್ತಾಯಿಸಿ ಸುಮಾರು 500 ಕ್ಕೂ ಹೆಚ್ಚು ಹೋಟೆಲ್ ಕಾರ್ಮಿಕರ ಪ್ರತಿನಿಧಿಗಳು ವಿಧಾನಸೌಧದ ಎದುರು ಒಂದು ದಿನದ ಉಪವಾಸ ಸತ್ಯಾಗ್ರಹವನ್ನು ನಡೆಸಿದರು. ಈ ಸತ್ಯಾಗ್ರಹವನ್ನು ಸಿ. ಐ. ಟಿ. ಯು. ರಾಜ್ಯ ಅಧ್ಯಕ್ಷರಾದ ಎಸ್.ಸೂರ್ಯನಾರಾಯಣ ರಾವ್‌ರವರು ಉದ್ಘಾಟಿಸಿದರು. ಅಸಂಘಟಿತ ಹೋಟೆಲ್ ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ಬೆಂಗಳೂರು ನಗರದ ಸಂಘಟಿತ ಕಾರ್ಮಿಕರ ಬೆಂಬಲವನ್ನು ಸಂಪೂರ್ಣವಾಗಿ ನೀಡುವುದಾಗಿ ಭರವಸೆಯನ್ನು ನೀಡಿದರು. ರಾಜ್ಯ ಸರ್ಕಾರದ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಯವರನ್ನು ಸಂಘದ ನಿಯೋಗವು ಭೇಟಿ ಮಾಡಿ ಹೋಟೆಲ್ ಕಾರ್ಮಿಕರ ಬೇಡಿಕೆಗಳ ಬಗ್ಗೆ ಮನವಿ ಪತ್ರವನ್ನು ಸಲ್ಲಿಸಿತು. ಕಾರ್ಮಿಕ ಕಾರ್ಯದರ್ಶಿಗಳು ಈ ಬೇಡಿಕೆಗಳನ್ನು ಕೂಡಲೇ ಪರಿಶೀಲಿಸುವುದಾಗಿ ಭರವಸೆ ನೀಡಿದರು. ಸಂಘದ ಉಪಾಧ್ಯಕ್ಷರುಗಳಾದ ಶ್ರೀ ಎ. ಆರ್. ಅಡವೀಶ್. ಶ್ರೀ ಸದಾಶಿವ, ಸಹ ಕಾರ್ಯದರ್ಶಿಗಳಾದ ಶ್ರೀ ಸಿ. ರಾಮಯ್ಯ, ಶ್ರೀ ಎಸ್. ಬಿ. ಉದಯ ಕುಮಾರ್ ಮತ್ತು ಖಜಾಂಚಿ ಶ್ರೀ ಅಯ್ಯಪ್ಪ ಅವರುಗಳು ನಿಯೋಗದಲ್ಲಿದ್ದರು.

ಕನಿಷ್ಟ ವೇತನ ಜಾರಿಗೆ ಆಗ್ರಹ

ರಾಮದುರ್ಗ ವಾಹನ ಚಾಲಕರು ಮತ್ತು ಸಹಾಯಕರು ಕನಿಷ್ಟ ವೇತನ ಜಾರಿಗೊಳಿಸುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಿ ಏಪ್ರಿಲ್ 1 ರಂದು ಒಂದು ದಿನದ ಯಶಸ್ವಿ ಮುಷ್ಕರ ನಡೆಸಿದರು. ಬೃಹತ್ ಮೆರವಣಿಗೆ ನಡೆಸಿ ತಹಸೀಲ್ದಾರ್ ರವರಿಗೆ ಮನವಿ ಅರ್ಪಿಸಿ ಸಭೆ ನಡೆಸಲಾಯಿತು. ಸಭೆಯಲ್ಲಿ ಸಂಘದ ಅಧ್ಯಕ್ಷ ವಿ.ಪಿ. ಕುಲಕರ್ಣಿ ಮತ್ತು ಎಸ್.ಬಿ. ಹಳ್ಳಿ ಮಾತನಾಡಿದರು. ಸೂಕ್ತ ಕ್ರಮ ಕೈ ಗೊಳ್ಳುವುದಾಗಿ ತಹಸೀಲ್ದಾರ್ ಆಶ್ವಾಸನೆ ನೀಡಿದರು.

ಮಾಲೀಕನ ಮೋಸ

ಕೋಲಾರದ ಜ್ಯೋತಿ ಹೋಂ ಇಂಡಸ್ಟ್ರೀಸ್‌ನ ಮೇನೇಜರ್ ಎಂ.ವಿ.ಭಟ್ ಮತ್ತು ಬೀಡಿ ಗುತ್ತಿಗೆದಾರ ಷೈಲ್ಯಾನ್ ಬಕಾಶ್‌ರವರು ಬೀಡಿ ಕೆಲಸಗಾರ ಅಕ್ತರ್ ಬೇಗಂ ಕೋಂಸಯದ್ ಸಾಬ್‌ರವರ 10.150.500 ರೂ. ಪ್ರಾವಿಡೆಂಟ್ ಫಂಡನ್ನು ಸುಳ್ಳು ಅರ್ಜಿ ಸಲ್ಲಿಸಿ ಕೋಲಾರ ಗ್ರಾಮೀಣ ಬ್ಯಾಂಕಿನಿಂದ ತೆಗೆದುಕೊಂಡು ಮೋಸ ಮಾಡಿರುವ ಪ್ರಕರಣ ವರದಿಯಾಗಿದೆ.

ಅಕ್ತರ್‌ಬೇಗಂ ತನ್ನ ಪ್ರಾವಿಡೆಂಟ್ ಫಂಡ್ ನೀಡಲು ಬ್ಯಾಂಕ್‌ಗೆ ಅರ್ಜಿಸಲ್ಲಿಸಿದಾಗ ಇದು ಬೆಳಕಿಗೆ ಬಂತು. ಬೀಡಿ ಕಾರ್ಮಿಕ ಅಕ್ತರ್ ಬೇಗಂಗೆ ದ್ರೋಹ ಬಗೆದು ದುರ್ವ್ಯವಹಾರದಲ್ಲಿ ತೊಡಗಿರುವ ಎಂ.ವಿ.ಭಟ್ ಹಾಗೂ ಷೈಲ್ಯಾನ್ ಬಕಾಶ್‌ರನ್ನು ಕೆಲಸದಿಂದ ವಜಾಗೊಳಿಸಿ ಇದರ ಬಗ್ಗೆ ಪೊಲೀಸ್ ತನಿಖೆ ನಡೆಸಬೇಕೆಂದು ಸಿ.ಐ.ಟಿ.ಯು ಒತ್ತಾಯಿಸಿದ್ದಾರೆ.

ಕೈಗಾ ಕುರಿತು ವಿಚಾರ ಸಂಕಿರಣ

ಕೈಗಾ ಅಣುಸ್ಥಾವರ , ತಕ್ಷಣ ಸ್ಥಾಪನೆಯಾಗಬೇಕೆಂದು ಒತ್ತಾಯಿಸುವ ವಿಚಾರ ಸಂಕಿರಣವೊಂದು ಸಿ. ಪಿ. ಐ. (ಎಂ) ಕೋಲಾರ ಜಿಲ್ಲಾ ಸಮಿತಿ ಆಶ್ರಯದಲ್ಲಿ ಏಪ್ರಿಲ್ 23 ರಂದು ಕೋಲಾರದ ಮೆಥೋಡಿಸ್ಟ್ ಹಾಲ್‌ನಲ್ಲಿ ನಡೆಸಲಾಯಿತು.

ಸಿ.ಪಿ.ಐ.(ಎಂ) ಮುಳಬಾಗಿಲು ಶಾಸಕ ಆರ್.ವೆಂಕಟರಾಮಯ್ಯನವರು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಕಾ॥ ಕೆ.ಎಂ. ವೆಂಕಟೇಶರವರು ಮೊದಲಿಗೆ ಸ್ವಾಗತಿಸುತ್ತಾ ರಾಜ್ಯದ ಬೀಕರ ವಿದ್ಯುತ್ ಕ್ಷಾಮಕ್ಕೆ ಕೊನೆ ಕಾಣಲು ಕೈಗಾ ಅಣುಸ್ಥಾವರ ಸ್ಥಾಪನೆ ಅತ್ಯಾವಶ್ಯಕವೆಂದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ್ದ ಪಕ್ಷದ ರಾಜ್ಯ ಸಕ್ರಟಾರಿಯೇಟ್ ಸದಸ್ಯರಾದ ಕಾ॥ ಜಿ.ವಿ. ಶ್ರೀರಾಮರೆಡ್ಡಿಯವರು ಪ್ರಪಂಚದ ಹೆಚ್ಚು ರಾಷ್ಟ್ರಗಳು ಅಣುಸ್ಥಾವರಗಳನ್ನು ಸ್ಥಾಪಿಸಿ ವಿದ್ಯುತ್‌ನಲ್ಲಿ ಅವಲಂಬಿಗಳಾಗಿವೆ. ಅಣುಸ್ಥಾವರಗಳಿಂದ ಉಂಟಾಗಬಹುದಾದ ಅಪಾಯದ ಕುರಿತು ಜನತೆಯಲ್ಲಿರುವ ಭೀತಿಯನ್ನು ಬಿಡಬೇಕೆಂದು ಮನವಿ ಮಾಡಿದರು.

ಪರಿಸರ ಪ್ರಶ್ನೆ ಬಂದಾಗ ಈ ದೇಶದಲ್ಲಿ ಸಾವಿರಾರು ಎಕರೆ ಜಮೀನನ್ನು ನೀಲಗಿರಿ ಬೆಳೆಯಲು ಸರ್ಕಾರ ಅನುಮತಿ ನೀಡಿದೆ ಇದರಿಂದ ಯಾವ ಪರಿಸರ ರಕ್ಷಣೆಯಾಗುತ್ತದೆ. ದ.ಕ. ಜಿಲ್ಲೆಯ ಹಂಚು, ಇಟ್ಟಿಗೆ ಕಾರ್ಖಾನೆಯ ಮಾಲೀಕರು ಅರಣ್ಯ ಕಡಿದು ಉರುವಲಾಗಿ ಉಪಯೋಗಿಸಲು ಅನುಮತಿ ನೀಡಿರುವ ಔಚಿತ್ಯವನ್ನು ಪ್ರಶ್ನಿಸಿ ಕಾಡು ನಾಶದಿಂದ ಪರಿಸರ ನಾಶವಾಗುವುದಿಲ್ಲವೆ ಎಂದು ಕೈಗಾ ಬೇಡ ಚಳುವಳಿಯ ಮುಂಚೂಣಿಯಲ್ಲಿರುವ ಶಿವರಾಮಕಾರಂತರನ್ನು ನಾವು ಪ್ರಶ್ನಿಸಬೇಕಾಗಿದೆ ಎಂದರು.

ಚರ್ಚೆಯಲ್ಲಿ ಪಾಲ್ಗೊಂಡು ಪ್ರಶ್ನೆ ಕೇಳಿದ ಎ.ಪ್ರಸಾದ್, ನಾರಾಯಣಸ್ವಾಮಿ, ಕರಿಯಪ್ಪ ಮುಂತಾದವರ ಪ್ರಶ್ನೆಗಳಿಂದ ಅವರು ಉತ್ತರ ನೀಡಿದರು. ಕೊನೆಯಲ್ಲಿ ಕಾ॥ ಎಂ. ಗೋಪಾಲ್ ವಂದರ್ನಣೆ ಮಾಡಿದರು.

ನಾಗರೀಕ ಸೌಲಭ್ಯ ಒತ್ತಾಯಿಸಿ ಪ್ರದರ್ಶನ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಕೆಲ ತಿಂಗಳಿಂದಲೂ ಕುಡಿಯುವ ನೀರು ಸರಬರಾಜಿನಲ್ಲಿ ಉಂಟಾಗಿರುವ ತೊಂದರೆ ಹಾಗೂ ನೀರಿನ ಕರ ಏರಿಕೆಯನ್ನು ಪ್ರತಿಭಟಿಸಿ ಸಿ.ಪಿ.ಐ.(ಎಂ) ಪಕ್ಷದ ನೇತೃತ್ವದಲ್ಲಿ ಮೇ 22 ರಂದು ನಗರದ ವಿವಿಧ ಬಡಾವಣೆಗಳ ನಾಗರೀಕರು ಹಾಗೂ ಅಧಿಕ ಮಹಿಳೆಯರು ಪಾಲ್ಗೊಂಡಿದ್ದ ಮೆರವಣಿಗೆ ಪಕ್ಷದ ಕಛೇರಿಯಿಂದ ಹೊರಟು ಪ್ರಮುಖ ಬೀದಿಗಳಲ್ಲಿ ಪ್ರದರ್ಶನ ನಡೆಸಿತು.

ನಗರಸಭೆಯ ಎದುರು ನಡೆದ ಸಾರ್ವಜನಿಕ ಸಭೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಕಾ॥ ಮಂಜುನಾಥ ಪುಲಕರ ಅಧ್ಯಕ್ಷತೆ ವಹಿಸಿದ್ದರು. ಕಾ॥ ಭೀಮರಾವ ಜಿರಟಗಿ ಮಾತನಾಡಿ ನೀರು ಸರಬರಾಜು, ಬೀದಿ ದೀಪ, ಪರಿಷ್ಕೃತ ಮನೆ ಮತ್ತು ನೀರಿನ ತೆರಿಗೆ ಕೈ ಬಿಡಬೇಕು. ಬಡವರ ಮನೆಗಳನ್ನು ಸಕ್ರಮಗೊಳಿಸಬೇಕೆಂದು ಅವರು ಒತ್ತಾಯಿಸಿ . ಬೇಡಿಕೆಗಳ ಮನವಿಯನ್ನು ಸಾರ್ವಜನಿಕರೆದುರು ಓದಿ ನಗರಸಭೆ ಆಯುಕ್ತರಿಗೆ ಅರ್ಪಿಸಲಾಯಿತು. ಕಾ॥ ಟಿ.ಎಸ್.ನಾಯಕ್ ಮಾತನಾಡಿ ನಮ್ಮ ನ್ಯಾಯ ಸಮ್ಮತ ಬೇಡಿಕೆ ಈಡೇರದಿದ್ದರೆ ಮುಂದೆ ತೀವ್ರ ರೀತಿಯ ಹೋರಾಟವನ್ನು ನಡೆಸಲು ನಾಗರೀಕರು ಸಿದ್ಧರಾಗಬೇಕೆಂದು ಕರೆನೀಡಿದರು.

ಪತ್ರಕರ್ತನ ಕೊಲೆ ಸಿ.ಓ.ಡಿ ತನಿಖೆಗೆ ಒತ್ತಾಯ

ಬಡವರ ಹಾಗೂ ಶೋಷಿತರ ದನಿಯಾಗಿ ಅವರ ಹೋರಾಟಗಳಿಗೆ ಸ್ಪಂದಿಸುತ್ತಿದ್ದ ಭದ್ರಾವತಿಯ ಬುವನ ವಾರ್ತೆ ಪತ್ರಿಕೆಯ ವರದಿಗಾರ ಕೆ. ಶೇಷಾದ್ರಿಯವರು ಏಪ್ರಿಲ್ 17 ರಂದು ಕೊಲೆಯಾಗಿರುವ ಕುರಿತು ಸಿ.ಓ.ಡಿ. ತನಿಖೆ ನಡೆಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಭದ್ರಾವತಿ ಸಮಿತಿಯು ರಾಜ್ಯಪಾಲರನ್ನು ಒತ್ತಾಯಿಸಿದೆ.

ಕೊಲೆಗಡುಕರನ್ನು ಪತ್ತೆ ಮಾಡದ ಪೋಲೀಸ್ ನಿರ್ಲಕ್ಷತನವನ್ನು ಖಂಡಿಸಿ ಕೊಲೆಯ ಹಿಂದಿರುವ ಹಿತಾಸಕ್ತಿಗಳನ್ನು ಕೂಡಲೇ ಬಯಲಿಗೆಳೆಯಬೇಕೆಂದು ಪಕ್ಷ ಒತ್ತಾಯಿಸಿದೆ. ಭದ್ರಾವತಿಯ ಎಲ್ಲಾ ಸಾಮೂಹಿಕ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ಶೇಷಾದ್ರಿಯವರು ಬಡ ರೈತರ ಕುಟುಂಬಕ್ಕೆ ಸೇರಿದವರಾಗಿದ್ದಾರೆಂದು ತಿಳಿಸಿ ಪಕ್ಷ ತನ್ನ ತೀವ್ರ ಸಂತಾಪ ಸೂಚಿಸಿದೆ.

ಗೌರವ ಶಿಕ್ಷಕರ ಉಪವಾಸ ಸತ್ಯಾಗ್ರಹ

ಮಂಡಲ ಪಂಚಾಯ್ತಿ ಗೌರವ ಶಿಕ್ಷಕರ ಸಂಘಟದ ಗುಲ್ಬರ್ಗಾ ಜಿಲ್ಲೆ ಸುರಪುರ ತಾಲೋಕು ಸಮಿತಿ ಆಶ್ರಯದಲ್ಲಿ ತಮ್ಮನ್ನು ಜಿಲ್ಲಾ ಪರಿಷತ್ ಗೌರವ ಶಿಕ್ಷಕರನ್ನಾಗಿ ಮಾಡಿ, ಸಮಾನ ದುಡಿಮೆಗೆ ಸಮಾನ ವೇತನ ಹಾಗೂ ಉದ್ಯೋಗ ಖಾಯಂ ಗೊಳಿಸಿ ಸೇವಾ ಸೌಲಭ್ಯಗಳನ್ನು ನೀಡಬೇಕೆಂದು ಒತ್ತಾಯಿಸಿ. ಮೇ 16 ರಿಂದ ಸಹಾಯಕ ಶಿಕ್ಷಣಾಧಿಕಾರಿ ಕಛೇರಿ ಎದುರು ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಲಾಗಿದೆ.

ಅಂದು ಸುಮಾರು 250 ಮಂದಿ ಶಿಕ್ಷಕರು ಸುರಪುರದಲ್ಲಿ ಮೆರವಣಿಗೆ ನಡೆಸಿ ಎ.ಇ.ಓ. ರವರಿಗೆ ಮನವಿ ಅರ್ಪಿಸಿದರು. ನಂತರ ನಡೆದ ಸಭೆಯ ನ್ನುದ್ದೇಶಿಸಿ ನ್ಯಾಯವಾದಿ ಜೆ. ಅಗಸ್ಟೀನ, ಎಸ್.ಎಫ್.ಐ. ಜಿಲ್ಲಾ ಅಧ್ಯಕ್ಷ ಚನ್ನಬಸವ ರೆಡ್ಡಿ, ಸಂಘದ ಪ್ರಧಾನ ಕಾರ್ಯದರ್ಶಿ ಬಸವರಾಜಯಡವಳ್ಳಿ, ಮುಂತಾದವರು ಮಾತನಾಡಿದರು. ಶಿಕ್ಷಣಾಧಿಕಾರಿಯವರು ಗೌರವ ಶಿಕ್ಷಕರನ್ನು ಮುಂದುವರೆಸುವ ಭರವಸೆ ನೀಡಿದರು.

ರೈತ ಸಂಘದ ಹೋರಾಟಗಳು

ಉಡುಪಿ ತಾಲೋಕು ಕೃಷಿ ಕಾರ್ಮಿಕರ ಸಂಘದ ನೇತೃತ್ವದಲ್ಲಿ, ತಾಲೋಕಿನ ಬಡ ರೈತರಿಗೆ ಹಸಿರು ಕಾರ್ಡ ನೀಡುವಂತೆ ಮತ್ತು ಕನಿಷ್ಠ ಕೂಲಿ ಜಾರಿಗೊಳಿಸಬೇಕೆಂದು ಅಕ್ರಮಣ ಭೂಮಿಯನ್ನು ಸಕ್ರಮಗೊಳಿಸುವಂತೆ ದಂಡ ಶುಲ್ಕ ತಡೆಹಿಡಿಯುವಂತೆ ಜನತೆಯನ್ನು ಜಾಗೃತಿಯಂಟು ಮಾಡಿ ಅವರನ್ನು ಹೋರಾಟದಲ್ಲಿ ಅಣಿನೆರೆಸಲು ಪ್ರಚಾರ ಸಭೆಗಳನ್ನು ಸಂಘಟಿತವಾಯಿತು.

ತಾಲೋಕು ಕೃಷಿ ಕಾರ್ಮಿಕರ ಸಂಘದ ವಿಸ್ತೃತ ಸಭೆ ಜೂನ್ 1ರಂದು ಕಾ॥ ಡೇವಿಡ್ ಕರ್ಕಡ್ ರ ಅಧ್ಯಕ್ಷತೆಯಲ್ಲಿ ಜರುಗಿ ಈ ಪ್ರಚಾರ ಸಭೆಗಳನ್ನು ಸಂಘಟಿಸಲು ನಿರ್ಧರಿಸಲಾಗಿತ್ತು.

ಜೂನ್ 3 ರಂದು ಬೈಲೂರು ಗ್ರಾಮದ ಇಂದಿರಾನಗರದಲ್ಲಿ 4 ರಂದು ಕೊರಂಗ್ರಪಾಡಿಯಲ್ಲಿ 5 ರಂದು ಕೊಡವೂರು ಗ್ರಾಮದ ಮೂರು ಬೆಟ್ಟುಗಳಲ್ಲಿ ನಡೆದ ಸಭೆಗಳಲ್ಲಿ ರೈತ - ಕೃಷಿ ಕೂಲಿಗಾರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಜೂನ್ 12 ರಂದು ಬೈಲೂರು ಮಂಡಲ ಪಂಚಾಯ್ತಿ ಹಾಗೂ 13ರಂದು ನಿಡಂಬೂರು ಪಂಚಾಯ್ತಿ ಕಛೇರಿಗಳ ಮುಂದೆ ನಡೆದ ಪ್ರತಿಭಟನಾ ಪ್ರದರ್ಶನಗಳು. ಯಶಸ್ವಿಯಾಯಿತು. ತಾಲೋಕು ತಹಸೀಲ್ದಾರ್‌ರವರಿಗೆ ಬೈಲೂರು ಮಂಡಲ ಪ್ರಧಾನರ ಮೂಲಕ ಮನವಿ ಅರ್ಪಿಸಲಾಯಿತು. ಕಾ॥ ಡೇವಿಡ್ ಎ. ಕರ್ಕಡ, ಸಾಧು ಅಮೀನ್, ದೋಗು ಸುವರ್ಣ, ಸಂಜೀವ ನಾಯಕ್, ಗುರುರಾಜ್ ಸೆಟ್ಟಿಗಾರ್, ಫೆಡ್ರಿಕ್ ಸೋನ ಕೆ. ಸುಜೀವ ಮತ್ತು ಮಹಿಳಾ ಮುಖಂಡರುಗಳು ಸಭೆಗಳಲ್ಲಿ ಪಾಲ್ಗೊಂಡುಮಾತನಾಡಿದರು.

ಸಿರಸಿ ತಾ॥ ಸಮಾವೇಶ

ಕರ್ನಾಟಕ ಪ್ರಾಂತ ರೈತ ಸಂಘದ ಶಿರಸಿ ಘಟಕದ ನೇತೃತ್ವದಲ್ಲಿ ರೈತ - ಕೃಷಿ ಕೂಲಿಗಾರರ ಸಮಾವೇಶ ಕಾ॥ ಎಂ.ಎಸ್. ಧಾರೇಶ್ವರರ ಅಧ್ಯಕ್ಷತೆಯಲ್ಲಿ ಜೂನ್ 2 ರಂದು ಬಂಡ್ಲದಲ್ಲಿ ಜರುಗಿತು. ರಾಜ್ಯ ಉಪಾಧ್ಯಕ್ಷ ಕಾ॥ ಎಸ್.ಎಚ್. ಕಷ್ಟಣ್ಣನವರು ಮಾತನಾಡಿದರು.

ಜೂನ್ 3 ರಂದು ರೈತ ಸಂಘದ ಕಛೇರಿಯಲ್ಲಿ ಉತ್ತರ ಕನ್ನಡ ಜಿಲ್ಲಾ ಸಮಿತಿ ಸಭೆ ಜರುಗಿತು. ಎನ್.ಎಲ್. ಉಪಾಧ್ಯಾಯರ ನಿಧನಕ್ಕೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ಜಿಲ್ಲಾ ಸಮಿತಿಯನ್ನು ಪುನರ್ ರಚಿಸಲಾಯಿತು. ಮಧ್ಯಾಹ್ನ 3 ಗಂಟೆಗೆ ಪೂರ್ವಭಾಗದ ಹುಸ್ರಿಯಲ್ಲಿ ರೈತ - ಕೃಷಿ ಕೂಲಿಗಾರರ ಸಮಾವೇಶ ಜರುಗಿ ಗ್ರಾಮ ಸಮಿತಿ ರಚಿಸಲಾಯಿತು.

ವಿವಿಧ ಕಾರ್ಮಿಕ ಸಂಘಗಳ ಧರಣಿ

ಹುಬ್ಬಳ್ಳಿ-ಧಾರವಾಡ ನಗರದ ವಿವಿಧ ಕಾರ್ಮಿಕ ಸಂಘಗಳು ತಮ್ಮ ಬೇಡಿಕೆಗಳನ್ನು ಒತ್ತಾಯಿಸಿ ಜೂನ್ 15ರಿಂದ ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಯ ಎದುರು ಧರಣಿ ನಡೆಸಲು ಜೂನ್7 ರಂದು ಜರುಗಿದ ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಸಿ.ಐ.ಟಿ.ಯು ರಾಜ್ಯ ಸಮಿತಿ ಸದಸ್ಯ ಕಾ॥ ವಿ.ಎಂ. ಪೂಜಾರ ತಿಳಿಸಿದ್ದಾರೆ.

ಯುನಿವರ್ಸಲ್, ಪ್ರಿಸಿಜನ್ ಟೂಲ್ಸ್, ಯುನಿವರ್ಸಲ್ ಕನ್ವೆಯರ್ಸ್, ಪಿಸ್ತೂಲ ಬೀಡಿ, ಟೈವಾಂಕ, ಎಲ್ಲೇಣಾ ಕಂಪನಿಗಳ ಕೆಲಸಗಾರರ ನ್ಯಾಯ ಸಮ್ಮತ ಬೇಡಿಕೆಗಾಗಿ ನಡೆಯುವ ಈ ಧರಣಿ ಕಾರ್ಯಕ್ರಮ ಈಗಾಗಲೇ ನಗರದಲ್ಲಿರುವ ಔದ್ಯಮಿಕ ಅಶಾಂತಿಯನ್ನು ಮತ್ತಷ್ಟು ಕೆಡಿಸುವ ಮೊದಲೇ ಕಾರ್ಮಿಕರ ಸಮಸ್ಯೆ ಪರಿಹಾರಕ್ಕಾಗಿ ಆಯುಕ್ತರು ಮಧ್ಯಪ್ರವೇಶ ಮಾಡಿ ಬಗೆಹರಿಸಬೇಕೆಂದು ಅವರು ಒತ್ತಾಯಿಸಿದ್ದಾರೆ.

ಅತ್ಯಾಚಾರಿಗಳ ಬಂಧನಕ್ಕೆ ಒತ್ತಾಯ

ಕೊಡಗು ಜಿಲ್ಲೆಯ ಸಿದ್ಧಾಪುರದಲ್ಲಿ ಊಡುಗದ್ದೆಯಲ್ಲಿ ವಾಸವಾಗಿರುವ ಬಡ ಕೃಷಿ ಕಾರ್ಮಿಕರ ಮೇಲೆ ಇತ್ತೀಚೆಗೆ ಕೆಲ ಸಮಾಜ ಘಾತುಕರು ಅತ್ಯಾಚಾರವೆಸಗಿರುವ ಘಟನೆಯನ್ನು ಡಿ.ವೈ.ಎಫ್.ಐ. ತೀವ್ರವಾಗಿ ಖಂಡಿಸಿ ಆರೋಪಿಗಳು ಜನರೆದುರೆ ಓಡಾಡುತ್ತಿದ್ದರು ಅವರನ್ನು ಬಂಧಿಸದ ಪೋಲೀಸ್ ನೀತಿಯನ್ನು ಖಂಡಿಸಿದೆ. ಆರೋಪಿಗಳನ್ನು ಕೂಡಲೇ ಬಂಧಿಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ಅಕ್ರಮ ಸುಂಕ ವಸೂಲಿ ವಿರುದ್ಧ ಪ್ರದರ್ಶನ

ಸಿದ್ಧಾಪುರದ ಮಂಡಲ ಪಂಚಾಯ್ತಿ ಸಂತೆ ಸುಂಕ ವಸೂಲಿಯನ್ನು ಖಾಸಗಿ ವ್ಯಕ್ತಿಗೆ ನೀಡುವುದರ ಮೂಲಕ ಆ ವ್ಯಕ್ತಿಗೆ ತನಗಿಷ್ಟ ಬಂದ ಹಾಗೇ ಜನರಿಂದ ಬಲಾತ್ಕಾರದಿಂದ ಹಣ ವಸೂಲಿ ಮಾಡಲು ಇಲ್ಲಿನ ಮಂಡಲದ ಅಧ್ಯಕ್ಷರು ಶಾಮೀಲಾಗಿದ್ದಾರೆ. ಜನರ ಕುಡಿಯುವ ನೀರು, ಶೌಚ್ಯಾಲಯ ಸೌಲಭ್ಯದ ಕುರಿತು ನಿರ್ಲಕ್ಷತನ ತೋರಿದ ಮಂಡಲದ ವಿರುದ್ಧ ಏಪ್ರಿಲ್ 16 ರಂದು ಡಿ. ವೈ. ಎಫ್. ಐ. ಕಾರ್ಯಕರ್ತರು ಪ್ರದರ್ಶನ ನಡೆಸಿ ಧರಣಿ ನಡೆಸಿದರು. ಸಂತೆ ದರ ಇಳಿಸುವ, ಕುಡಿಯುವ ನೀರಿನ ಸಮಸ್ಯೆ, ಶೌಚ್ಯಾಲಯ ದುರಸ್ಥಿ ಮಾಡಿಸುವುದಾಗಿ ಮಂಡಲ ಪ್ರಧಾನರು ಆಶ್ವಾಸನೆ ಇತ್ತರು.

ಅಧ್ಯಯನ ಶಿಬಿರ

ಆಳಂದ ತಾಲೋಕಿನ ಕುದುಮೂಡ ಗ್ರಾಮ ಸಿ.ಪಿ.ಐ. (ಎಂ) ಘಟಕ ಏಪ್ರಿಲ್ 10 -11 ರಂದು ಅಂಬಲಗಾದಲ್ಲಿ ಪಕ್ಷದ ಅಧ್ಯಯನ ಶಿಬಿರವನ್ನು ನಡೆಸಿತು. ರಾಜ್ಯ ಸಮಿತಿ ಸಕ್ರಟಾರಿಯೇಟ್ ಸದಸ್ಯರಾದ ಕಾ॥ ಎನ್.ಕೆ. ಉಪಾಧ್ಯಾಯರು ಶಿಬಿರದಲ್ಲಿ ಪಾಲ್ಗೊಂಡು ಉಪನ್ಯಾಸ ನೀಡಿದರು. ಗ್ರಾಮದ ಹಾಗೂ ಸುತ್ತಲ ಜನರು ಈ ಶಿಬಿರ ಯಶಸ್ವಿಯಾಗಲು ಶ್ರಮಿಸಿದ ಪಕ್ಷದ ಅಭಿಮಾನಿಗಳು, ಹರಿಜನ - -ಗಿರಿಜನರನ್ನು ಪಕ್ಷದ ಘಟಕ ಅಭಿನಂದಿಸಿದೆ ಎಂದು ಕಾ॥ ಬಾಬುರಾವ ಸೊಗಾಡರವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಶ್ರದ್ಧಾಂಜಲಿ

ಸ್ವಾತಂತ್ರ್ಯ ಹೋರಾಟಗಾರ, ರಾಜ್ಯದಲ್ಲಿ ಕಮ್ಯೂನಿಸ್ಟ್ ಚಳುವಳಿ ಕಟ್ಟಿ ಬೆಳೆಸಿ ಹತ್ತಾರು ವರ್ಷಗಳ ಕಾಲ ಮುನ್ನಡೆಸಿದ ರೈತ - ಕಾರ್ಮಿಕರ ಹೋರಾಟಗಳಿಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ನೀಡಿದ ಹಿರಿಯ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ನಾಯಕ ಕಾ॥ ಎನ್. ಎಲ್.ರ ನಿಧನಕ್ಕೆ ಸಿ.ಪಿ.ಐ. (ಎಂ) ಉಡುಪಿ ತಾಲೋಕು ಸಮಿತಿ ತೀವ್ರ ಸಂತಾಪ ಸೂಚಿಸಿ, ಶ್ರದ್ಧಾಂಜಲಿ ಅರ್ಪಿಸಿದೆ.

ಪ್ರಚಾರಮಾಧ್ಯಮ ಕುರಿತು ವಿಚಾರ ಸಂಕಿರಣ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಕಲಾಸಿಪಾಳ್ಯಂ ಘಟಕವು ದಿನಾಂಕ 18.4.89ರಂದು ವಿಶ್ವೇಶ್ವರಪುರಂನಲ್ಲಿರುವ ಶ್ರೀ.ವಾಸವಿ ಧರ್ಮಶಾಲಾದಲ್ಲಿ 'ಪ್ರಚಾರ ಮಾಧ್ಯಮ ಮತ್ತು ಯುವಜನ' ಹಾಗೂ ಭಾಷೆ ಮತ್ತು ಯುವಜನ ಎಂಬ ವಿಷಯದ ಕುರಿತು ವಿಚಾರ ಸಂಕಿರಣ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿತು.

ವಿಚಾರ ಸಂಕಿರಣವನ್ನು ಕುರಿತು ತಮಿಳುನಾಡಿನ ಪ್ರಗತಿ ಪರ ಬರಹಗಾರರ ಸಂಘದ ಸದಸ್ಯರಾದ ಶ್ರೀ ಬಿ. ಕೃಷ್ಣಕುಮಾರ್ ಹಾಗೂ ಡಿ.ವೈ.ಎಫ್.ಐನ ರಾಜ್ಯ ಖಜಾಂಚಿ ಹಾಗೂ ಜಿಲ್ಲಾ ಕಾರ್ಯದರ್ಶಿ ಶ್ರೀ ಶಿವಶಂಕರ್ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾರ್ಮಿಕ ಮುಖಂಡರಾದ ಶ್ರೀ ಪಿ.ಕೆ. ಸುಬ್ರಮಣಿ ವಹಿಸಿದ್ದರು. ಕಾರ್ಯಕ್ರಮದ ಸ್ವಾಗತ ಹಾಗೂ ವಂದನಾರ್ಪಣೆಯನ್ನು ಶ್ರೀ.ಎ.ಎಂ.ರವೀಚಂದ್ರನ್ ಮತ್ತು ಶ್ರೀ ಬಿ. ಮಹೇಶರ್ ಅವರು ಕ್ರಮವಾಗಿ ನಡೆಸಿದರು. ಸಂಚಾಲಕಿ S.R. ಲೀಲಾವತಿ ಮೊದಲಾದವರು ಸಂಘಟನೆ ಬಗ್ಗೆ ವಿವರಿಸಿದರು. ಘಟಕ ಅಧ್ಯಕ್ಷರಾದ ರಘು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಕೃಷ್ಣರವರು ಎಲ್ಲರನ್ನು ಸ್ವಾಗತಿಸಿದರು.

ಮಹಿಳಾ ಸಂಘಟನೆ- ಘಟಕ ರಚನೆ

ದ.ಕ ಜಿಲ್ಲೆಯ ಕುಂದಾಪುರ ನಗರದ ಚರ್ಚ್‌ರೋಡ್ ಪ್ರದೇಶದಲ್ಲಿ 23-5-89 ರಂದು ಸೇರಿದ್ದ ಮಹಿಳೆಯರ ಸಭೆಯಲ್ಲಿ ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾಸಂಘಟನೆ (ಎ.ಐ.ಡಿ. ಡಬ್ಲ್ಯು.ಎ)ಯ ಶಾಖೆಯನ್ನು ರಚಿಸಲಾಯಿತು. ಪ್ರದೇಶದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಎ.ಐ.ಡಿ. ಡಬ್ಲ್ಯು.ಎ. ಕುಂದಾಪುರ ತಾಲ್ಲೂಕು ಸಂಚಾಲಕಿ ಎಸ್.ಆರ್. ಲೀಲಾವತಿಯವರು ಸಭೆಯಲ್ಲಿ ಸಂಘಟನೆಯ ಮಹತ್ವವನ್ನು ವಿವರಿಸಿದರು.

ಘಟಕದ ಸಂಚಾಲಕಿಯರಾಗಿ ಶ್ರೀಮತಿ ಶಾಂತನಾರಾಯಣ ಮತ್ತು ಸಹ ಸಂಚಾಲಕಿಯಾಗಿ ಸುಂದರಿ ಹಾಗು ಇತರೆ ಏಳು ಜನರಿರುವ ಸಂಘಟನಾ ಸಮಿತಿಯನ್ನು ರಚಿಸಲಾಯಿತು.

ಡಿ.ವೈ.ಎಫ್.ಐ ಅಧ್ಯಯನ ಶಿಬಿರ

ದ.ಕ. ಜಿಲ್ಲೆಯ , ಕುಂದಾಪುರ ತಾಲೂಕಿನ ಬಿಜೂರು ಗ್ರಾಮದಲ್ಲಿ ಮೇ 24 ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಅಧ್ಯಯನ ಶಿಬಿರ ನಡೆಯಿತು.

ಡಿ.ವೈ.ಎಫ್.ಐ. ರಾಜ್ಯ ಸಮಿತಿ ಸಹಕಾರ್ಯದರ್ಶಿ ಆರ್ ಉದಯಕುಮಾರ್ [illegible]

ಉಪನ್ಯಾಸಕರಿಗೆ ಬೆಂಬಲ

ಕಸ್ತೂರ್‌ಬಾ ಮೆಡಿಕಲ್ ಕಾಲೇಜ್‌ನಲ್ಲಿ ಹಲವಾರು ವರ್ಷಗಳು ಉಪನ್ಯಾಸಕರಾಗಿ ದುಡಿಯುತ್ತಿದ್ದ ಶ್ರೀಯುತ ನರೇಂದ್ರ ನಾಯಕ್‌ರವರನ್ನೂ ತೆಗೆದು ಶಿಕ್ಷಕೇತರ ಸಿಬ್ಬಂಧಿಯಾಗಿ ವರ್ಗಾವಣೆ ಮಾಡಿದ ಆದೇಶವನ್ನೂ ಪ್ರಿನ್ಸಿಪಾಲರು ನೀಡಿರುವುದನ್ನೂ ಎಸ್.ಎಫ್.ಐ. ಖಂಡಿಸಿದೆ.

ಕಾಲೇಜು ಸೇವಾ ನಿಯಮಗಳನ್ನೂ ಗಾಳಿಗೆ ತೂರಿ ಕಾನೂನು ಬಾಹಿರ ಸ್ವಜಾಪ್ರಭುತ್ವ ವಿರೋಧಿ ಕ್ರಮಗಳನ್ನು ಖಂಡಿಸಿ ಆದೇಶವನ್ನೂ ಹಿಂತೆಗೆದು ಕೊಳ್ಳಬೇಕೆಂದು ಒತ್ತಾಯಿಸಿದೆ.

ನಾಗರಿಕ ಸೌಲಭ್ಯಕ್ಕೆ ಡಿ.ವೈ.ಎಫ್.ಐ. ಒತ್ತಾಯ

ಕುಂದಾಪುರದ ಚರ್ಚ್ ರಸ್ತೆ. ಪ್ರದೇಶದ ಜನತೆಗೆ ಬಾಧಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ, ಬೀದಿ ದೀಪ, ರಸ್ತೆ ದುರಸ್ತಿ, ಅಂಗನವಾಡಿ ಕೇಂದ್ರಕ್ಕೆ ಸ್ವಂತ ಕಟ್ಟಡ ಸೌಲಭ್ಯ ಒತ್ತಾಯಿಸಿ ಹೋರಾಟ ನಡೆಸಲು ಜೂನ್ 4 ರಂದು ನಡೆದ ಡಿ.ವೈ.ಎಫ್.ಐ. ಸರ್ವಸದಸ್ಯರ [illegible]

ರಾಜ್ಯ ಡಿ.ವೈ.ಎಫ್.ಐ. ಸಹ ಕಾರ್ಯದರ್ಶಿ ಕಾ॥ ನಾರಾಯಣಾಚಾರ್, ತಾಲೋಕು ಅಧ್ಯಕ್ಷ, ವೆಂಕಟೇಶ ಕೋಣಿ ಕಾರ್ಯದರ್ಶಿ ಕಾ॥ ನಾರಾಯಣಾಚಾರ್, ಮಹಿಳಾ ಸಂಘಟನೆ ಸಂಚಾಲಕಿ ಎಸ್.ಆರ್. ಲೀಲಾವತಿ ಸಭೆಯಲ್ಲಿ ಮಾತನಾಡಿದರು. [illegible]

ಸುಧಾಕರ ಟೈಲರ್(ಅಧ್ಯಕ್ಷ) ಶ್ರೀನಿವಾಸ್, ಎಸ್.ಆರ್. ಲೀಲಾವತಿ (ಉಪಾಧ್ಯಕ್ಷರು) ಕೆ.ಸುಧಾಕರ, ಕೆ. ಸುರೇಶ್, (ಸಹ ಕಾರ್ಯದರ್ಶಿಗಳು) ಎಂ. ಶೇಖರ್ (ಕಾರ್ಯದರ್ಶಿ) ವಸಂತ (ಖಜಾಂಚಿ) ಯವರನ್ನುಗಳನ್ನು ಆಯ್ಕೆ ಮಾಡಲಾಯಿತು. [illegible] ಕಾರ್ಯದರ್ಶಿಯಾಗಿ ಕಾ॥ ಚಂದ್ರ ಸಹ ಕಾರ್ಯದರ್ಶಿಯಾಗಿ ಎಲ್ [illegible]

ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಮಾತು ಪ್ರಾಮಾಣಿಕವಾಗಿದ್ದರೆ

ಸರ್ಕಾರಿಯಾ ಆಯೋಗ ತೋರಿದ ಪರ್ಯಾಯವೇಕೆ ಬೇಡ?

ಎಲ್ಲರಿಗೂ ತಿಳಿದಿರುವಂತೆ ಕ್ರಾಂತಿ ಎರಡು ರೀತಿಯದ್ದಿರಲು ಸಾಧ್ಯ- ಬಲಪಂಥದಿಂದ ಜನತೆಯ ವಿರುದ್ಧ ಕ್ರಾಂತಿ ಅಥವಾ ಜನತೆಯ ಆಳುವ ವರ್ಗಗಳ ವಿರುದ್ಧ ಕ್ರಾಂತಿ. ಇದು ಜನತೆಯ ವಿರುದ್ಧ ರಾಜೀವ ಗಾಂಧಿ ಕೂಟದ ಕ್ರಾಂತಿ ಎಂದು ಕಾಂಗ್ರೆಸಿಗರು ಒಪ್ಪುವುದಾದರೆ ಅವರು ಅದೊಂದು "ಕ್ರಾಂತಿಕಾರೀ ಕ್ರಮ" ಎನ್ನುವುದು ಸಂಪೂರ್ಣ ಸರಿ. ಯಾಕೆಂದರೆ ಭಾರತದ ಒಕ್ಕೂಟ ಸಂವಿಧಾನವನ್ನು ತಲೆಕೆಳಗಾಗಿ ಸುವುದು, ಜನತೆ ಇದುವರೆಗೆ ಅನುಭವಿಸಿದ್ದ ಅಧಿಕಾರಗಳನ್ನು ಅವರಿಂದ ಕಿತ್ತುಕೊಳ್ಳುವುದು- ಇದು ಈ ಮಸೂದೆಯ ಹಿಂದಿರುವ ಲೆಕ್ಕಾಚಾರ.

ನಮ್ಮ ಸಂವಿಧಾನದ ಚೌಕಟ್ಟು ಕೆಲವು ಏಕಘಟಕ ಅಂಶಗಳನ್ನು ಒಳಗೊಂಡಿದ್ದರೂ ಒಕ್ಕೂಟ ಸ್ವರೂಪದ್ದು. ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಶಾಸಕಾಂಗ ಮತ್ತು ಆಡಳಿತ ಘಟಕಗಳ ಪಾತ್ರ, ಕೆಲಸ, ಅಧಿಕಾರ ಮತ್ತು ಜವಾಬ್ದಾರಿಗಳನ್ನು ಅದು ಸ್ಪಷ್ಟವಾಗಿ ತಿಳಿಸಿದೆ. ರಾಜ್ಯಕ್ಕಿಂತ ಕೆಳಗಿನ ಹಂತಗಳನ್ನು ಅದು ರಾಜ್ಯಪಟ್ಟಿಯಲ್ಲಿ ಸೇರಿಸಿದೆ. ರಾಜ್ಯಪಟ್ಟಿಯ 5ನೇ ಅಂಶದಿಂದ ಕೇಂದ್ರ ಸರ್ಕಾರಕ್ಕೆ ಈ ಹಂತಗಳಲ್ಲಿ ಯಾವ ಅಧಿಕಾರವೂ ಇಲ್ಲ ಎಂದು ಸ್ಪಷ್ಟ ವಾಗುತ್ತದೆ. 64ನೇ ತಿದ್ದುಪಡಿ ಈ ಅಂಶವನ್ನೇ ರದ್ದು ಮಾಡಬಯಸುತ್ತದೆ! ಜತೆಗೆ ಕೆಲವೊಮ್ಮೆ ರಾಜ್ಯಪಾಲರಿಗೆ ಚುನಾಯಿತ ಮಂತ್ರಿಮಂಡಳವನ್ನು ನಿರ್ಲಕ್ಷಿಸುವ ಅಧಿಕಾರ ನೀಡುತ್ತದೆ; ಚುನಾವಣಾ ಆಯೋಗ ಹಾಗೂ ಭಾರತದ ಮುಖ್ಯ ಲೆಕ್ಕ ಪರಿಶೋಧಕರ ಅಧಿಕಾರಗಳನ್ನು ಪಂಚಾಯತೀ ವ್ಯವಸ್ಥೆಗೂ ವಿಸ್ತರಿಸುತ್ತದೆ!

ಇದು ರಾಜ್ಯದ ಅಧಿಕಾರ ವ್ಯಾಪ್ತಿಯೊಳಗೆ ಒಂದು ಸ್ಪಷ್ಟ ಅತಿಕ್ರಮಣ. ಆದರೆ ಪ್ರಧಾನಮಂತ್ರಿಗಳು ಸಂವಿಧಾನದ 12 ನೇ ಪರಿಚ್ಛೇದ ಇದಕ್ಕೆ ಅವಕಾಶ ನೀಡುತ್ತದೆ ಎಂದು ಹೇಳುವ ಸೊಕ್ಕು ತೋರಿದ್ದಾರೆ. ವಾಸ್ತವವಾಗಿ ಈ ಪರಿಚ್ಛೇದ ಹೀಗಿದೆ– " ಭಾರತ ಸರ್ಕಾರ ಮತ್ತು ಸಂಪತ್ತು, ಪ್ರತಿಯೊಂದು ರಾಜ್ಯದ ಸರಕಾರ ಮತ್ತು ಶಾಸಕಾಂಗ ಮತ್ತು ಇತರ ಎಲ್ಲಾ ಸ್ಥಳೀಯ ಸಂಸ್ಥೆಗಳು". ಈ ರೀತಿ ಸ್ಥಳೀಯ ಸಂಸ್ಥೆಗಳ ಪ್ರಸ್ತಾಪವನ್ನು ಕಿಡಿಗೇಡಿತನದಿಂದ ಮರೆಮಾಚಿ ಪಂಚಾಯತೀ ರಾಜ್ಯವನ್ನು ಫಲಪ್ರದಗೊಳಿಸುವುದು ಕೇಂದ್ರ ಮತ್ತು ರಾಜ್ಯಗಳ ಜಂಟಿ ಜವಾಬ್ದಾರಿ ಎಂದು ಅವರು ವಾದಿಸುತ್ತಾರೆ. ಅವರು ಇಷ್ಟಕ್ಕೇ ನಿಲ್ಲುವುದಿಲ್ಲ. " ಪಂಚಾಯತೀ ರಾಜ್ಯದ ಸಂವಿಧಾನಾತ್ಮಕ ಚೌಕಟ್ಟು ಕೇಂದ್ರದ್ದೇ ಪ್ರಥಮ ಜವಾಬ್ದಾರಿ" ಎನ್ನುವ ಹಂತಕ್ಕೆ ಸಾಗುತ್ತಾರೆ !

'ಕೇಂದ್ರ ಮತ್ತು ರಾಜ್ಯಗಳ ಜಂಟೀ ಜವಾಬ್ದಾರಿ' ಎಂಬುದನ್ನು "ಕೇಂದ್ರದ ಪ್ರಾಥಮಿಕ ಜವಾಬ್ದಾರಿ" ಎಂದು ಅವರು ಹೇಗೆ ಅರ್ಥೈಸುತ್ತಾರೋ ಅವರಿಗೆ ಗೊತ್ತು.

ರಾಜ್ಯ ಪಟ್ಟಿಯ ಒಂದು ಅಂಶವನ್ನು "ಕೇಂದ್ರದ ಪ್ರಾಥಮಿಕ ಜವಾಬ್ದಾರಿ" ,ಯಾಗಿ ಪರಿವರ್ತಿಸುವ ಈ ಅಪ್ರಾಮಾಣಿಕತೆ ಈ ಮಸೂದೆ ತಯಾರಿಸಲು ಮೊದಲ ಹಂತ ದಿಂದಲೂ ಸ್ಪಷ್ಟವಾಗಿ ಕಂಡು ಬಂದಿದೆ.

ಪಂಚಾಯತೀ ವ್ಯವಸ್ಥೆಯ ರಾಜ್ಯ ಪಟ್ಟಿಯಲ್ಲಿ ಬರುವುದರಿಂದ ಮತ್ತು ರಾಜೀವ್‌ಗಾಂಧಿಯವರ ಪ್ರಕಾರವೇ ಕೆಲವು ರಾಜ್ಯಗಳಲ್ಲಿ ಇದು ಚೆನ್ನಾಗಿ ಕೆಲಸ ಮಾಡಿರುವುದರಿಂದ ಸ್ವಾಭಾವಿಕವಾಗಿ ಈ ಶಾಸನ ರಚನೆಯ ಪ್ರಯತ್ನ ಮುಖ್ಯಮಂತ್ರಿಗಳ ಸಮ್ಮೇಳನದಿಂದ ಆರಂಭವಾಗಬೇಕಿತ್ತು. ಪಂಚಾಯತೀ ರಾಜ್ಯವನ್ನು ಹೇಗೆ ಉತ್ತಮಗೊಳಿಸುವುದು ಎಂಬುದು ಈ ಸಮ್ಮೇಳನದ ನಿರ್ದಿಷ್ಟ ಅಜೆಂಡಾ ಆಗಿರಬೇಕಿತ್ತು. ಇದರಿಂದ ಅಭಿಪ್ರಾಯ ಗಳ ವಿನಿಮಯ ಯಾವುದೇ ಶಾಸನದ ರಚನೆಯಲ್ಲಿ ನೆರವಾಗುತ್ತಿತ್ತು. ಆದರೆ ಅದು ಪ್ರಧಾನಮಂತ್ರಿಗಳ ಉದ್ದೇಶಕ್ಕೆ ಪೂರಕವಾಗಿರಲಿಲ್ಲ.

ಜಿಲ್ಲಾ ಮಾಜಿಸ್ಟ್ರೇಟರು, ಡೆಪ್ಯುಟಿ ಕಮಿಶನರ್‌ಗಳು ಹಾಗೂ ಕಲೆಕ್ಟರುಗಳ ಕಮ್ಮಟಗಳೊಂದಿಗೆ ಇದು ಆರಂಭವಾಯಿತು. ಕೇಂದ್ರ ಸಿಬ್ಬಂದಿ ಇಲಾಖೆ ಇದನ್ನು ಏರ್ಪಡಿಸಿತ್ತು. ಪ್ರಧಾನ ಮಂತ್ರಿಗಳು ಇದರಲ್ಲಿ ಭಾಗವಹಿಸಿದರು.

ದಡ್ಡ ಅಜ್ಞಾನವೋ- ಮೇರೆ ಮೀರಿದ ಸೊಕ್ಕೋ?

ಪಶ್ಚಿಮ ಬಂಗಾಳದಲ್ಲಿ ಮಾಡಿರುವ ಕೆಲಸ ನನಗೆ ಮೆಚ್ಚುಗೆಯಾಗಿದೆ. ಪಂಚಾಯತುಗಳ ಬಗ್ಗೆ ಇಲ್ಲಿಯ ಅನುಭವವನ್ನು ಬೇರೆಡೆ ಉಪಯೋಗಿಸ ಬಯಸುತ್ತೇನೆ. ಪಂಚಾಯತೀ ರಾಜ್ಯ ವಿಶೇಷವಾಗಿ ಪಶ್ಚಿಮ ಬಂಗಾಳದಲ್ಲಿ ಉತ್ತಮವಾಗಿ ನಡೆಯುತ್ತಿದೆ. ಗುಜರಾತ್, ಮಹಾರಾಷ್ಟ್ರ, ಕರ್ನಾಟಕದಲ್ಲೂ ಚೆನ್ನಾಗಿ ನಡೆಯುತ್ತಿದೆ. ಆದರೆ ದೇಶದಲ್ಲಿ ಒಟ್ಟಾರೆಯಾಗಿ ಇದರ ಕಾರ್ಯ ನಿರ್ವಹಣೆ ತೃಪ್ತಿಕರವಾಗಿಲ್ಲ.

ಪ್ರಧಾನಮಂತ್ರಿ ರಾಜೀವ್ ಗಾಂಧಿ, ಏಪ್ರಿಲ್7
(ಕಲ್ಕತ್ತೆಯಲ್ಲಿ ಪೂರ್ವ ಮತ್ತು ಉತ್ತರ ರಾಜ್ಯಗಳ ಪಂಚಾಯತ್ ಸಮ್ಮೇಳನದಲ್ಲಿ)

ಈ ಅಧಿವೇಶನದಲ್ಲಿ ಚರ್ಚೆ ಬೇಡ ವೆಂದು ನಾವು ಉದ್ದೇಶ ಪೂರ್ವಕ ವಾಗಿಯೇ ನಿರ್ಧರಿಸಿದೆವು. ಯಾಕೆಂದರೆ ಇದರಿಂದ ವಿರೋಧ ಪಕ್ಷಗಳವರಿಗೆ ಚರ್ಚಿಸಲು ಸಾಕಷ್ಟು ಸಮಯ ಸಿಕ್ಕಂತಾ ಗುತ್ತದೆ ಎಂದು ನಾವು ಯೋಚಿಸಿದೆವು. ನಾವು ಕಾಂಗ್ರೆಸಿಗರು ಎರಡು ವರ್ಷಗಳಿಂದ ಚರ್ಚಿಸುತ್ತಿದ್ದೇವೆ. ಜನರನ್ನು ಮರೆತಿರು ವವರು ವಿರೋಧ ಪಕ್ಷಗಳವರೇ. ಆದ್ದರಿಂದ ಮುಂದಿನ ಅಧಿವೇಶನದಲ್ಲಿ ಚರ್ಚೆ ನಡೆಯಲೆಂದು ಯೋಚಿಸಿದೆವು.

ಪ್ರಧಾನ ಮಂತ್ರಿ, ಮೇ 15
(ಸಂಸತ್ತಿನಲ್ಲಿ ಮಸೂದೆ ಮಂಡಿಸುತ್ತಾ)

ಪ್ರಧಾನ ಮಂತ್ರಿಗಳು ಈ ಮಾತು ಹೇಳಿರುವುದು ದಡ್ಡ ಅಜ್ಞಾನದಿಂದಲೋ ಅಥವಾ ಮೇರೆ ಮೀರಿದ ಸೊಕ್ಕಿನಿಂದಲೋ ನನಗೆ ಗೊತ್ತಿಲ್ಲ. ವಿರೋಧ ಪಕ್ಷಗಳವರು ಈ ಬಗ್ಗೆ ಚರ್ಚೆಮಾಡುತ್ತಾ ಬಂದಿದ್ದಾರೆ 'ಯಷ್ಟೇ ಅಲ್ಲ, ಪ್ರಜಾಸತ್ತಾತ್ಮಕ ವಿಕೇಂದ್ರೀ ಕರಣದ ವಿಚಾರವನ್ನು ಕೃತಿಗೂ ಇಳಿಸಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಪ್ರಧಾನ ಮಂತ್ರಿಗಳೇ ಇದನ್ನು ಒಪ್ಪಿಕೊಂಡಿದ್ದಾರೆ. ಜನತಾ ಸರ್ಕಾರ ನೇಮಿಸಿದ ಅಶೋಕ ಮೆಹ್ತಾ ಸಮಿತಿಯ ಶಿಫಾರಸುಗಳನ್ನು ತಾನು ಅಧ್ಯಯಿಸಿದ್ದೇನೆ ಎಂದು ಅವರೇ ಹೇಳಿದ್ದಾರೆ.

ಇ.ಎಂ.ಎಸ್. ನಂಬೂದಿರಿಪ್ಪಾಡ್

ಜ್ಯೋತಿಬಸು ಪ್ರತಿಕ್ರಿಯೆ

ಉದ್ದೇಶಿತ ಪಂಚಾಯತ್ ಮಸೂದೆ ಕೇಂದ್ರ-ರಾಜ್ಯ ಸಂಬಂಧಗಳನ್ನು ಹದಗೆಡಿಸಿ ಕಹಿಭಾವನೆಗಳನ್ನು, ಸಂಶಯವನ್ನು ಹೆಚ್ಚಿಸುತ್ತಿದೆಯಷ್ಟೇ . . . .

ಕೆಲವು ದಿನಗಳ ಹಿಂದೆ ಇಲ್ಲಿ ಕಲ್ಕತ್ತೆಯಲ್ಲಿ 50ಲಕ್ಷ ರೂ. ಖರ್ಚುಮಾಡಿ ಒಂದು ಸಮ್ಮೇಳನ ನಡೆಯಿತು. ಅಲ್ಲಿ ಪಂಚಾಯಿತೀ ರಾಜ್ಯ ರಚಿಸಲು ಯಾವುದೇ ಸಂವಿಧಾನ ತಿದ್ದುಪಡಿಯ ಪ್ರಸ್ತಾಪ ತರುವ ಅಗತ್ಯವಿಲ್ಲ ಎಂದೆವು. ಅದೊಂದು ರಾಜಕೀಯ ದೃಷ್ಟಿಕೋನದ ಪ್ರಶ್ನೆ. ಆದ್ದರಿಂದ ಅಗತ್ಯವಿದ್ದರೆ ಮೊದಲು ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಅದನ್ನು ಚರ್ಚಿಸಬೇಕು ಎಂದೆವು. ಆದರೆ ಅವು ಕೇಳಲು ಸಿದ್ಧರಿಲ್ಲ.

ಇಲ್ಲಿ ಪಶ್ಚಿಮ ಬಂಗಾಳದಲ್ಲಿ ಕಾನೂನಿನಲ್ಲಿ ಅಗತ್ಯ ತಿದ್ದುಪಡಿ ಮಾಡಿ 12ವರ್ಷದಿಂದ ನಾವು ಪಂಚಾಯತುಗಳನ್ನು ನಡೆಸುತ್ತಿದ್ದೇವೆ. ಐದು ವರ್ಷಕ್ಕೊಮ್ಮೆ ಚುನಾವಣೆ ನಡೆದಿವೆ. ಈಗಾಗಲೇ ರಾಜ್ಯ ಬಜೆಟ್‌ನ 50%ಪಂಚಾಯತ್‌ಗಳ ಮೂಲಕ ಖರ್ಚು ಮಾಡಲು ನಿರ್ಧರಿಸಿದ್ದೇವೆ. ಬೇರೆ ಕೆಲವು ಕಾಂಗ್ರೆಯೇತರ ರಾಜ್ಯಗಳಲ್ಲೂ ಇಂತಹ ವ್ಯವಸ್ಥೆಯಿದೆ. ಯಾವ ಕಾಂಗ್ರೆಸ್‌ನ (ಐ) ಆಳ್ವಿಕೆಯ ರಾಜ್ಯದಲ್ಲೂ ಇದಿಲ್ಲ.

ಕಾಂಗ್ರೆಸ್ (ಐ)ಗೆ ಜನರಲ್ಲಿ ನಂಬಿಕೆಯಿಲ್ಲ. ಆದ್ದರಿಂದಲೇ ಕೇಂದ್ರದ ಕೈಯಲ್ಲಿ ಅಧಿಕಾರ ಒಟ್ಟುಹಾಕಬಯಸುತ್ತಾರೆ. ಇಲ್ಲಿ ಪಂಚಾಯತುಗಳನ್ನು ನಡೆಸಲು ನಮಗೆ ಯಾವ ಕೇಂದ್ರ ಶಾಸನದ ಅಗತ್ಯವೂ ಬಿದ್ದಿಲ್ಲ . . . .

ತನ್ನ ಪಾಪಗಳನ್ನು ತೊಳೆಯಲು ಕೇಂದ್ರ ಈ ಮಸೂದೆ ತಂದಿದೆ. . . . . . .

ಇದರ ಅಗತ್ಯ ಅದಕ್ಕೆ ಕಳೆದ ನಾಲ್ಕೂವರೆ ವರ್ಷಗಳಲ್ಲಿ ಅನಿಸಲಿಲ್ಲ. ಹೊಸ ಚುನಾಯಿತ ಸರಕಾರ ಇದರ ಅಗತ್ಯವನ್ನು ಪರಿಶೀಲಿಸಬಹುದಾಗಿತ್ತು. ಆದರ ಬದಲು ಆತುರದಿಂದ ಅದನ್ನು ಮುಂದೊತ್ತಲಾಗುತ್ತಿದೆ. ಕಾಂಗ್ರೆಸ್ (ಐ) ನಡೆಸುವ ರಾಜ್ಯಗಳ ಕೆಲವು ಪ್ರತಿನಿಧಿಗಳೂ ಈ ಮಸೂದೆಗೆ ವಿರೋಧವಾಗಿದ್ದಾರೆ.

ಅವರು ಸಾರ್ವಜನಿಕವಾಗಿ ತಮ್ಮ ದನಿಯೆತ್ತಲು ಹೆದರುತ್ತಾರೆ. . . . .

ಕಳೆದ ಚುನಾವಣೆಗಳಲ್ಲಿ ಇಂದಿರಾ ಗಾಂಧಿ ಸಾವಿನ ಸಂದರ್ಭದಲ್ಲಿ ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಯೆತ್ತಿ ಕಾಂಗ್ರೆಸ್ (ಐ) ಗೆದ್ದಿತು. ಮುಂಬರುವ ಚುನಾವಣೆಗಳಲ್ಲಿ ಅದು ತನ್ನ ಪ್ರಣಾಳಿಕೆಯಲ್ಲಿ ಈ ಮಸೂದೆಯನ್ನು ಹೆಸರಿಸಿ ಪ್ರಚಾರ ನಡೆಸಲಿದೆ.

ಮೇ 15
ಮಸೂದೆಯನ್ನು
ದಿಂದ ಪ್ರಜಾಪ್ರಭುತ್ವ
ಸಾರುತ್ತಿದ್ದಾರೆ.

ಯಾರ ವಿರುದ್ಧ ಯಾ
"ಬುಡಮಟ್ಟದಿಂದ
ಸರ್ಕಾರಿಯಾ ಆಯೋ
ಪ್ರಯತ್ನಿಸಲಿಲ್ಲ ?

ಈ ತಿದ್ದುಪ
ಇದು ಮುಂಬರುವ
ಒಂದು ವಿಷಯವಾ
ಸರಿಯೇ?

ರಾಜೀವ್
ಪ್ರೇಮ ಉಕ್ಕಿ ಬರಲು
1989 ರ ಸಂಚಿಕೆಯ
ನಮ್ಮ ಮುಂದಿದೆ.
ಆರ್ಥಿಕವಾಗಿ ಪರಿಶೀಲಿಸ

ರಾಜ್ಯ ಪಟ್ಟಿಯಲ್ಲಿ ಸೇರುವ ಒಂದು ವಿಷಯದಲ್ಲಿ ಪ್ರಧಾನ • ಮಂತ್ರಿಗಳು ಹಾಗೂ ಅವರ ಸಹಯೋಗಿ ಮಂತ್ರಿಗಳು ಹೇಗೆ ತಾನೇ ಕಾಣಿಸಿಕೊಳ್ಳಲು ಸಾಧ್ಯ ? ಯಾರಿಗೂ ಗೊತ್ತಿಲ್ಲ. ಇದು ಕೇವಲ ಆರಂಭವಾಗಿತ್ತಷ್ಟೆ. ಯಾಕೆಂದರೆ ಮುಂದಿನ ಹಂತದಲ್ಲೂ ಪ್ರಧಾನ ಮಂತ್ರಿಗಳು ಮುಖ್ಯಮಂತ್ರಿಗಳೊಡನೆ ಸಮಾಲೋಚಿಸುವ ಗೋಜಿಗೆ ಹೋಗಲಿಲ್ಲ. ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಭಾರತ ಸರಕಾರದ ವಿವಿಧ ಇಲಾಖೆಗಳ ಕಾರ್ಯದರ್ಶಿಗಳ ಸಮ್ಮೇಳನ ನಡೆಸಿದರು.

ರಾಜ್ಯ ಪಟ್ಟಿಯಲ್ಲಿರುವ ಒಂದು ವಿಷಯದಲ್ಲಿ ಕೇಂದ್ರ ಸರಕಾರದ ಅತಿಕ್ರಮಣ ಎಷ್ಟರ ಮಟ್ಟಿಗೆ ಹೋಗಿತ್ತೆಂದರೆ ಕೇಂದ್ರ ಸರ್ಕಾರದ ಕಾರ್ಯದರ್ಶಿಗಳಿಂದ ಹಿಡಿದು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳವರೆಗೆ ಎಲ್ಲರೂ, ಜಿಲ್ಲಾ ಮಾಜಿಸ್ಟ್ರೇಟರುಗಳು - ಹೀಗೆ ಪ್ರತಿಯೊಬ್ಬ ನೌಕರ ಶಾಹಿಯೊಂದಿಗೂ

ಸಂವಿಧಾನ ಬದ್ಧತೆಯೇ ಪ್ರಶ್ನಾರ್ಹ

64 ನೇ ತಿದ್ದುಪಡಿ ಮಸೂದೆ ನಿಜವಾಗಿ ವಿಕೇಂದ್ರೀಕರಣ ತರುವುದಿಲ್ಲ ಎಂಬುದು ಈಗಾಗಲೇ ನಮ್ಮ ಓದುಗರಿಗೆ ಮನವರಿಕೆಯಾಗಿರಬೇಕು. ಅದರ ಉದ್ದೇಶ ಕೂಡ ಅದಲ್ಲ ಎನ್ನುತ್ತಾರೆ ಪ್ರಖ್ಯಾತ ನ್ಯಾಯವಾದಿ ಹಾಗೂ ಸಿ.ಪಿ.ಐ. (ಎಂ) ಲೋಕಸಭಾ ಸದಸ್ಯ ಕಾಂ. ಸೋಮನಾಥ ಚಟರ್ಜಿ. ಈ ತಿದ್ದುಪಡಿಯ ಉದ್ದೇಶ ಸಾರ್ವಜನಿಕರ ಕಣ್ಣಿಗೆ ಮಣ್ಣೆರಚುವುದು, ಮತ್ತು ಅದನ್ನೊಂದು ಚುನಾವಣಾ ಪ್ರಚಾರದ ವಿಷಯವಾಗಿಸುವುದು ಯಾಕೆಂದರೆ ಈ ತಿದ್ದುಪಡಿಯ ಸಂವಿಧಾನ ಬದ್ಧತೆಯೇ ಪ್ರಶ್ನಾರ್ಹ. ಈ ತಿದ್ದುಪಡಿ ಪಾಸಾದರೂ ಪಂಚಾಯತ್ ರಾಜ್ಯದ ಬಗ್ಗೆ ಶಾಸನ ತರುವ ಅಧಿಕಾರ ಸಂಸತ್ತಿಗೆ ಸಿಗುವುದಿಲ್ಲ. ಸಂಸತ್ತಿನಲ್ಲಿ ಚರ್ಚೆಯ ಸಮಯದಲ್ಲಿ ಕಾಂ॥ ಚಟರ್ಜಿಯವರ ಭಾಷಣದ ಕೆಲವು ಅಂಶಗಳು ಇಲ್ಲಿವೆ.

ಸಂವಿಧಾನದ ಏಳನೇ ಶೆಡ್ಯೂಲಿನ ರಾಜ್ಯ ಪಟ್ಟಿ IIರಲ್ಲಿನ 5ನೇ ಅಂಶ ಪಂಚಾಯತುಗಳ ಬಗ್ಗೆ ಶಾಸನ ತರುವ ಅಧಿಕಾರ ವ್ಯಾಪ್ತಿಯನ್ನು ಕೇವಲ ರಾಜ್ಯ ಶಾಸನ ಸಭೆಗಳಿಗೆ ಮಾತ್ರ ನೀಡುತ್ತಿದೆ.

ಗ್ರಾಮ ಪಂಚಾಯತುಗಳನ್ನು ರಚಿಸಿ ಅದಕ್ಕೆ ಅಗತ್ಯ ಹಕ್ಕುಗಳನ್ನು ಒದಗಿಸುವ ನಿರ್ದೇಶಕ ಸೂತ್ರವಿರುವ ಸಂವಿಧಾನದ 40ನೇ ಕಲಮಿನ ಬಗ್ಗೆ ಸಂವಿಧಾನ ಸಭೆಯಲ್ಲಿ ಚರ್ಚಿಸುವಾಗ ಶ್ರೀಯುತ ಕೆ. ಸಂತಾನಂ ಒಂದು ತಿದ್ದುಪಡಿ ಮಂಡಿಸಿ ಗ್ರಾಮ ಪಂಚಾಯತುಗಳ ಅಧಿಕಾರ, ಪ್ರದೇಶ, ಕೆಲಸಗಳೇನು ಎಂಬುದರ ಬಗ್ಗೆ ಒಂದು ಕಟ್ಟುನಿಟ್ಟಾದ ನಿರ್ದೇಶನ ಅಪೇಕ್ಷಣೀಯವಲ್ಲ. ಅವನ್ನು ಪ್ರಾಂತ ಶಾಸನ ಸಭೆಗಳಿಗೇ ಬಿಡಬೇಕೆಂದು ಅಭಿಪ್ರಾಯಪಟ್ಟರು.

ಸಂವಿಧಾನ ಸಭೆಯ ಅಧ್ಯಕ್ಷ ಡಾ. ಅಂಬೇಡ್ಕರ್ ಕರಡು ಸಂವಿಧಾನದ ಅಂಗೀಕಾರದ ನಿಲುವಳಿ ಮಂಡಿಸುತ್ತಾ ಹೀಗೆಂದರು - "ನಮ್ಮ ಸಂವಿಧಾನದಲ್ಲಿ, ರಾಜ್ಯಗಳು ತಮ್ಮ ಶಾಸಕಾಂಗ ಹಾಗೂ ಕಾರ್ಯಾಂಗ ಅಧಿಕಾರಕ್ಕಾಗಿ ಯಾವ ರೀತಿಯಲ್ಲೂ ಕೇಂದ್ರದ ಮೇಲೆ ಅವಲಂಬಿಸಿಲ್ಲ. ಈ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯಗಳು ಸಮಾನರು. ಒಕ್ಕೂಟ ತತ್ವದ ಮುಖ್ಯ ಲಕ್ಷಣವೆಂದರೆ ಸಂವಿಧಾನವೇ ಶಾಸಕಾಂಗ ಮತ್ತು ಕಾರ್ಯಾಂಗ ಅಧಿಕಾರಗಳನ್ನು ಕೇಂದ್ರ ಮತ್ತು ರಾಜ್ಯಗಳ ನಡುವೆ ವಿಭಜಿಸಿದೆ. ಕೇಂದ್ರ ಕೇವಲ ತನ್ನ ಇಚ್ಛೆಗನುಸಾರವಾಗಿ ಈ ವಿಭಜನೆಯ ಗಡಿಗಳನ್ನು ಬದಲಿಸಲು ಸಾಧ್ಯವಿಲ್ಲ. ನ್ಯಾಯಾಲಯ ಗಳಿಗೂ ಸಾಧ್ಯವಿಲ್ಲ. ಇದು ನಮ್ಮ ಸಂವಿಧಾನದಲ್ಲಿ ಮೂರ್ತಗೊಂಡಿರುವ ನೀತಿ. ಈಬಗ್ಗೆ ಸಂಶಯಬೇಡ."

ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಸಂಸತ್ತು ಸಂವಿಧಿಯ ತಿದ್ದುಪಡಿಯ ಮೂಲಕ ತರುವ ಯಾವುದೇ ಶಾಸನ ಸಂಸತ್ತಿಗೆ ಯಾವ ಅಧಿಕಾರವನ್ನೂ ನೀಡುವುದಿಲ್ಲ. ಮೇಲೆ ಹೇಳುವ ರಾಜ್ಯಪಟ್ಟಿ IIನ್ನು ತಿದ್ದುಪಡಿ ಮಾಡಿದರೆ ಮಾತ್ರ ಇದು ಸಾಧ್ಯ.

ಪಂಚಾಯತೀ ರಾಜ್ಯವನ್ನು ಫಲದಾಯಕ ಗೊಳಿಸುವ ಜವಾಬ್ದಾರಿ ಕೇಂದ್ರ ಹಾಗೂ ರಾಜ್ಯಗಳ ಜಂಟಿ ಜವಾಬ್ದಾರಿ, ಪಂಚಾಯತೀ ರಾಜ್ಯದ ಸಂವಿಧಾನಾತ್ಮಕ ಚೌಕಟ್ಟು ಕೇಂದ್ರದ ಪ್ರಾಥಮಿಕ ಜವಾಬ್ದಾರಿ ಎಂದು ಪ್ರಧಾನ ಮಂತ್ರಿಗಳು ಹೇಳಿರುವುದು ಈ ದೇಶದಲ್ಲಿನ ಸಂವಿಧಾನದ ಅಂಶಗಳನ್ನು ನಗೆ ಪಾಟಲು ಮಾಡಿದಂತೆಯೇ ಸರಿ.

ಈ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸಿದ ಮೇಲೆ ಕೂಡಾ

ರಾಜೀವರ "ಕ್ರಾಂತಿಕಾರೀ" ತಿದ್ದುಪಡಿ ಮತ್ತು ಭೂಸುಧಾರಣೆ

ಧಾನ ಮಂತ್ರಿಗಳು 64 ನೇ ಸಂವಿಧಾನ ತಿದ್ದುಪಡಿ ು. ಇದೊಂದು "ಕ್ರಾಂತಿ", "ಬುಡಮಟ್ಟ ಿ ಸ್ವತಃ ಪ್ರಧಾನಿಗಳೂ ಸೇರಿದಂತೆ ಕಾಂಗ್ರೆಸಿಗರೆಲ್ಲಾ

ತ್ವ" ಕ್ಕೆ ಈ ತಿದ್ದುಪಡಿ ಅಗತ್ಯವಿತ್ತೇ ? ೂಚಿಸಿದ ಉಳಿದೆರಡು ಪರ್ಯಾಯಗಳನ್ನು ಏಕೆ

ಕ್ಷಮವಾಗಿ ವಿಕೇಂದ್ರೀಕರಣಕ್ಕೆ ನೆರವಾಗುವುದೇ ? ೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆ ಪ್ರಚಾರದ ಎಂಬ ಪತ್ರಿಕಾ ಸಮೀಕ್ಷರ ಅಭಿಪ್ರಾಯ

ರಿಗೆ ಇದ್ದಕ್ಕಿದ್ದಂತೆ ಪಂಚಾಯತುಗಳ ಮೇಲೆ ವೇನು ಎಂದು ಈಗಾಗಲೇ ನೀವು ಏಪ್ರಿಲ್ 16, ದ್ದೀರಿ. ಈಗ ಸಂವಿಧಾನದ ತಿದ್ದುಪಡಿ ಮಸೂದೆ ್ನ ರಾಜಕೀಯ, ಸಂವಿಧಾನಾತ್ಮಕ ಹಾಗೂ

ಸಮಾಲೋಚನೆ ನಡೆಸಲಾಯಿತು. ಆದರೆ ಈ ಸಮಾಲೋಚನೆಗಳಲ್ಲಿ, ಆ ವಿಷಯದ ಜವಾಬ್ದಾರಿ ಹೊತ್ತಿರುವ ರಾಜ್ಯಗಳ ಮಂತ್ರಿಗಳಿಗಾಗಲೀ, ಮುಖ್ಯಮಂತ್ರಿಗಳಿಗಾಗಲೀ ಸ್ಥಾನವೇ ಇಲ್ಲ !

ಪ್ರಧಾನ ಮಂತ್ರಿಗಳು ಪ್ರತಿಯೊಂದು ಹಂತದ ಅಧಿಕಾರಶಾಹಿಗಳೊಂದಿಗೆ, ತನ್ನ ಪಕ್ಷದ ಸಹಯೋಗಿಗಳೊಂದಿಗೆ ಪಂಚಾಯತ್ ರಾಜ್ಯ ಸಂಸ್ಥೆಗಳ ಸಿಬ್ಬಂದಿಯೊಡನೆ ಚರ್ಚೆ ನಡೆಸಿದರು. ಆದರೆ ಅವರ ಪ್ರಕಾರ ಕೂಡಾ ಈ ವಿಷಯದಲ್ಲಿ "ಜಂಟಿ ಜವಾಬ್ದಾರಿ" ಇರುವ, ಚುನಾಯಿತ ರಾಜ್ಯ ಸರಕಾರಗಳೊಡನೆ ಮಾತ್ರ ಸಮಾಲೋಚನೆ ನಡೆಸಲಿಲ್ಲ.

ಈ ಎಲ್ಲಾ ಪ್ರಕ್ರಿಯೆ ಮುಗಿದ ಮೇಲಷ್ಟೇ, ಕೇಂದ್ರ ಸರ್ಕಾರ ಮುಖ್ಯಮಂತ್ರಿಗಳ ಸಮ್ಮೇಳನ ಕರೆಯುವ ದೊಡ್ಡ ಮನಸ್ಸು ಮಾಡಿತು! ಅದೂ ಕೂಡಾ ಸಾಕಷ್ಟು ಸಮಯಾವಕಾಶ ನೀಡದೆ, ಸಾಕಷ್ಟು ರಾಜಕೀಯ ಸಿದ್ಧತೆಗಳಿಲ್ಲದೆ. ಕೇವಲ ಒಂದು ದಿನ ಸಭೆ ಸೇರಿದ್ದ ಈ ಸಮ್ಮೇಳನದಲ್ಲಿ ತಿದ್ದುಪಡಿ ಮಸೂದೆಯ ಬಗ್ಗೆ ಚರ್ಚಿಸಲಿಲ್ಲ ಎಂಬುದು ಒಂದು ಮಹತ್ವದ ಸಂಗತಿ.

ಮುಖ್ಯ ಮಂತ್ರಿಗಳೊಡನೆ ಈ ಮಸೂದೆಯನ್ನು ಚರ್ಚಿಸುವ ಬಗ್ಗೆ ಇಷ್ಟೊಂದು ಹಿಂಜರಿಕೆಯಾದರೂ ಏಕೆ? ಯಾಕೆಂದರೆ ತಕ್ಷಣವೇ ಆಗ ಪಂಚಾಯತುಗಳಿಗೆ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಭಾಗವಾಗಿ ಕೇಂದ್ರದಿಂದ ರಾಜ್ಯಗಳಿಗೆ ವಿಕೇಂದ್ರೀಕರಣದ ಪ್ರಶ್ನೆ ಏಳುತ್ತಿತ್ತು.

ಈ ಮಸೂದೆಯನ್ನು ರೂಪಿಸುವಲ್ಲಿ ತಾನು 1978 ರ ಅಶೋಕ ಮೆಹ್ತಾ ಸಮಿತಿಯ ಶಿಫಾರಸುಗಳನ್ನು ಅವಲಂಬಿಸಿರುವುದಾಗಿ ಪ್ರಧಾನ ಮಂತ್ರಿಗಳು ಹೇಳಿಕೊಳ್ಳುತ್ತಿದ್ದಾರೆ.

ಆಗಿನ ಪ್ರಧಾನ ಮಂತ್ರಿ ಮೊರಾರ್ಜಿ ದೇಸಾಯಿಯವರು ಈ ಸಮಿತಿಯನ್ನು ರಚಿಸುವ ಬಗ್ಗೆ ವಿರೋಧ ಪಕ್ಷಗಳಲ್ಲಿದ್ದ

6ನೇ ಪುಟಕ್ಕೆ

ಪಂಚಾಯಿತುಗಳು "ಸ್ವಯಮಾಡಳಿತದ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ" ಅವಕ್ಕೆ "ಅಧಿಕಾರ" ಹಸ್ತಾಂತರಿಸಲಾಗುತ್ತಿದೆ! ಆದರೆ ಈ ಸ್ವಯಮಾಡಳಿತ ಕೇವಲ 1. ಆರ್ಥಿಕ, ಸಾಮಾಜಿಕ ಬೆಳವಣಿಗೆಯ ಯೋಜನೆಗಳನ್ನು ಸಿದ್ಧಪಡಿಸುವುದು ಮತ್ತು 2. ಸಂವಿಧಾನದ ಹನ್ನೊಂದನೇ ಶೆಡ್ಯೂಲಿನಲ್ಲಿ ಪಟ್ಟಿ ಮಾಡಿದ ವಿಷಯಗಳೂ ಸೇರಿದಂತೆ ಅವಕ್ಕೆ ಒಪ್ಪಿಸಬಹುದಾದ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯ ಯೋಜನೆಗಳ ಜ್ಯಾರಿ.

ಹನ್ನೊಂದನೇ ಶೆಡೂಲಿನಲ್ಲಿ ನೀವು ಎಷ್ಟು ಹುಡುಕಾಡಿದರೂ ನಿಮಗೆ ಕನಿಷ್ಟ ಕೂಲಿ ಶಾಸನ, ಸಾಮಾಜಿಕ ನ್ಯೂನತೆಗಳ ಶಾಸನ, ಭೂಮಿತಿಗೆ ಮೀರಿದ ಜಮೀನಿನ, ಬೀಳು ಜಮೀನಿನ ವಿತರಣೆ ಮುಂತಾದವುಗಳ ಜ್ಯಾರಿಯ ಪ್ರಸ್ತಾಪವೇ ಕಾಣ ಸಿಗುವುದಿಲ್ಲ. ಅಂದರೆ ಇವೆಲ್ಲಾ "ಸ್ವಯಮಾಡಳಿತ"ದ ವ್ಯಾಪ್ತಿಗೇ ಬರುವುದಿಲ್ಲ! "ಕಾನೂನು ಮತ್ತು ವ್ಯವಸ್ಥೆ"ಯಂತೂ ಪಂಚಾಯತುಗಳನ್ನು ಆರಿಸಿದ ಜನತೆಗೆ ನಿಷಿದ್ಧ ಪ್ರದೇಶ. ಅಲ್ಲಿ ಇಣಿಕಿ ನೋಡುವಂತೆಯೂ ಇಲ್ಲ!

ಈ ವಿಷಯ ಪಶ್ಚಿಮ ಬಂಗಾಳದಲ್ಲಿ ಹೇಗಿದೆ ಎಂದು ನೋಡುವುದು ಸೂಕ್ತ. ಅಲ್ಲಿ ಭೂಸುಧಾರಣೆಯ ಅನುಷ್ಠಾನ, ಬರ್ಗಾದಾರರ ನೋಂದಣಿ, ಮನೆಪಟ್ಟಾದ ದಾಖಲೆ, ಆರ್.ಎಲ್.ಇ.ಜಿ.ಪಿ., ಎನ್.ಆರ್.ಇ.ಪಿ. ಯೋಜನೆಗಳ ಅನುಷ್ಠಾನ, ಬರ ಮತ್ತು ನೆರೆ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಇವನ್ನೆಲ್ಲಾ ಪಂಚಾಯತುಗಳಿಗೆ ವಹಿಸಲಾಗಿದೆ. ಕರ್ನಾಟಕ ಮತ್ತು ಆಂಧ್ರದಲ್ಲಿ ಅನುಷ್ಠಾನದಲ್ಲಿರುವ ಎಲ್ಲಾ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ತೆಲುಗು ದೇಶಂ ಅಥವಾ ಜನತಾ ಸರ್ಕಾರ ತಂದ ತಿದ್ದುಪಡಿಗಳ ಮೂಲಕ ಪಂಚಾಯತೀ ರಾಜ್ಯ ಸಂಸ್ಥೆಗಳಿಗೆ ಒಪ್ಪಿಸಲಾಗಿದೆ. ಅಂದರೆ ಈ ಸಂವಿಧಾನ ತಿದ್ದುಪಡಿ ಕಾಂಗ್ರೆಸ್ಸೇತರ ಸರಕಾರಗಳು ವರ್ಷಗಳಿಂದ ಮಾಡುತ್ತಾ ಬಂದಿರುವ ಕೆಲಸವನ್ನು ಇವು ಯಾವುದನ್ನು ಮಾಡದ ಬಲವಂತರಾಯ್ ಮೆಹ್ತಾ, ಅಶೋಕ ಮೆಹ್ತಾ ಸಮಿತಿಗಳ ಶಿಫಾರಸುಗಳೆಲ್ಲಾ ಇದ್ದಾಗ್ಯೂ, ಕಾಂಗ್ರೆಸ್ (ಐ) ಅಧ್ಯಕ್ಷರ ಮತ್ತು ಪ್ರಧಾನಮಂತ್ರಿಗಳ ಕಾತುರದ ಮನವಿಗಳು, ನಿರ್ದೇಶನಗಳಿದ್ದಾಗ್ಯೂ ಅವನ್ನೆಲ್ಲಾ ಮಾಡುವ ಒಲವಿಲ್ಲದ ಕಾಂಗ್ರೆಸ್ (ಐ) ಸರಕಾರಗಳ ಕೂಡಾ ಮಾಡುವಂತೆ ಒತ್ತಡ ತರುತ್ತದೆಂದು ನಿರೀಕ್ಷಿಸಬಹುದಷ್ಟೆ.

ಪ್ರಿಯ ಪ್ರಧಾನ ಮಂತ್ರಿಗಳೇ,

ಮೇ 5ರಂದು ನಡೆದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ, ಈ ಸಂವಿಧಾನ ತಿದ್ದುಪಡಿಯ ಕರಡನ್ನು ನೀಡಲಿಲ್ಲ. ಅದರ ಬಗ್ಗೆ ಕೇಂದ್ರ ಸರಕಾರದ ಯೋಚನೆಯೇನು ಎಂಬುದರ ಬಗ್ಗೆ ಸೂಚನೆಗಳನ್ನು ಕೂಡಾ ನೀಡಲಿಲ್ಲ. ಬದಲಾಗಿ, ಸಮ್ಮೇಳನದಲ್ಲಿ ಮತ್ತು ಬೇರೆಡೆ ಸಂವಿಧಾನದ ಮೂಲಭೂತ ಸ್ವರೂಪ ವನ್ನು ಮುಟ್ಟುವುದಿಲ್ಲ, ರಾಜ್ಯಗಳ ಅಧಿಕಾರಗಳನ್ನು ದುರ್ಬಲಗೊಳಿಸುವುದಿಲ್ಲ ಎಂದು ಬಾರಿಬಾರಿಗೂ ಆಶ್ವಾಸನೆ ನೀಡಿದಿರಿ. ಆದರೆ ಈಗ ಆತುರಾತುರದಿಂದ ನಮ್ಮ ಸಂವಿಧಾನ ಒಕ್ಕೂಟ ಸ್ವತ್ವಕ್ಕೇ ಮಾರಕವಾದ ಈ ಮಸೂದೆಯನ್ನು ಮಂಡಿಸಿದ್ದೀರಿ.

. . . ಸಂವಿಧಾನದ ನಿರ್ದೇಶಕ ಸೂತ್ರಗಳ 40ನೇ ಕಲಮನ್ನು ಹಾಗೂ ಸಂವಿಧಾನದ 12 ನೇ ಕಲಮನ್ನು ತೋರಿಸಿ ಪಂಚಾಯತೀ ರಾಜ್ಯದ ಬಗ್ಗೆ ಕೇಂದ್ರ ಹಾಗೂ ರಾಜ್ಯಗಳ ಜಂಟಿ ಜವಾಬ್ದಾರಿಯಿದೆ, ಆದರ ಸಂವಿಧಾನಾತ್ಮಕ ಚೌಕಟ್ಟು ರೂಪಿಸುವುದು ಕೇಂದ್ರದ ಪ್ರಾಥಮಿಕ ಜವಾಬ್ದಾರಿ ಎಂದಿದ್ದೀರಿ. ಇದೇ ತರ್ಕವನ್ನು ಬಳಸುವುದಾದರೆ ನಿರ್ದೇಶಕ ಸೂತ್ರಗಳ 50 ನೇ ಕಲಮಿನ ಪ್ರಕಾರ ಅಂತರಾಷ್ಟ್ರೀಯ ಶಾಂತಿಗೆ, ಭದ್ರತೆಗೆ ಪ್ರೋತ್ಸಾಹ ನೀಡುವುದು, ಅಂತರಾಷ್ಟ್ರೀಯ ವಿವಾದಗಳನ್ನು ಮಾತುಕತೆಗಳ ಮೂಲಕ ಬಗೆಹರಿಸುವಂತೆ ಪ್ರೋತ್ಸಾಹ ನೀಡುವುದು ರಾಜ್ಯ ಸರಕಾರಗಳ ಜವಾಬ್ದಾರಿಯೂ ಆಗುತ್ತದೆ! ಆದರೆ ಇದು ತರ್ಕಬದ್ಧವೇ? . . . .

ಈ ಮಸೂದೆ ಲಗತ್ತಿಸಿದ 'ಹಣಕಾಸಿನ ಮನವಿ' ಈ ತಿದ್ದುಪಡಿಯಿಂದಾಗಿ ಚುನಾವಣಾ ಆಯೋಗದ ಹಾಗೂ ಪ್ರಧಾನ ಲೆಕ್ಕ ಪರಿಶೋಧಕರ ಕಚೇರಿಗಳ ಸಿಬ್ಬಂದಿಯನ್ನು ಹೆಚ್ಚಿಸಬೇಕಾಗುತ್ತದೆ ಎನ್ನಲಾಗಿದೆ. . . . . . ಗ್ರಾಮಗಳಲ್ಲಿ ಬುಡಮಟ್ಟದ ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಹೆಸರಿನಲ್ಲಿ ಕೇಂದ್ರದ ಅಧಿಕಾರಶಾಹಿ ಕೊಬ್ಬಿ ಬೆಳೆಸಿಕೊಳ್ಳುವುದು ಒಂದು ವಿಕಟ ಅಪಹಾಸ್ಯ. . . . .

ಪ್ರತಿಯೊಂದು ರಾಜ್ಯದಲ್ಲೂ ಮೂರು ಹಂತಗಳ ಪಂಚಾಯತೀ ರಾಜ್ಯ ವ್ಯವಸ್ಥೆಯಿರಬೇಕೆಂದು ಮಸೂದೆಯಲ್ಲಿ ವಿಧಿಸಿರುವುದು ಕೂಡಾ ನೀವು ನೀಡಿದ್ದ ಭರವಸೆಗಳಿಗೆ ವ್ಯತಿರಿಕ್ತವಾಗಿದೆ. ಉದಾಃ ಕೇರಳದಲ್ಲಿ ಒಂದು ಪಂಚಾಯತಿನ ಸರಾಸರಿ ಜನಸಂಖ್ಯೆ 25ಸಾವಿರದಿಂದ 30ಸಾವಿರ. ದೇಶದ ಇತರ ಹಲವೆಡೆ ಇದು 3ಸಾವಿರದಿಂದ 4ಸಾವಿರ. ಇಂತಹ ವ್ಯಾಪಕ ಭಿನ್ನತೆಯಿರುವಾಗ ಒಂದು ಬಿರುಸಾದ, ಬಲವಂತದ ಸಮರೂಪತೆ ತರುವುದು ಬುದ್ಧಿವಂತಿಕೆಯ ಕ್ರಮವಲ್ಲ. . . . .

ನಮ್ಮ ರಾಜ್ಯ ಸರ್ಕಾರ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಪಂಚಾಯಿತೀ ರಾಜ್ಯವನ್ನು ಗಟ್ಟಿಗೊಳಿಸುವ ಪರವಾಗಿದೆ. ಇದನ್ನು ನಾವು ಕಾರ್ಯತಃ ಮಾಡಿತೋರಿಸಿದ್ದೇವೆ. ಇತರ ಕಾಂಗ್ರೆಸ್ಸೇತರ ಆಳ್ವಿಕೆಯ ರಾಜ್ಯಗಳೂ ಮಾಡಿತೋರಿಸಿವೆ. 1984ರಲ್ಲಿ ಹಿಂದಿನ ಕಾಂಗ್ರೆಸ್ (ಐ) ನೇತೃತ್ವ ವಿಸರ್ಜಿಸಿದ್ದ ಪಂಚಾಯತುಗಳಿಗೆ ಎಲ್.ಡಿ.ಎಫ್. ಸರಕಾರ ಬಂದ ಕೆಲವೇ ತಿಂಗಳಲ್ಲಿ 1988ರಲ್ಲಿ ಮತ್ತೆ ಚುನಾವಣೆ ನಡೆಸಿದ್ದೇವೆ. . . .

ನಮ್ಮ ರಾಜಕೀಯ ವ್ಯವಸ್ಥೆಗೆ ಬಹಳ ಮಹತ್ವದ್ದಾದ ಈ ವಿಷಯದಲ್ಲಿ ರಾಜ್ಯ ಸರಕಾರಗಳೊಡನೆ ಸರ್ವ ಸಮ್ಮತಿಗೆ ಬರದೆ ಆತುರ ಮಾಡಬೇಡಿ ಎಂದು ಮತ್ತೊಮ್ಮೆ ಒತ್ತಿಹೇಳಬಯಸುತ್ತೇನೆ.

ಇ.ಕೆ. ನಾಯನಾರ್

ಕೇರಳ ಮುಖ್ಯ ಮಂತ್ರಿ
ಪ್ರಧಾನಿಗೆ ಬರೆದ ಪತ್ರದ ಕೆಲವು ಅಂಶಗಳು

ತಿದ್ದುಪಡಿ ಏಕೆ?

ಕೇಂದ್ರಕ್ಕೆ ಯಾವ ಅಧಿಕಾರವೂ ಇರುವುದಿಲ್ಲ. ಅದು ರಾಜ್ಯ ವಿಧಾನ ಮಂಡಲದ ಪ್ರತ್ಯೇಕ ಅಧಿಕಾರವ್ಯಾಪ್ತಿಯೊಳಗೇ ಮುಂದುವರಿಯುತ್ತದೆ.

ಹಾಗಾದರೆ ಈ ಮಸೂದೆಯ ಉದ್ದೇಶವೇನು? ಕೇಶವಾನಂದ ಭಾರತಿ ತೀರ್ಪಿನ ಪ್ರಕಾರ ಒಕ್ಕೂಟ ತತ್ವ ನಮ್ಮ ಸಂವಿಧಾನದ ಮೂಲಭೂತ ಅಂಶ 64ನೇ ತಿದ್ದುಪಡಿ ಇದನ್ನು ಬುಡಮೇಲು ಮಾಡಲು ಪ್ರಯತ್ನಿಸುತ್ತದಷ್ಟೆ.

ಈ ಮಸೂದೆ ಅಂಗೀಕಾರವಾದರೂ ಕೂಡಾ ಸಂಸತ್ತಿಗೆ ಪಂಚಾಯತುಗಳ ಬಗ್ಗೆ ಶಾಸನ ರೂಪಿಸಲು ಯಾವ ಅಧಿಕಾರವೂ ಬರುವುದಿಲ್ಲ ಎಂಬುದನ್ನು ಪುನರುಚ್ಚರಿಸುತ್ತೇನೆ.

ಈ ಮಸೂದೆಯಲ್ಲಿ ಕೆಲವು ನಿರ್ದೇಶಕ ನೀತಿಗಳಿವೆ. ರಾಜ್ಯ ಶಾಸನ ಸಭೆಗಳು ಇದನ್ನು ಅಂಗೀಕರಿಸಬೇಕು ಎನ್ನುತ್ತದೆ ಅದು. ಉದಾಹರಣೆಗೆ ನಿಮ್ಮ ಒಂದು ರಾಜ್ಯ ಸರಕಾರ ಈ ಶಾಸನವನ್ನು ಅಂಗೀಕರಿಸದಿದ್ದರೆ? ನೀವೇನು ಮಾಡುತ್ತೀರಿ? ರಾಜ್ಯ ಪಟ್ಟಿಯ 5ನೇ ಅಂಶ ಇರುವ ವರೆಗೆ ಕೇಂದ್ರದ ಶಾಸನ ಸಭೆ ಅಂದರೆ ಸಂಸತ್ತು ಏನು ಮಾಡಲೂ ಸಾಧ್ಯವಿಲ್ಲ, ನ್ಯಾಯಾಂಗದ ಮೂಲಕವೂ [illegible]

ಹಾಗಿದ್ದರೆ ವಿವಿಧ ರಾಜ್ಯ ಶಾಸನ ಸಭೆಗಳು ಅಂಗೀಕರಿಸದಿದ್ದರೆ ಯಾವ ಪರಿಣಾಮವೂ ಇರದ ಈ ಸಂವಿಧಾನ ತಿದ್ದುಪಡಿಯ ಉದ್ದೇಶವೇನು?

ಆದ್ದರಿಂದಲೇ ನಾನು ಹೇಳುತ್ತಿರುವುದು- ಈ ಮಸೂದೆ ತಂದಿರುವುದು ಅಧಿಕಾರದ ವಿಕೇಂದ್ರೀಕರಣಕ್ಕಾಗಿ ಅಲ್ಲ. ಸಾರ್ವಜನಿಕರ ಕಣ್ಣಿಗೆ ಮಣ್ಣೆರಚುವುದು.

ಚುನಾವಣಾ ಕಸರತ್ತಷ್ಟೇ ಇದರ ಉದ್ದೇಶ. ಆದಕ್ಕಾಗಿಯೇ ಅವರು ಈ ಅಧಿವೇಶನದಲ್ಲೂ ಪಾಸು ಮಾಡಿಸಿಕೊಳ್ಳಲಿಲ್ಲ. ವಾಸ್ತವವಾಗಿ ಬಜೆಟ್ ಅಧಿವೇಶನದಲ್ಲೇ ಅದು ಅಂಗೀಕಾರವಾಗಬೇಕಿತ್ತು.

ಮುಖ್ಯ ಮಂತ್ರಿಗಳ ಎದುರು ಅವರು ಇದನ್ನು ತರಲಿಲ್ಲ. ಈ ಮಸೂದೆಯ ರೂಪರೇಷೆಗಳ ಬಗ್ಗೆಯೂ ಮುಖ್ಯ ಮಂತ್ರಿಗಳ ಕಳೆದ ಸಮ್ಮೇಳನದಲ್ಲೂ ಚರ್ಚಿಸಲಿಲ್ಲ. ಇದರ ಉದ್ದೇಶ ವಿಕೇಂದ್ರೀಕರಣವಲ್ಲ. ಜನತೆಯಲ್ಲಿ ತಮಗೆ ವಿಶ್ವಾಸವಿದೆ ಎಂದಿದ್ದಾರೆ ಅವರು. ನಮಗೂ ಇದೆ. ಜನತೆ ರಾಜ್ಯಗಳ ಅಧಿಕಾರಗಳನ್ನು ಕಿತ್ತುಕೊಳ್ಳುವ ಈ ಸರಕಾರದ ನಿಜವಾದ ಆಶಯವನ್ನು ಕಾಣಲು ಸಮರ್ಥರಾಗುತ್ತಾರೆ ಎಂಬ ದೃಢ ಅಭಿಪ್ರಾಯ ನಮ್ಮದು. ಜನತೆ ತಮ್ಮ ತೀರ್ಪು ನೀಡುತ್ತಾರೆ. ಈ ಸರಕಾರವನ್ನು ಇಳಿಸಿ, ತಮ್ಮ ತೀರ್ಪು ನೀಡುತ್ತಾರೆ.

ಪ್ರಿಯ ಪ್ರಧಾನ ಮಂತ್ರಿಗಳೇ

ಪಂಚಾಯತೀ ಮಸೂದೆಗೆ ಮಾರುಕಟ್ಟೆ ಹುಡುಕುವ ನಿಮ್ಮ ಉತ್ಸಾಹದಲ್ಲಿ ನೀವು ತ್ರಿಪುರಾದಲ್ಲಿ ಎಡರಂಗ ಸರ್ಕಾರ ಅಧಿಕಾರದಲ್ಲಿದ್ದಾಗ ಪಂಚಾಯತೀ ರಾಜ್ಯ ಅನುಷ್ಠಾನದಲ್ಲಿ ಕೆಲಸವೇನು ಮಾಡಿರಲಿಲ್ಲ ಎಂದು ಟೀಕಿಸಿದ್ದೀರಿ. ಬಹುಶಃ ನಿಮ್ಮ ಅಜ್ಞಾನದಿಂದ ಹಾಗೆ ಹೇಳಿರಬಹುದು. ಏಕೆಂದರೆ ವಾಸ್ತವ ಸಂಗತಿ ತದ್ವಿರುದ್ಧವಾಗಿದೆ. . . .

ಮೂವತ್ತು ವರ್ಷಗಳ ಕಾಂಗ್ರೆಸ್ ಮತ್ತು ಕಾಂಗ್ರೆಸ್ (ಐ) ಆಳ್ವಿಕೆಯಲ್ಲಿ ತ್ರಿಪುರಾದಲ್ಲಿ ಪಂಚಾಯತೀ ರಾಜ್ಯದ ಬಗ್ಗೆ ಯಾವ ಶಾಸನವನ್ನೂ ತರಲಿಲ್ಲ. ಚುನಾವಣೆಗಳು ಸಮಾರಾಗಿ ನಡೆದೇ ಇಲ್ಲ. ಪಂಚಾಯತುಗಳಿಗೆ ಹಣವನ್ನು ಒದಗಿಸಲಿಲ್ಲ. ಭತ್ತವನ್ನು 'ಲೆವಿ'ಯಾಗಿ ಸಂಗ್ರಹಿಸಲಷ್ಟೇ ಆಡಳಿತವೆಂಬುದಿತ್ತು. ಎಡರಂಗ ಸರ್ಕಾರ ಒಂದು ಮಾದರಿಯಾಗಬಲ್ಲ ಪಂಚಾಯತೀ ಶಾಸನ ತಂದಿತು. ಐದು ವರ್ಷಗಳಿಗೊಮ್ಮೆ ನಿಯಮಿತ ಚುನಾವಣೆ ನಡೆಯಿತು. ಪಂಚಾಯತನ್ನು ಪೂರ್ಣಪ್ರಮಾಣದ ಗ್ರಾಮಮಟ್ಟದ ಸ್ವಾಯತ್ತ ಸಂಸ್ಥೆಯಾಗಿ ಮಾಡಲಾಯಿತು. ಅದು ಪರಿವರ್ತನೆಯ ಮಾಧ್ಯಮವಾಯಿತು.

. . . . ಕಾಂಗ್ರೆಸ್ (ಐ) - ಟಿ.ಯು.ಜೆ.ಎಸ್. ಮಂತ್ರಿಮಂಡಳ ಹಿಂದೆ-ಮುಂದೆ ಯೋಚಿಸದೆ ಮಂತ್ರಿಮಂಡಳದ ಸಭೆಯನ್ನೂ ನಡೆಸದೆ 704ಚುನಾಯಿತ ಪಂಚಾಯತುಗಳನ್ನು, ಬ್ಲಾಕ್ ಅಭಿವೃದ್ಧಿ ಸಮಿತಿಗಳನ್ನು, ಸಹಕಾರ ಸಂಘಗಳನ್ನು ಮತ್ತು ಅಗರ್ತಲಾ ನಗರಸಭೆಯನ್ನು ಯಾವ ಆಧಾರದ ಮೇಲೆ ವಿಸರ್ಜಿಸಿತು ಎಂದು ನಾನು ಕೇಳಬಹುದೇ? ಅವುಗಳ ಸ್ಥಾನದಲ್ಲಿ "ಹೌದಪ್ಪ"ಗಳು ತುಂಬಿದ "ಅಭಿವೃದ್ಧಿ ಸಮಿತಿ"ಗಳನ್ನು ಏಕೆ ನೇಮಿಸಲಾಯಿತು? . . . .

ಕಾಂಗ್ರೆಸ್ (ಐ) - ಟಿ.ಯು.ಜೆ.ಎಸ್. ಕೂಟದ ಸರ್ಕಾರಕ್ಕೆ ಸಂಸದೀಯ ಪ್ರಜಾಸತ್ತೆ, ಯಾವುದೇ ಚುನಾಯಿತ ಸಂಸ್ಥೆಯೆಂದರೆ ಪ್ರಾಣಭಯ ಸಹಜವೇ. ಯಾಕೆಂದರೆ ಅವರನ್ನು ಅಧಿಕಾರಕ್ಕೆ ತಂದಿರುವುದು ತ್ರಿಪುರಾದ ಜನತೆಯಲ್ಲ, ನೀವು. ಸೇನೆ ನುಗ್ಗಿಸಿ ಅರೆ ಸೈನಿಕ ತುಕಡಿಗಳನ್ನು ನಿಲ್ಲಿಸಿ, "ಗಲಭೆ ಪೀಡಿತ ಪ್ರದೇಶವೆಂದು ಘೋಷಿಸಿ ನೀವು ಅವರನ್ನು ಅಧಿಕಾರಕ್ಕೆ ತಂದಿರಿ . . . .

ಭಾರತದಂತಹ 80 ಕೋಟಿ ಜನಸಂಖ್ಯೆಯ, ಒಂದು ಮಹಾನ್ ದೇಶಪ್ರೇಮಿ ಪರಂಪರೆಯ ದೇಶದ ಪ್ರಧಾನ ಮಂತ್ರಿ ತ್ರಿಪುರಾದಂತಹ ಸಣ್ಣ ರಾಜ್ಯದಲ್ಲಿ ಚುನಾವಣೆ ಗೆಲ್ಲಲು ಇಷ್ಟೊಂದು ಹೊಲಸು ರೀತಿಯ ಕಸರತ್ತು ನಡೆಸುತ್ತಾನೆಂದರೆ ಅಂತಹ ಪ್ರಧಾನ ಮಂತ್ರಿ ಈಗ ಕೆಲವು ಮತ ಪಡೆಯಲು ಪ್ರಜಾಪ್ರಭುತ್ವವಾದಿಯಾಗಿ ಪೋಸು ಕೊಡುವ ದಲಿತರ ಬಗ್ಗೆ ಮೊಸಳೆ ಕಣ್ಣೀರು ಹರಿಸುವುದರಲ್ಲಿ ವಿಶೇಷವೇನಿಲ್ಲ.

ನೃಪೇನ್ ಚಕ್ರವರ್ತಿ

ತ್ರಿಪುರಾದ ಮಾಜಿಮುಖ್ಯಮಂತ್ರಿ
ಪ್ರಧಾನಮಂತ್ರಿಗೆ ಬರೆದ ಪತ್ರದಿಂದ

ಪಂಚಾಯತುಗಳು ಹಿಂದೆ ಕೆಲಸ ಮಾಡದಿರಲು ಒಂದು ಕಾರಣ ಅವು ಕೆಲವೇ ಜನರ ಆಡಳಿತವಾಗಿದ್ದುದು ಎಂದು ಅಶೋಕ ಮೆಹ್ತಾ ಸಮಿತಿ ಹೇಳಿತ್ತು.

ಪಶ್ಚಿಮ ಬಂಗಾಳದಲ್ಲಿ ಪಂಚಾಯತುಗಳು ಯಶಸ್ವಿ ಫಲಿತಾಂಶ ನೀಡಲು ಸಾಧ್ಯವಾಗಿರುವುದು ಭೂಸುಧಾರಣೆಗಳ ಮೂಲಕ ಭೂಮಾಲೀಕರ ಅಧಿಕಾರ ಮತ್ತು ಪ್ರಾಬಲ್ಯವನ್ನು ಮುರಿದದ್ದರಿಂದ.

ಈ ರೀತಿಯ ಭೂಸುಧಾರಣೆಗಳಿಲ್ಲದೆ, ಪ್ರಖ್ಯಾತ ಪತ್ರಕರ್ತ ನಿಖಿಲ್ ಚಕ್ರವರ್ತಿಯವರು ಹೇಳಿರುವಂತೆ ಜವಾಹರ್ ಉದ್ಯೋಗ ಯೋಜನೆಯ ಫಲ ಕೂಡಾ ಅದು ನಿಜವಾಗಿ ಅಗತ್ಯವಿದ್ದವರಿಗೆ ದಕ್ಕದೆ ಭೂಮಾಲೀಕರ ಪಾಲಾಗುತ್ತದೆ. ಯಾಕೆಂದರೆ ಭೂಸುಧಾರಣೆಯಿಲ್ಲದೆ ಪಂಚಾಯತುಗಳ ಹತೋಟಿ ಪಡೆಯುವವರು ಭೂಮಾಲೀಕರು, ಗ್ರಾಮೀಣ ಬಡವರಲ್ಲ.

—ಪಿ.ಕೆ.[illegible]
ಎ.ಐ.ಕೆ.ಎಸ್.ಜಂಟಿ ಕಾರ್ಯದರ್ಶಿ

ಪ್ರಾಮಾಣಿಕವಾಗಿದ್ದರೆ ಪರ್ಯಾಯವೇಕೆ ಬೇಡ?

4 ನೇ ಪುಟದಿಂದ

ನಾವು ಕೆಲವರೊಡನೆ ಸಮಾಲೋಚನೆ ನಡೆಸಿದರು. ರಾಜ್ಯಗಳಿಂದ ಕೆಳಗಿನ ಹಂತಗಳಿಗೆ ಅಧಿಕಾರದ ವಿಕೇಂದ್ರೀಕರಣಕ್ಕೂ ಕೇಂದ್ರದಿಂದ ರಾಜ್ಯಗಳಿಗೆ ವಿಕೇಂದ್ರೀಕರಣಕ್ಕೂ ಅನ್ಯೋನ್ಯಸಂಬಂಧವಿದೆ. ನಾಲ್ಕು ಕಂಬಗಳ ಪ್ರಜಾಪ್ರಭುತ್ವ ಎಂದು ಯಾವುದನ್ನು ಹೇಳುತ್ತಾರೋ ಅದು ಕೇಂದ್ರ ತನ್ನ ಹಲವಾರು ಅಧಿಕಾರಗಳನ್ನು ರಾಜ್ಯಗಳಿಗೆ ವರ್ಗಾಯಿಸಿದಾಗ, ಅದಕ್ಕನುಗುಣವಾಗಿ ರಾಜ್ಯಗಳು ತಮ್ಮ ಹಲವಾರು ಅಧಿಕಾರಗಳನ್ನು ಕೆಳಗಿನ ಹಂತಗಳಿಗೆ ವರ್ಗಾಯಿಸಿದಾಗ ಮಾತ್ರ ಸ್ಥಾಪನೆಗೊಳ್ಳುತ್ತದೆ ಎಂದು ನಾನು ನನ್ನ ಅಭಿಪ್ರಾಯ ಮಂಡಿಸಿದ್ದೆ. ಆದರೆ ಪ್ರಧಾನ ಮಂತ್ರಿ ದೇಸಾಯಿಯವರು ನನ್ನ ಸೂಚನೆಯನ್ನು ತಿರಸ್ಕರಿಸಿದರು. ಅಶೋಕಮೆಹ್ತಾ ಸಮಿತಿಯ ತನಿಖೆಯ ವ್ಯಾಪ್ತಿಯನ್ನು ರಾಜ್ಯದಿಂದ ಪಂಚಾಯತುಗಳಿಗೆ ಅಧಿಕಾರ ವರ್ಗಾವಣೆಗಷ್ಟೇ ಸೀಮಿತ-ಗೊಳಿಸಲಾಯಿತು.

1978 ರಲ್ಲಿ ತನ್ನ ವರದಿ ಸಲ್ಲಿಸಿದ ಅಶೋಕ ಮೆಹ್ತಾ ಸಮಿತಿ ಹೀಗೆ ಅಭಿಪ್ರಾಯಪಟ್ಟಿತು.

"ಪಂಚಾಯತೀ ರಾಜ್ಯ ಅನಿವಾರ್ಯ ಎಂದು ಒಪ್ಪಿಕೊಳ್ಳುವ ತರ್ಕವನ್ನೇ ವಿಸ್ತರಿಸುವುದಾದರೆ ಕೇಂದ್ರದಿಂದ ರಾಜ್ಯಗಳಿಗೆ ಜವಾಬ್ದಾರಿ ಮತ್ತು ಅಧಿಕಾರಗಳ ವರ್ಗಾವಣೆಯೂ ಅಗತ್ಯ ಎಂಬುದು ಕಂಡು ಬರುತ್ತದೆ. ಇದೊಂದು ಕ್ಲಿಷ್ಟ ಸಮಸ್ಯೆ. ಇದರ ಪರಿಶೀಲನೆಯನ್ನು ಈ ಸಮಿತಿಗೆ ಒಪ್ಪಿಸಿಲ್ಲ. ಆದರೂ ಪಂಚಾಯತೀ ರಾಜ್ಯ ಸಂಸ್ಥೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಎಲ್ಲಾ ಹಂತಗಳಲ್ಲಿ ವಿಕೇಂದ್ರೀಕರಣ ಅಗತ್ಯ ಎಂದು ಸಮಿತಿ ಭಾವಿಸುತ್ತದೆ.

"ಅಧಿಕಾರದ ಕೇಂದ್ರೀಕರಣದ ಪ್ರವೃತ್ತಿ ಕಂಡುಬಂದರೇ ಸಾಕು ಪಂಚಾಯತೀ ರಾಜ್ಯದ ಹಿಂದಿರುವ ತರ್ಕವೇ ಶೂನ್ಯವಾಗುತ್ತದೆ. ಎಲ್ಲಾ ಹಂತಗಳಲ್ಲಿ ವಿಕೇಂದ್ರೀಕರಣದ ತತ್ವಗಳಿಗೆ ಬದ್ಧವಾಗಿದ್ದರೆ ಪಂಚಾಯತೀ ರಾಜ್ಯ ಸಂಸ್ಥೆಗಳು ಅವುಗಳಿಂದ ನಿರೀಕ್ಷಿಸುವ ಕೆಲಸ ಪೂರೈಸಲು ಅಸಮರ್ಥವಾಗುತ್ತವೆ. ನಾವು ರಾಜ್ಯದಿಂದ ಜಿಲ್ಲೆಗೆ ಮತ್ತು ಅದಕ್ಕಿಂತ ಕೆಳಗಿನ ಹಂತಗಳಿಗೆ ಅಭಿವೃದ್ಧಿ ಜವಾಬ್ದಾರಿಗಳ ವ್ಯಾಪಕ ವಿಕೇಂದ್ರೀಕರಣದ ಹೊಣೆಯನ್ನು ಕೊಡುತ್ತಿದ್ದೇವೆ.

"ಇದೇ ರೀತಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ಅಧಿಕಾರಗಳ ವಿತರಣೆಯ ವಿಧಾನ ಹೇಗಿರಬೇಕೆಂದು ಸೂಚಿಸುವ ಅಧಿಕಾರ ವ್ಯಾಪ್ತಿ ನಮಗಿಲ್ಲ ವಾದರೂ ರಾಜ್ಯ ಸರಕಾರದಿಂದ ಸ್ಥಳೀಯ ಸಂಸ್ಥೆಗಳಿಗೆ ಗಣನೀಯ ಪ್ರಮಾಣದಲ್ಲಿ ಅಧಿಕಾರಗಳನ್ನು ವರ್ಗಾಯಿಸುವ ನಮ್ಮ ಶಿಫಾರಸುಗಳು ಕೇಂದ್ರ ಮತ್ತು ರಾಜ್ಯಗಳ ನಡುವೆ ಈಗಿರುವ ಅಧಿಕಾರ ವಿತರಣೆಯ ಮೇಲೆ ಕೂಡಾ ಪರಿಣಾಮ ಬೀರಲಿವೆ. ಈ ಬಗ್ಗೆ ಒಂದು ವಿವರವಾದ ಪ್ರತ್ಯೇಕ ಪರಿಶೀಲನ ಬೇಕು"

ಮೊರಾರ್ಜಿ ಸರಕಾರಕ್ಕೆ ಅಶೋಕ ಮೆಹ್ತಾ ಸಮಿತಿಯ ವರದಿಯನ್ನು ಜಾರಿಗೆ ತರುವಷ್ಟು ಸಮಯವಿರಲಿಲ್ಲ. ಸಮಯವಿದ್ದರೂ ಕೇಂದ್ರ -ರಾಜ್ಯ ಸಂಬಂಧಗಳ ಪ್ರಶ್ನೆಯನ್ನು ಅದು ಎತ್ತಿಕೊಳ್ಳುತ್ತಿತ್ತೆಂಬ ಭರವಸೆ ನನಗಿಲ್ಲ. ಯಾಕೆಂದರೆ ಈ ವಿಷಯದಲ್ಲಿ ಮೊರಾರ್ಜಿ ದೇಸಾಯಿ ಮತ್ತು ಇಂದಿರಾ ಗಾಂಧಿ ಸಮಾನ ಅಭಿಪ್ರಾಯ ಹೊಂದಿದ್ದರು ಎನ್ನುವುದು ಎಲ್ಲರಿಗೂ ತಿಳಿದ ಸಂಗತಿ.

ಐದು ವರ್ಷಗಳ ನಂತರ ಎರಡನೇ ಇಂದಿರಾ ಗಾಂಧಿ ಸರ್ಕಾರ ಆಂಧ್ರದ ಮತ್ತು ಕರ್ನಾಟಕದಲ್ಲಿ ದಂಗು ಬಡಿಸಿದ ಚುನಾವಣಾ ಸೋಲಿನ ನಂತರ) ಅಶೋಕ ಮೆಹ್ತಾ ಸಮಿತಿ ಹೇಳಿದ "ವಿವರವಾದ ಪ್ರತ್ಯೇಕ ಪರಿಶೀಲನೆ" ನಡೆಸಲು ಸರ್ಕಾರಿಯಾ ಆಯೋಗ ನೇಮಿಸ ಬೇಕಾಯಿತು ಎಂಬುದು ಗಮನಾರ್ಹ.

ರಾಜೀವ್ ಸರ್ಕಾರಕ್ಕೆ ಸರ್ಕಾರಿಯಾ ಆಯೋಗ ತನ್ನ ವರದಿ ಸಲ್ಲಿಸಿ ಎರಡು ವರ್ಷಗಳಾಗುತ್ತಾ ಬಂತು. ಅದರ ಒಂದು ಟಿಪ್ಪಣಿ ಹೀಗಿತ್ತು-

"ಅಧಿಕಾರಗಳ ಹೆಚ್ಚೆಚ್ಚು ಕೇಂದ್ರೀಕರಣ ಒಂದು ಸಾರ್ವತ್ರಿಕ ಪ್ರವೃತ್ತಿಯಿರುವುದರಿಂದ ಭಾರತದಂತಹ ದೇಶದಲ್ಲಿ ಇದನ್ನು ತಡೆಯಲು ಸದಾ ಪ್ರಜ್ಞಾಪೂರ್ವಕ ಹಾಗೂ ಉದ್ದೇಶಪೂರಿತ ಪ್ರಯತ್ನ ಅಗತ್ಯ. ಅನಗತ್ಯ ಕೇಂದ್ರೀಕರಣದಿಂದ ಕೇಂದ್ರದಲ್ಲಿ ರಕ್ತ ಒತ್ತಡ ಉಂಟಾಗುತ್ತದೆ ಹಾಗೂ ಅಂಚುಗಳಲ್ಲಿ ರಕ್ತಹೀನತೆ ಉಂಟಾಗುತ್ತದೆ ಎಂಬ ಮಾತಿನಲ್ಲಿ ಸಾಕಷ್ಟು ಸತ್ಯವಿದೆ. ಇದರ ಅನಿವಾರ್ಯ ಫಲಿತಾಂಶವೆಂದರೆ ಜಾಢ್ಯ ಮತ್ತು ಅದಕ್ಷತೆ. ಕೇಂದ್ರೀಕರಣ ಯಾವುದೇ ಸಮಸ್ಯೆಯನ್ನು ಪರಿಹರಿಸುವುದಿಲ್ಲ. ಅದನ್ನು ಉಲ್ಬಣಗೊಳಿಸುತ್ತದೆ"

ಹೀಗೆ ಸರ್ಕಾರಿಯಾ ಆಯೋಗದ ಅಭಿಪ್ರಾಯದಲ್ಲಿ, ರಾಜ್ಯಗಳಿಂದ ಕೆಳಗಿನ ಆಡಳಿತ ಹಂತಗಳಿಗೆ ವಿಕೇಂದ್ರೀಕರಣಕ್ಕೂ ಕೇಂದ್ರದಿಂದ ರಾಜ್ಯಗಳಿಗೆ ವಿಕೇಂದ್ರೀಕರಣಕ್ಕೂ ಒಂದು ಸಮಗ್ರ ಸಂಬಂಧವಿದೆ. ವಾಸ್ತವವಾಗಿ ಅದು ಈ ಬಗ್ಗೆ ಸಲಹೆಗಳನ್ನು ನೀಡಿದೆ. ಸಂವಿಧಾನದ 263ನೇ ಕಲಮಿನ ಪ್ರಕಾರ ರಚಿಸಬೇಕೆಂದು ಅದು ಸಲಹೆ ಮಾಡಿದ ಅಂತರ-ರಾಜ್ಯ ಮಂಡಳಿ ಸರ್ವಸಮ್ಮತಿಯ ಮೇಲೆ ಒಂದು ಮಾದರಿ ಮಸೂದೆಯನ್ನು ರೂಪಿಸಬೇಕು. ನಂತರ ರಾಜ್ಯ ಶಾಸನ ಸಭೆಗಳು ಪಂಚಾಯತೀ ರಾಜ್ಯ ಸಂಸ್ಥೆಗಳಿಗೆ ಅಧಿಕಾರಗಳನ್ನು ವರ್ಗಾಯಿಸಲು ಶಾಸನಗಳನ್ನು ಅಂಗೀಕರಿಸಬಹುದು ಎಂದು ಆಯೋಗ ಸೂಚಿಸಿದೆ.

ಆಯೋಗ ಇದಕ್ಕೆ ಒಂದು ಪರ್ಯಾಯ ವಿಧಾನವೊಂದನ್ನು ಸೂಚಿಸಿದೆ. ಎಲ್ಲಾ ರಾಜ್ಯ ಶಾಸನ ಸಭೆಗಳ ಸಮ್ಮತಿಯೊಂದಿಗೆ ಕಲಮು 252(1) ರ ಪ್ರಕಾರ ಸಂಸತ್ತು ಈ ಬಗ್ಗೆ ಒಂದು ಕಾನೂನು ಅಂಗೀಕರಿಸಬಹುದು.

ಈ ಎರಡು ವಿಧಾನಗಳನ್ನು ಅನುಸರಿಸಲು ವಿಫಲವಾದರೆ ಮಾತ್ರವೇ ಕಲಮು 368 ರ ಪ್ರಕಾರ ಸಂವಿಧಾನಕ್ಕೆ ತಿದ್ದುಪಡಿ ತರುವ ಸೂಚನೆಯನ್ನು ಅದು ನೀಡಿದೆ.

ಪ್ರಧಾನಮಂತ್ರಿಯವರಿಗೆ ಸರ್ಕಾರಿಯಾ ಆಯೋಗ ಎರಡು ವಿಧಾನಗಳನ್ನು ಸೂಚಿಸಿದೆ ಎಂಬ ಅರಿವೇ ಇದ್ದಂತಿಲ್ಲ. 'ಸಂಸತ್ತಿನಲ್ಲಿ ತೆಲುಗು ದೇಶಂ ಸದಸ್ಯರಾದ ಮಾಧವ ರೆಡ್ಡಿಯವರು ಮಾತನಾಡುವಾಗ ತಡೆದು "ಈ ಮಸೂದೆಯಲ್ಲದಿದ್ದರೆ ಬೇರೆಯಾವ ರೀತಿಯಿಂದ ಪಂಚಾಯತು ರಾಜ್ಯ ಸಂಸ್ಥೆಗಳಿಗೆ ವಿಕೇಂದ್ರೀಕರಣ ಸಾಧ್ಯ ಎಂದು ಮಾನ್ಯ ಸದಸ್ಯರು ತಿಳಿಸಬೇಕಾಗಿ ಕೋರುತ್ತೇವೆ" ಎಂಬ ಆಶ್ಚರ್ಯಕಾರಕ ಪ್ರಶ್ನೆ ಹಾಕಿದರು. ಆಯೋಗ ಸೂಚಿಸಿದಂತೆ ರಾಜ್ಯ ಸರಕಾರಗಳ ಮತ್ತು ಶಾಸನ ಸಭೆಗಳ ಸಮ್ಮತಿಯೊಂದಿಗೆ ಶಾಸನ ತರಲು ಪ್ರಧಾನ ಮಂತ್ರಿಗಳಿಗೆ ತಕರಾರು ಏಕೆ?

ಸರ್ಕಾರಿಯಾ ಆಯೋಗದ ಶಿಫಾರಸುಗಳನ್ನು ಸ್ವೀಕರಿಸಿದ್ದರೆ ಈ ತಿದ್ದುಪಡಿ ಮಸೂದೆಯಲ್ಲಿ ಇರುವಂತೆ ರಾಜ್ಯಗಳ ಹಕ್ಕುಗಳ ಮೇಲೆ ಅತಿಕ್ರಮಣ ಇರುತ್ತಿರಲಿಲ್ಲ. ಪಂಚಾಯತೀ ರಾಜ್ಯ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಬೇಕೆಂಬ ಬಗ್ಗೆ ರಾಜಕೀಯ ಪಕ್ಷಗಳಲ್ಲಿ ಸರ್ವಾನುಮತವಿದೆ. ಆದ್ದರಿಂದ ಸಂವಿಧಾನದ ರಾಜ್ಯ ಪಟ್ಟಿಯಿಂದ ಯಾವುದೇ ವಿಷಯದಲ್ಲಿ ತೆಗೆಯದೇ ರಾಜ್ಯಗಳ ಅಧಿಕಾರದೊಳಗೆ ಅತಿಕ್ರಮಣ ನಡೆಸದೆ ಬದಲಾಗಿ ರಾಜ್ಯಗಳ ಸಮ್ಮತಿಯಿಂದ ಈ ಉದ್ದೇಶ ಸಾಧನೆ ಸಾಧ್ಯವಿದೆ.

ಆದ್ದರಿಂದ ಈಗಿರುವ ಪ್ರಶ್ನೆ ರಾಜೀವ್ ಗಾಂಧಿಯವರು ಮೇ 15 ರಂದು ಮಂಡಿಸಿದ ಮಸೂದೆಯನ್ನು ವಾಪಾಸು ಪಡೆದು ಸರ್ಕಾರಿಯಾ ಆಯೋಗದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತಂದು ರಾಜ್ಯಗಳ ಸಮ್ಮತಿಯೊಂದಿಗೆ ಒಂದು ಸಾಮಾನ್ಯ ಶಾಸನವನ್ನು ತರಲು ಸಿದ್ಧರಿರುವರೇ?

ಇ.ಎಂ.ಎಸ್.ನಂಬೂದರಿ ಪ್ಯಾಡ್

ಪಂಚಾಯತೀ ರಾಜ್ಯ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡಬೇಕು, ನಿಯಮಿತವಾಗಿ ಚುನಾವಣೆಗಳು ನಡೆಯಬೇಕೆಂಬ ಬಗ್ಗೆಯಷ್ಟೇ ಅವರು ಕಾತುರರಾಗಿದ್ದರೆ ಅವರು ಮಾಡಬೇಕಾಗಿಯುವುದು ಇಷ್ಟೇ.

ಆದರೆ ರಾಜೀವ್ ಗಾಂಧಿ ಸರಕಾರದ ತಲೆ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಸಂಸತ್ತಿನಲ್ಲಿ ಚರ್ಚೆ ನಡೆಯುವಾಗ ಮಾನವ ಸಂಪನ್ಮೂಲಗಳ ಮಂತ್ರಿ ಶಿವಶಂಕರ್ ಮಾತು ಬಯಲಿಗೆಳೆದಿದೆ. ಸಂಸತ್ತು ಈ ತಿದ್ದುಪಡಿ ಅಂಗೀಕರಿಸಿದ ನಂತರ ಒಂದೆರಡು ಶಾಸನ ಸಭೆಗಳು ಇದನ್ನು ಅಂಗೀಕರಿಸಲು ನಿರಾಕರಿಸಿದರೆ ಏನಾಗುತ್ತದೆ ಎಂದು ಪ್ರಶ್ನಿಸಿದಾಗ ಅವರದ್ದು ಸರಳ ಉತ್ತರ-ಇಂತಹ ರಾಜ್ಯಗಳ ಸರಕಾರಗಳನ್ನು 356ನೇ ಕಲಮಿನ ಪ್ರಕಾರ ವಜಾ ಮಾಡಲಾಗುವುದು! ಇದರ ಪರಿಣಾಮವೇನು?

ಇದೊಂದು ಕಾಲ್ಪನಿಕ ಪ್ರಶ್ನೆಯಲ್ಲ. ಪಂಚಾಯತೀ ರಾಜ್ಯ ಸಂಸ್ಥೆಗಳಲ್ಲಿ ಎಷ್ಟು ಹಂತಗಳಿರಬೇಕೆಂದು ಆಯಾಯ ರಾಜ್ಯಗಳೇ ನಿರ್ಧರಿಸಲು ಬಿಡಬೇಕೆಂದು ಅಶೋಕ ಮೆಹ್ತಾ ಸಮಿತಿ ಸೂಚಿಸಿತು. ಆದರೆ ರಾಜೀವ ಗಾಂಧಿಯವರ ಮಸೂದೆ ಎಲ್ಲಾ ರಾಜ್ಯಗಳು ಒಂದೇ ರೀತಿಯಲ್ಲಿ ಮೂರು ಹಂತಗಳನ್ನು ಹೊಂದಿರಬೇಕೆಂದು ವಿಧಿಸುತ್ತದೆ. ಈಗಾಗಲೇ ಕೇರಳ ಮತ್ತು ಕರ್ನಾಟಕದ ಶಾಸನ ಸಭೆಗಳು (ಕಾಂಗ್ರೆಸ್ ಸದಸ್ಯರೂ ಸೇರಿದಂತೆ) ಅವಿರೋಧವಾಗಿ ಎರಡು ಹಂತದ ವ್ಯವಸ್ಥೆಯನ್ನು ಅಂಗೀಕರಿಸಿವೆ.

ಆ ರಾಜ್ಯಗಳು ಈಗ ಮತ್ತೆ ಮೂರು ಹಂತದ ವ್ಯವಸ್ಥೆಗೆ ಏಕೆ ಬದಲಿಸಬೇಕು? ಹಾಗೆಂದು ಬದಲಿಸದಿದ್ದರೆ ಶಿವಶಂಕರ್‌ರವರ 356 ನೇ ಕಲಮಿನ ಬೆದರಿಕೆ ಎದುರಿಸಬೇಕು! ಅಂದರೆ ಒಂದೊ ತಮ್ಮದೇ ಸರ್ವಸಮ್ಮತ ಅಭಿಪ್ರಾಯವನ್ನು ಕೈಬಿಡಬೇಕು ಅಥವಾ ವಜಾಗೊಳ್ಳಬೇಕು! ಆಗ ಮರು ಚುನಾವಣೆಗಳಂತೂ ನಡೆಯಲೇಬೇಕು. ಆ ಚುನಾವಣೆಯಲ್ಲಿ ಇದೇ ಪ್ರಮುಖ ಚರ್ಚಾ ವಿಷಯವಾಗುತ್ತದೆ. ಮತದಾರರು ಎರಡು ಹಂತದ ವ್ಯವಸ್ಥೆಯನ್ನೇ ಆರಿಸಿದರೆ ಮುಂದೇನು?

ಈ ಶಾಸನದ ಸಂವಿಧಾನ ಬದ್ಧತೆಯನ್ನು ಖಂಡಿತಾ ಸುಪ್ರೀಂಕೋರ್ಟಿನಲ್ಲಿ ಪ್ರಶ್ನಿಸಲಾಗುತ್ತದೆ ಎಂದು ಸಂಸತ್ತಿನಲ್ಲಿ ವಿರೋಧ ಪಕ್ಷಗಳ ಸದಸ್ಯರು ತಮ್ಮ ಭಾಷಣಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಪರಿಣಾಮ "ಪ್ರಜಾಪ್ರಭುತ್ವವನ್ನು ಬಡಮಟ್ಟದವರೆಗೂ ತರುವ "ಘೋಷಿತ ಉದ್ದೇಶವನ್ನು ತುರ್ತಾಗಿ ಜಾರಿ ಗೊಳಿಸುವ ಬದಲು ದೀರ್ಘಕಾಲದ ನ್ಯಾಯಪಂಚಾಯತಿ ಇದರ ಬದಲು ಸರ್ಕಾರಿಯಾ ಆಯೋಗ ಸೂಚಿಸಿದ ರಾಜ್ಯ ಸರ್ಕಾರಗಳ ಸಮ್ಮತಿಯಿಂದ ಶಾಸನ ತರಬಹುದಾದ ಎರಡು ಪರ್ಯಾಯಗಳಲ್ಲಿ ಒಂದನ್ನು ಏಕೆ ಆರಿಸಿಕೊಳ್ಳಬಾರದು?

ಪ್ರಜಾಪ್ರಭುತ್ವ ವಿಕೇಂದ್ರೀಕರಣದ ಬದಲು ಲೋಕಸಭಾ ಚುನಾವಣೆಗಳಲ್ಲಿ ಒಂದು ಭಾಷಣದ ವಿಷಯ ಪಡೆಯುವುದಷ್ಟೇ ಸರ್ಕಾರದ ಉದ್ದೇಶವಾಗಿದ್ದರೆ ಆಗ ಮಾತು ಬೇರೆ.

ಬಂಗಾಳದ ಅನುಭವ

ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ರಚನೆಯಾದ ತಕ್ಷಣ ನಾವು ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಮತ್ತೆ ತರಲು ನಿರ್ಧರಿಸಿದೆವು. ಅಂದಿನಿಂದ ಇದುವರೆಗೆ ನಾವು ಮೂರು ಸಾರ್ವತ್ರಿಕ ಚುನಾವಣೆ ಗಳನ್ನು ನಡೆಸಿದ್ದೇವೆ. ಅವು ಜನತೆ ಯಲ್ಲಿ ಉತ್ಸಾಹವನ್ನು ಮೂಡಿಸಿವೆ. ಜನತೆಯ ಪ್ರತಿನಿಧಿಗಳಿಗೆ ನಾವು ಹೆಚ್ಚೆಚ್ಚು ಅಧಿಕಾರಗಳನ್ನು ವರ್ಗಾಯಿಸಿದ್ದೇವೆ. ಗ್ರಾಮೀಣ ಅಭಿವೃದ್ಧಿಯ ಎಲ್ಲಾ ಆಯಾಮಗಳಲ್ಲಿ ಈಗ ಪಂಚಾಯಿತಿ ಸಂಸ್ಥೆಗಳು ಒಳಗೊಂಡಿವೆ.

ಇವನ್ನೆಲ್ಲಾ ಮಾಡುವಾಗ ನಾವು ಹೊಸ ಹಾದಿ ನಿರ್ಮಿಸಬೇಕಾಗಿ ಬಂತು. ಹಲವಾರು ಕ್ಷೇತ್ರಗಳಲ್ಲಿ ನಾವು ಹೊಸ ಸಂಶೋಧಕರಾಗಿ ಮೂಡಿ ಬಂದಿದ್ದೇವೆ. ಆದ್ದರಿಂದ ನ್ಯಾಯವಾಗಿಯೇ ನಮ್ಮ ಸಾಧನೆಗಳ ಬಗ್ಗೆ ಹೆಮ್ಮೆ ಪಡಬಹುದು. ಒಂದು ರೀತಿಯಲ್ಲಿ ನಮ್ಮನ್ನು ಪಂಚಾಯಿತೀ ರಾಜ್ಯ ಆಂದೋಲನದ ಪ್ರವರ್ತಕರೆಂದೇ ಹೇಳಬಹುದು. ಆದರೆ ಪಂಚಾಯಿತೀ ರಾಜ್ಯ ವ್ಯವಸ್ಥೆಯನ್ನು ಯಶಸ್ವಿಗೊಳಿಸುವ ಪ್ರಯತ್ನದಲ್ಲಿ ನಾವು ಹಲವು ತೊಂದರೆಗಳನ್ನು, ಕ್ಲಿಷ್ಟತೆಗಳನ್ನು ಎದುರಿಸಬೇಕಾಗಿ ಬಂತು. ಅವನ್ನು ತಮ್ಮೊಡನೆ ಚರ್ಚಿಸಿ ನಿಮ್ಮ ಸಾಮೂಹಿಕ ಅನುಭವದಿಂದ ಕಲಿತು ನ್ಯೂನತೆಗಳನ್ನು ಸರಿಪಡಿಸಬಯಸುತ್ತೇವೆ.

. . . .ಇನ್ನೊಂದು ಅಂಶ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಪಶ್ಚಿಮ ಬಂಗಾಳದಲ್ಲಿ, ಪಂಚಾಯತೀ ಸಂಸ್ಥೆಗಳ ರಚನೆಯ ಮೊದಲು ಸಮಗ್ರ ಭೂಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲಾಗಿತ್ತು. ಇದರಿಂದಾಗಿ ಪಂಚಾಯತುಗಳಲ್ಲಿ ಕೃಷಿ ಕಾರ್ಮಿಕರು ಮತ್ತು ಬಡರೈತರು ತಮ್ಮ ಸ್ಥಾನ ದಕ್ಕಿಸಿಕೊಳ್ಳುವುದು ಸಾಧ್ಯವಾಯಿತು. ಆದರೆ ಭೂಸುಧಾರಣೆಯ ಮೇಲೆ ಈ ಒತ್ತು ಕೇರಳ, ತ್ರಿಪುರಾ, ಮತ್ತು ಪಶ್ಚಿಮ ಬಂಗಾಳ ಬಿಟ್ಟು ಇತರೆಡೆ ಕಾಣುತ್ತಿಲ್ಲ. ನನ್ನ ಅಭಿಪ್ರಾಯದಲ್ಲಿ ಪಂಚಾಯತುಗಳಿಗೆ ಅಧಿಕಾರದ ವರ್ಗಾವಣೆ ಯಶಸ್ವಿಯಾಗಬೇಕಾದರೆ ಭೂಸುಧಾರಣೆಯ ಮೇಲೆ ಒತ್ತು ನೀಡದೆ ಪಂಚಾಯತುಗಳು ರಚನೆಯಾದರೆ ಪ್ರತಿನಿಧಿಗಳು ಬಡ ವರ್ಗಗಳನ್ನು ಪ್ರತಿನಿಧಿಸಲಿಕ್ಕಿಲ್ಲ. ಆಗ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣದ ಸಂಪೂರ್ಣ ಪ್ರಯೋಗವೇ ಅಂತ್ಯದಲ್ಲಿ ಗ್ರಾಮೀಣ ಪಟ್ಟ ಭದ್ರ ಹಿತಾಸಕ್ತಿಗಳನ್ನು ಬಲಗೊಳಿಸಬಹುದು.

ಬಿನೋಯ್ ಕೃಷ್ಣ ಚೌಧರಿ
ಪ. ಬಂಗಾಳದ ಭೂಸುಧಾರಣೆ ಮತ್ತು ಪಂಚಾಯತು ಮಂತ್ರಿ

(ಎಪ್ರಿಲ್ 30ರಿಂದ 7ರ ವರೆಗೆ ಕಲ್ಕತ್ತೆಯಲ್ಲಿ ನಡೆದ ಉತ್ತರ ಮತ್ತು ಪೂರ್ವ ಭಾಗ್ಯಗಳ ಪಂಚಾಯತೀ ರಾಜ್ಯ ಸಮ್ಮೇಳನದಲ್ಲಿ ಮಾತನಾಡುತ್ತಾ.)



ಸಿಲಿಗುರಿ ಪಂಚಾಯತು ಚುನಾವಣೆಗಳಲ್ಲಿ ಸಿ.ಪಿ.ಐ.(ಎಂ) ವಿಜಯ

ಪಶ್ಚಿಮ ಬಂಗಾಳದ ಸಿಲಿಗುರಿಯ ಮೂರೂ ಹಂತದ ಪಂಚಾಯತು ಸಂಸ್ಥೆಗಳಲ್ಲಿ ಜೂನ್ 10ರಂದು ನಡೆದ ಚುನಾವಣೆಗಳಲ್ಲಿ, ಎಡರಂಗ ಬಹುಮತಗಳಿಸಿದೆ. ಕಾಂಗ್ರೆಸ್(ಐ) ತನ್ನ ಹಳೆಯ ನೆಲೆಗಳಲ್ಲೂ ಸೋಲುಂಡಿದೆ.

19 ಗ್ರಾಮ ಪಂಚಾಯತುಗಳಲ್ಲಿ ಸಿ.ಪಿ.ಐ.(ಎಂ) 15ರಲ್ಲಿ ಬಹುಮತ ಪಡೆದಿದೆ. ಒಟ್ಟು 338 ಸೀಟುಗಳಲ್ಲಿ ಸಿ.ಪಿ.ಐ.(ಎಂ) 210 ಹಾಗೂ ಸಿ.ಪಿ.ಐ.(ಎಂ) ಬೆಂಬಲಿತ ಸ್ವತಂತ್ರರು 3 ಸ್ಥಾನಗಳಲ್ಲಿ ಗೆದ್ದಿದ್ದಾರೆ. ಎಡರಂಗದ ಇತರ ಪಕ್ಷಗಳಾದ ಫಾರ್ವಡ್ ಬ್ಲಾಕ್ 3, ಆರ್.ಎಸ್.ಪಿ. 11 ಹಾಗೂ ಸಿ.ಪಿ.ಐ. ಮೂರು ಸ್ಥಾನ ಪಡೆದಿವೆ. ಕಾಂಗ್ರೆಸ್ (ಐ) ಒಟ್ಟು 93 ಸ್ಥಾನ ಪಡೆಯಿತು.

ಇದರ ಮೇಲಿನ ಹಂತದ ಸಂಸ್ಥೆಯಾದ ಸಿಲಿಗುರಿ-ನಕ್ಸಲ್‌ಬಾರಿ ಪಂಚಾಯತ್ ಸಮಿತಿ ಮತ್ತು ಖಾರಿಬಾರಿ-ಫಂಸೀದೇವ ಪಂಚಾಯತ್ ಸಮಿತಿಗಳ ಒಟ್ಟು 53 ಸ್ಥಾನಗಳಲ್ಲಿ ಸಿ.ಪಿ.ಐ. (ಎಂ) 33 ಸ್ಥಾನಗಳನ್ನೂ, ಕಾಂಗ್ರೆಸ್ (ಐ) 16 ಸ್ಥಾನಗಳನ್ನು ಗಳಿಸಿದವು.

ಇದಕ್ಕೂ ಮೇಲಿನ ಹಂತದ ಸಂಸ್ಥೆಯಾದ ಸಿಲಿಗುರಿ ಮಹಾಕುಮಾ ಪರಿಷದ್‌ನಲಿ ನಾಲ್ಕೂ ಸ್ಥಾನಗಳೂ ಎಡರಂಗದ ಪಾಲಾದವು ಮೂರು ಸಿ.ಪಿ.ಐ. (ಎಂ) ಗೆದ್ದರೆ ಒಂದು ಫಾರ್ವರ್ಡ್ ಬ್ಲಾಕ್ ಪಡೆಯಿತು.

ಈ ಮೂರೂ ಹಂತಗಳಲ್ಲಿ ಕಳೆದ ಚುನಾವಣೆಗಳಿಗೆ ಹೋಲಿಸಿದರೆ ಸಿ.ಪಿ.ಐ. (ಎಂ) ಹೆಚ್ಚು ಸ್ಥಾನಗಳಲ್ಲಿ ಗೆದ್ದಿದೆ. ಗ್ರಾಮಪಂಚಾಯತ್‌ಗಳಲ್ಲಿ ಅದರ ಸ್ಥಾನ ಇಮ್ಮಡಿಗೊಂಡಿದೆ ಕಾಂಗ್ರೆಸ್ (ಐ) ನಿಂದ ಅದು ಹತ್ತು ಗ್ರಾಮ ಪಂಚಾಯತುಗಳನ್ನು ಪಡೆದಿದೆ. ಈಗ ಕೇವಲ 2 ಪಂಚಾಯತುಗಳಲ್ಲಿ ಕಾಂಗ್ರೆಸ್(ಐ)ಹೆಚ್ಚು ಸ್ಥಾನಪಡೆದಿದೆ. ಉಳಿದ 17ರಲ್ಲಿ ಸಿ.ಪಿ.ಐ. (ಎಂ) ಅತೀ ಹೆಚ್ಚು ಸ್ಥಾನ ಪಡೆದಿದೆ.

ಎಡರಂಗದೊಳಗೆ ಸೀಟು ಹಂಚಿಕೆಯ ಬಗ್ಗೆ ಒಂದು ಒಪ್ಪಂದಕ್ಕೆ ಬರದ್ದರಿಂದ ತಾನು ಅದರ ಲಾಭ ಪಡೆಯಬಹುದೆಂಬ ಕಾಂಗ್ರೆಸ್(ಐ) ಆಸೆಯು ಮಣ್ಣುಗೂಡಿತು. ಸೀಟು ಒಪ್ಪಂದ ವಾಗಿದ್ದರೆ ಕಾಂಗ್ರೆಸ್ (ಐ) ನ ಸ್ಥಿತಿ ಇನ್ನೂ ದಯನೀಯ ವಾಗಿರುತ್ತಿತ್ತು.

ಬಿನ್ನಾಬಾರಿ ಗ್ರಾಮಪಂಚಾಯತಿನಲ್ಲಿ ಕಳೆದ ಬಾರಿ ಆರ್.ಎಸ್.ಪಿ. ಅತೀ ಹೆಚ್ಚು ಸ್ಥಾನ ಪಡೆದಿತ್ತು. ಈಗ ಸಿ.ಪಿ.ಐ.(ಎಂ) ಗೆ ಅದಕ್ಕಿಂತ ಹೆಚ್ಚು ಸ್ಥಾನ ದೊರೆತಿದೆ. ಬಿದಾನ್ ನಗರದಲ್ಲಿ ಆರ್.ಎಸ್.ಪಿ. ಕಾಂಗ್ರೆಸ್(ಐ)ನೊಂದಿಗೆ ತೆರೆಮರೆಯ ಸಹಕಾರ ನಡೆಸಿದರೂ ಕೇವಲ ಏಳು ಸ್ಥಾನಗಳಲ್ಲಿ ಗೆದ್ದಿತು. ಉಳಿದ 18 ಸಿ.ಪಿ.ಐ.(ಎಂ)ಗೆ ದೊರಕಿತು. ನೇಪಾಳಿಗಳು, ರಾಜವಂಶಿಗಳು, ಮತ್ತು ಬುಡಕಟ್ಟು ಜನರಿರುವ, ಕುರ್ಸಿಯಾಂಗ್ ಸಬ್‌ಡಿವಿಜನ್ ಪಕ್ಕದಲ್ಲಿರುವ ಚಂಡಾಸಾರಿ ಗ್ರಾಮಪಂಚಾಯತು ಮೊದಲು ಕಾಂಗ್ರೆಸ್(ಐ) ವಶದಲ್ಲಿತ್ತು. ಈ ಬಾರಿ ಅಲ್ಲಿ ಸಿ.ಪಿ.ಐ.(ಎಂ) ನಿಂದ ಅದು ಭಾರಿ ಸೋಲುಂಡಿದೆ.

ಸಿಲಿಗುರಿ ಮಹಾಕುಮಾ ಪರಿಷತ್ತಿನಲ್ಲಿ ಚುನಾಯಿತ ಸ್ಥಾನಗಳು, ಎರಡು ಆ 4ಪ್ರದೇಶದ ಎಂ.ಎಲ್.ಎ.ಗಳು, ಒಬ್ಬರು ಎಂ.ಪಿ. ಹಾಗೂ ಎರಡು ಪಂಚಾಯತ್ ಸಮಿತಿಗಳು ಸಭಾಪತಿಗಳು ಹೀಗೆ 9ಸ್ಥಾನಗಳಿವೆ. ಇದರಲ್ಲಿ ಈಗ ಎಂಟು ಸದಸ್ಯರು ಸಿ.ಪಿ.ಐ. (ಎಂ) ನವರು ಹಾಗೂ ಒಬ್ಬರು ಫಾರ್ವರ್ಡ್ ಬ್ಲಾಕ್ ಸದಸ್ಯರು.

ಹರಿಜನರ ಕೊಲೆಗಡುಕನಿಗೆ ಕಾಂಗ್ರೆ ಆಶ್ರಯ

ಮೇ 28ರಂದು ಬಿಹಾರದ ರೋಹತಾಸ್ ಜಿಲ್ಲೆಯ ಸೋನ್‌ಹಾರ್ ಗ್ರಾಮದಲ್ಲಿ ಅಲ್ಲಿನ ಜಮೀಂದಾರನ ಆಶ್ರಯದಲ್ಲಿರುವ ಕುಖ್ಯಾತ ಕೊಲೆಗಾರ ಶ್ರೀಕಾಂತ್ ಪಾಠಕ್ ಇಬ್ಬರು ಹರಿಜನರನ್ನು ಹಾಡುಹಗಲೇ ಕೊಲೆ ಮಾಡಿದ. 32ವಯಸ್ಸಿನ ರಾಮ್‌ನಿವಾಸ್ ಪಾಸ್ವಾನ್ ಮತ್ತು 28ವರ್ಷದ ವಯಸ್ಸಿನ ಸುಖು ಪಾಸ್ವಾನ್ ಕೊಲೆ ಯಾದ ಹರಿಜನರು. ಮೂವರು ಹರಿಜನ ಮಹಿಳೆಯರಿಗೂ ತೀವ್ರ ಗಾಯಗಳಾಗಿವೆ. ಕೊಲೆಗಾರರು ಇನ್ನೂ ತಲೆಮರೆಸಿಕೊಂಡಿದ್ದಾರೆ.

ಹಳ್ಳಿಗರು ಬಹಳ ವರ್ಷಗಳಿಂದ ಉಪಯೋಗಿಸುತ್ತಿದ್ದ ಬಗರ್-ಹುಕುಂ ಜಮೀನನ್ನು ಕಬಳಿಸಲು ಆತ ಪ್ರಯತ್ನಿಸಿದಾಗ ಹರಿಜನರು ಅದನ್ನು ವಿರೋಧಿಸಿದರು. ಇದರಿಂದ ಕುಪಿತನಾದ ಶ್ರೀಕಾಂತ್ ಪಾಠಕ್ ಈ ಕೊಲೆಗೈದ.

ಇನ್ನೂ ಹಲವು ಕೊಲೆ ಮೊಕದ್ದಮೆಗಳಲ್ಲಿ ಅಪಾದಿತನಾದ ಈತ ಇನ್ನೂ ತಲೆಮರೆಸಿಕೊಂಡಿರುವುದು ಸಾಧ್ಯವಾಗಿರುವುದು ಸ್ಥಳೀಯ ಕಾಂಗ್ರೆಸ್ (ಐ) ಅಧ್ಯಕ್ಷ ಗಿರೀಶ್‌ನಾರಾಯಣ ಮಿಶ್ರಾ ಆತನಿಗೆ ಆಶ್ರಯ ನೀಡಿದ್ದರಿಂದಾಗಿ.

ಈ ಗ್ರಾಮಕ್ಕೆ ಭೇಟಿ ನೀಡಿದ ಬಿಹಾರ್ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಸುಭೋಹ್‌ರಾಮ್ ಕೊಲೆಯನ್ನು ತೀವ್ರವಾಗಿ ಖಂಡಿಸಿ ತಕ್ಷಣ ಕೊಲೆಗಾರರಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಹರಿಜನ ಕುಟುಂಬಗಳಿಗೆ ರಕ್ಷಣೆ ನೀಡಬೇಕೆಂದು, ಕೊಲೆಯಾದವರಿಗೆ ತಲಾ 1ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 50ಸಾವಿರ ರೂ. ಪರಿಹಾರಕ್ಕೆ ಒತ್ತಾಯಿಸಿದ್ದಾರೆ.

ಎನ್.ಎಲ್. ಅವರ ಕುರಿತು ಸಿ.ಆರ್.ಕೆ.

ಪ್ರಿಯ ಕಾಮ್ರೇಡ್ ಎನ್.ಕೆ.,

ಹಿರಿಯ ಕಾಮ್ರೇಡ್ ಎನ್.ಎಲ್. ಉಪಾಧ್ಯಾಯರ ನಿಧನದ ವಾರ್ತೆ ಕೇಳಿ ತುಂಬಾ ದುಃಖವಾಯಿತು. ಕಳೆದ ಸಲ ನಾನು ನೋಡಿದಾಗ ಅವರು ಶಕ್ಯ ಮಟ್ಟಿಗೆ ಸುಧಾರಿಸಿದ್ದರು. ಅವರ ನಿಧನದಿಂದ ಕಮ್ಯೂನಿಸ್ಟ್ ಚಳುವಳಿಗೆ - ನಿಮಗೆ ಭಾರೀ ನಷ್ಟವಾಗಿದೆ. ನನಗೆ ಆತ್ಮೀಯ ಹಿರಿಯರೊಬ್ಬರನ್ನು ಕಳೆದುಕೊಂಡಂತೆ ಆಗಿದೆ. ನಿಮ್ಮ ಈ ದುಃಖದಲ್ಲಿ ನಾನೂ ಭಾಗಿ. ನಿಮಗೆ, ಉಪಾಧ್ಯಾಯರ ಕುಟುಂಬಕ್ಕೆ ಪಾರ್ಟಿಗೆಳೆಯರಿಗೆ ಈ ಮೂಲಕ ನನ್ನ ಸಂತಾಪ ಸೂಚಿಸುತ್ತೇನೆ.

ಎನ್.ಎಲ್. ನನಗೆ ಒಂದು ರೀತಿಯಲ್ಲಿ ತಂದೆಯ ಸಮಾನರಾಗಿದ್ದರು. ನನ್ನ ಹದಿನೆಂಟರ ಹರೆಯದಲ್ಲಿದ್ದಾಗಲೇ ನಾನು ಅವರ ಶಿಷ್ಯನಾದೆ. ಭೂಗತವಾಗಿದ್ದಾಗ ಅವರ ಸಂಪರ್ಕಕ್ಕೆ ಬಂದಾಗ ತುಂಬಾ ಪ್ರಭಾವಿತನಾದೆ. ಅವರ ಜೊತೆಯಲ್ಲಿ ನನಗೆ ಸಮಾರು ಇಪ್ಪತ್ತು ವರ್ಷಗಳ ಕಾಲ ಕೆಲಸ ಮಾಡುವ ಸುಯೋಗ ಲಭಿಸಿತು. ನಾನು ಅವರಿಂದ ಕಲಿತದ್ದು ತುಂಬಾ. ನಾನು ಅವರ ಎದುರಿನಲ್ಲೇ ಬೆಳೆದವನು. ನನ್ನ ಎಲ್ಲಾ ಕೆಲಸಗಳಲ್ಲಿ ಅವರು ಮಾರ್ಗದರ್ಶಿಯಾಗಿದ್ದರು. ಅವರೊಂದಿಗೆ ಕಳೆದ ದಿನಗಳು ನನಗೆ ಸದಾ ನೆನಪಿನಲ್ಲಿರುವುದು. ಅವರು ನನ್ನಲ್ಲಿ ಅಪಾರವಾದ ವಿಶ್ವಾಸ ಇರಿಸಿಕೊಂಡಿದ್ದರು. ಅವರ ನಿಧನದಿಂದ ನನಗೆ ಹಿರಿಯಣ್ಣನನ್ನ ಕಳೆದುಕೊಂಡಂತಾಗಿದೆ.

ವಂದನೆಗಳು

ಸಿ.ಆರ್. ಕೃಷ್ಣರಾವ್

ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಟಕ್ಕೆ ಲೋಕ್‌ಮಂಚ್

ಜೂನ್ 3 ರಂದು ಹರ್ಯಾಣದ ರೋಹ್ತಕ್‌ನಲ್ಲಿ ಸೇರಿದ್ದ ಸಮಾರಂಭವೊಂದರಲ್ಲಿ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಡಲು ಮತ್ತು ಜಾತಿವಾದ, ಕೋಮುವಾದ ಇತ್ಯಾದಿ ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಡಲು ಲೋಕ್ ಮಂಚ್ (ಜನತೆಯ ವೇದಿಕೆ) ರೂಪಿಸಲಾಯಿತು. ಸಿ.ಪಿ.ಐ.(ಎಂ), ಸಿ.ಪಿ.ಐ., ಕಾಂಗ್ರೆಸ್ (ಎಸ್), ಹಿಂದುಳಿದ ವರ್ಗಗಳ ಹೋರಾಟ ಸಮಿತಿ, ಮತ್ತು ಜನಾಧಿಕಾರ ಮಂಚ್ ಈ ಸಮಾವೇಶವನ್ನು ಏರ್ಪಡಿಸಿದ್ದವು. ಕಲ್ಕತ್ತಾ ಹೈಕೋರ್ಟಿನ ಮಾಜೀ ಮುಖ್ಯ ನ್ಯಾಯಧೀಶ ಡಿ.ಎಸ್. ತೇವಟಿಯಾರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾವೇಶದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ೨೦೦ ಪ್ರತಿನಿಧಿಗಳು ಭಾಗವಹಿಸಿದರು.

ರಾಜ್ಯದಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳಲ್ಲಿ ತೀವ್ರ ಕುಸಿತವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ ಸಮಾವೇಶದ ನಿರ್ಣಯ ಇದರಿಂದ ರಾಜಕೀಯ ವ್ಯಾಪಾರವಾಗಿ ಬಿಟ್ಟಿರುವ ವಾತಾವರಣದಲ್ಲಿ ಜನರಲ್ಲಿ ನಿರ್ಲಕ್ಷ್ಯ ಮನೋಭಾವ ಬೆಳೆಯುತ್ತಿದೆ ಎಂದು ಗಮನಿಸಿತು. ಆದ್ದರಿಂದ ದೇಶಪ್ರೇಮಿ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳು ತಕ್ಷಣ ಮಧ್ಯ ಪ್ರವೇಶಿಸುವುದು ಅಗತ್ಯ ಎಂದು ನಿರ್ಣಯ ಹೇಳಿದೆ. ಜಿಲ್ಲಾ ಮಟ್ಟದಲ್ಲಿ ಸಮಾವೇಶಗಳನ್ನು ನಡೆಸಿ ಮತ್ತೊಂದು ರಾಜ್ಯ ಮಟ್ಟದ ದೊಡ್ಡ ಸಮಾವೇಶ ನಡೆಸಲು ನಿರ್ಧಾರ ಸಲಾಯಿತು. ಲೋಕ್ ಮಂಚ್‌ನ ಕೆಲಸ ನಿರ್ವಹಿಸಲು॥ ಸದಸ್ಯರ ಸಮಿತಿ ಯೊಂದನ್ನು ಅವಿರೋಧವಾಗಿ ಚುನಾಯಿಸಲಾಯಿತು.

ಲೋಕಮಂಚ್‌ನ ರಚನೆಗೆ ರಾಜ್ಯದಲ್ಲಿ ವ್ಯಾಪಕ ಸ್ವಾಗತ ದೊರೆತಿದೆ.

ಎನ್.ಎಲ್. ಗೆ ಶ್ರದ್ಧಾಂಜಲಿ

★ ಕಾಮ್ರೇಡ್ ಎನ್.ಎಲ್ ಉಪಾಧ್ಯೆಯರ ನಿಧನದ ಸುದ್ದಿ ಕೇಳಿ ಆಘಾತವಾಗಿದೆ. ನಮ್ಮ ಆಳವಾದ ಸಂತಾಪಗಳನ್ನು ಸ್ವೀಕರಿಸಿ.

ಕಾರ್ಯದರ್ಶಿ,

-ಜಯರಾಂ, ಸಿ.ಪಿ.ಐ.(ಎಂ) ಬಂಗಾರಪೇಟೆ

★ ನನ್ನ ಆಳವಾದ ಸಂತಾಪಗಳು

ಕೃಷ್ಣ ಮೆನ್ಸೆ, ಬೆಳಗಾಂ.

★ ಪ್ರೀತಿಯ ಎನ್.ಎಲ್. ಉಪಾಧ್ಯಾಯರಿಗೆ ಶ್ರದ್ಧಾಂಜಲಿ ಕುಟುಂಬದ ಸದಸ್ಯರಿಗೆ ನಮ್ಮ ಸಂತಾಪ ತಿಳಿಸಿ.

-ವಿಶ್ವನಾಥ, ಚಿಕ್ಕಮಗಳೂರು.

ನನ್ನ ರಾಜಕೀಯ ಗುರು

ಮುಂಬಯಿಗೆ ನೌಕರಿ ಹುಡುಕುತ್ತ ಹೋದವ ನನನ್ನೇ ಪ್ರತ್ಯಕ್ಷ ಪಾಲಿಸಿ, ಪಕ್ಷದ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಪಾಲ್ಗೊಳ್ಳುವಂತೆ ಮಾಡಿ, ರಾಜಕೀಯ ಶಿಕ್ಷಣ ಕೊಟ್ಟು ಜೈಲಿನಲ್ಲಿ ಪಕ್ಷದ ಸದಸ್ಯನನ್ನಾಗಿ ಮಾಡಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ರೈತ-ಕಾರ್ಮಿಕರ ಸಂಘಟನೆ ಮಾಡಿ, ಹೋರಾಟ ಮಾಡಲು, ಪಕ್ಷಕಟ್ಟಿ ಬೆಳೆಸಲು ಚಾಲನೆ ನೀಡಿದವರು, ಪ್ರೋತ್ಸಾಹಿಸಿದವರು ಎನ್.ಎಲ್.ರವರು ನನ್ನಲ್ಲಿಯ ವೈಯ್ಯಕ್ತಿಕ ಕುಂದು ಕೊರತೆಗಳನ್ನು ಕಂಡು ಹಿಡಿದು, ಅವುಗಳನ್ನು ನಿವಾರಿಸುವುದರಲ್ಲಿ, ರಾಜಕೀಯ ನಿಲುವುಗಳಲ್ಲಿ ತಪ್ಪಾದಾಗ ಅವುಗಳನ್ನು ತಿದ್ದುವುದರಲ್ಲಿ ಸಂಘಟನಾ ಕಾರ್ಯದಲ್ಲಿ ತಪ್ಪು ಕಂಡಾಗ ಅದನ್ನು ಸರಿಪಡಿಸುವುದರಲ್ಲಿ ಸದಾಕಾಲ ಸಹಾಯ ಮಾಡಿದವರು ಎನ್.ಎಲ್.

ಅವರ ಮಾರ್ಗದರ್ಶನದಲ್ಲಿ ನಾನು ಇನ್ನೂ ಉತ್ತಮ ಆದರ್ಶ ಕಮ್ಯುನಿಸ್ಟನಾಗಬೇಕೆಂಬ ಹಂಬಲ ಅವರಿಗೂ ನನಗೂ ಇದ್ದರೂ ಕೂಡ, ಅವರ ಅಪೇಕ್ಷೆಯಂತೆ ಉತ್ತಮ ಮಾದರಿಯ ಕಮ್ಯುನಿಸ್ಟನಾಗುವುದರಲ್ಲಿ ವಿಫಲನಾಗಿದ್ದೇನೆಂಬ ಅನಿಸಿಕೆ ನನ್ನದಾಗಿದೆ. ಅವರ ಹಲವಾರು ಕನಸುಗಳನ್ನು ನನಸಾಗಿಸುವುದರಲ್ಲಿ ನಾನು ಯಶಸ್ವಿಯಾಗಿಲ್ಲೆಂಬುದೇ ನನ್ನ ಕೊರಗು. ಇಂಥ ಪರಿಸ್ಥಿತಿಯಲ್ಲಿ ಆಕಸ್ಮಾತ್ತಾಗಿ ಎನ್.ಎಲ್ ಅವರ ಅಗಲುವಿಕೆ ನನ್ನ ಜೀವನದ ಮೇಲೆ ಅಪಾರ ಪರಿಣಾಮ ಉಂಟು ಮಾಡುವುದರಲ್ಲಿ ಸಂಶಯವಿಲ್ಲ.

ನಮ್ಮೊಳಗಿನ ಅಣ್ಣ ತಮ್ಮಂದಿರ ಸಂಬಂಧಕ್ಕಿಂತಲೂ ಪಕ್ಷದ ಸದಸ್ಯರು, ಮುಖಂಡರೆಂಬ ಸಂಬಂಧ ಪ್ರಾಧಾನ್ಯವಾಗಿತ್ತು. ಆ ಕಾರಣದಿಂದಲೇ ಹಲವಾರು ಸಂದರ್ಭಗಳಲ್ಲಿ ನಾವಿಬ್ಬರೂ ನಮ್ಮ ಅಭಿಪ್ರಾಯಗಳಿಗೇ ಅಂಟಿಕೊಂಡು ವಿರೋಧಿಸುತ್ತಿದ್ದೆವು.

ಎನ್.ಎಲ್ ಅವರ ಅಗಲುವಿಕೆ ವೈಯ್ಯಕ್ತಿಕವಾಗಿ ನನಗೆ ಅಪಾರ ನಷ್ಟವನ್ನುಂಟು ಮಾಡುವುದರಲ್ಲಿ ಸಂಶಯವಿಲ್ಲ, ನನಗೆ ಸಂಶಯ ಬಂದ ಪ್ರತಿಯೊಂದು ಸಮಸ್ಯೆಯ ಕುರಿತು [illegible] ಚರ್ಚೆ ಮಾಡಲು, ನಿರ್ಣಯಕ್ಕೆ ಬರಲು ಸಹಾಯ ಮಾಡುತ್ತಿದ್ದ ನನ್ನ "ರಾಜಕೀಯ ಗುರು" ನನ್ನನ್ನಗಲಿದರಲ್ಲಾ ಎಂಬ ಕೊರಗು ನನ್ನದಾಗಿದೆ. ಪಕ್ಷದ ಮೇಲಿನ ನಿಷ್ಠೆ, ನನ್ನ [illegible] ಸಹಾಯ, ಸಹಕಾರದಿಂದ ನಾನು ಎದುರಿಸುತ್ತಿರುವ ಕೊರಗಿನಿಂದ [illegible] ನಂಬಿಕೆ ಹೊಂದಿದ್ದೇನೆ.

ಎನ್.ಕೆ.ಉಪಾಧ್ಯಾಯ

28-5-1989

ಉಕ್ಕು ಕಾರ್ಮಿಕರ ವೇತನ ಸಂಧಾನ
ವಿಳಂಬಕ್ಕೆ ಆಡಳಿತ ವರ್ಗವೇ ಕಾರಣ

ಭದ್ರಾವತಿ:

ಭದ್ರಾವತಿಯ ವಿ.ಐ.ಎಸ್.ಎಲ್ ಉಕ್ಕು ಕಾರ್ಮಿಕರ 1986 ರ ವೇತನ ಸಂಧಾನ ಇನ್ನೂ ಮುಗಿಯದೆ ಇರುವುದಕ್ಕೆ ಆಡಳಿತವರ್ಗವೇ ಕಾರಣ ಹೊರತು ಕಾರ್ಮಿಕ ಸಂಘಗಳ ಮುಖಂಡರಲ್ಲವೆಂದು ಸಿ.ಐ.ಟಿ.ಯು. ನೇತೃತ್ವದ ಸ್ಟೀಲ್‌ವರ್ಕರ್ಸ್ ಫೆಡರೇಷನ್ ಆಫ್ ಇಂಡಿಯಾದ ಅಖಿಲಭಾರತ ಕಾರ್ಯದರ್ಶಿ ಕಾ॥ ಆರ್. ಸಿಂಗಾರವೇಲು ಹೇಳಿದ್ದಾರೆ. ಅವರು ಭದ್ರಾವತಿಯಲ್ಲಿ ಕಾರ್ಮಿಕರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಫಿಟುಮೆಂಟ್, ನಿವೃತ್ತಿವೇತನ, ಯೋಜನೆ ಮೊದಲಾದ ಅಂಶಗಳು ಇನ್ನೂ ಅಂತಿಮವಾಗಿಲ್ಲ. 1986-88 ರ ಅವಧಿಯ ಮಧ್ಯಂತರ ಪರಿಹಾರ ದೇಶದ ಕಾರ್ಮಿಕರಿಗೆ ಈಗಾಗಲೇ ಸಿಕ್ಕಿರುವಾಗ ಭದ್ರಾವತಿಯ ಕಾರ್ಮಿಕರಿಗೆ ಸಿಗದಿರುವುದು ಆಶ್ಚರ್ಯವೆಂದರು. ಐ.ಎಂ.ಎಫ್. ಒತ್ತಡಕ್ಕೆ ಮಣಿದು ಉಕ್ಕು ಉದ್ದಿಮೆಗಾಗಿ ಬಂಡವಾಳ ತೊಡಗಿಸುವುದನ್ನು ಕಡಿಮೆ ಮಾಡುವ ನೀತಿಯನ್ನು, ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮ ದೇಶದ ಆರ್ಥಿಕತೆಯನ್ನು ದೋಚಿಕೊಂಡು ಹೋಗಲು ಅವಕಾಶ ನೀಡುತ್ತಿರುವುದನ್ನು ಅವರು ಖಂಡಿಸಿದರು. ಅಖಿಲಭಾರತ ಮಟ್ಟದಲ್ಲಿ ಉಕ್ಕು ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘಟಿತ ವಾಗುತ್ತಿರುವ ಬಗ್ಗೆ ವಿವರಿಸಿ ನಿರುದ್ಯೋಗದ ವಿರುದ್ಧ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಮೇ 17 ರಂದು ವಿ.ಐ.ಎಸ್.ಎಲ್. ಕಾರ್ಖಾನೆ ಎದುರು ನಡೆದ ಈ ಸಭೆಯಲ್ಲಿ ಸಿ.ಐ/ಟಿ.ಯು ರಾಜ್ಯ ಸಮಿತಿ ಸದಸ್ಯ ಕಾ॥ ನಿತ್ಯಾನಂದ ಸ್ವಾಮಿ ಯವರು ಸಿಂಗಾರ ವೇಲು ರವರ ಭಾಷಣವನ್ನು ಕನ್ನಡಕ್ಕೆ ಅನುವಾದಿಸಿದರು. ಕಾ॥ ಎಸ್. ಬಿ. ಶಿವಶಂಕರ್ ಧನ್ಯವಾದವಿತ್ತರು.

ಕೋಲಾರ ಜಿಲ್ಲಾಧಿಕಾರಿಗೆ ಕಾರ್ಮಿಕ ನಾಯಕರ ಮನವಿ

ಮುಚ್ಚಿರುವ ಕಾರ್ಖಾನೆಗಳನ್ನು ತೆರೆಯುವಂತೆ ಒತ್ತಾಯಿಸಿ ಕೋಲಾರ ಜಿಲ್ಲೆಯ ಸಿ.ಐ.ಟಿ.ಯು ನೇತೃತ್ವದ ವಿವಿಧ ಕಾರ್ಖಾನೆಗಳ ಕಾರ್ಮಿಕರ ಸಂಘದ ಪದಾಧಿಕಾರಿಗಳು ಕೋಲಾರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಜಿಲ್ಲೆಯ ರೇಷ್ಮೆ ಕಾರ್ಮಿಕರು, ಮುನಿಸಿಪಲ್ ಕಾರ್ಮಿಕ ಸಂಘ, ಹಣ್ಣು ಮತ್ತು ಹೂ ವ್ಯಾಪಾರಿಗಳ ಸಂಘ, ಭಾರತ ಗೋಲ್ಡ್ ಮೈನ್ಸ್ ಎಂಪ್ಲಾಯಿಸ್ ಯೂನಿಯನ್, ಇಂಡಸ್ಟ್ರಿಯಲ್ ಎಸ್ಟೇಟ್, ಜನರಲ್ ವರ್ಕರ್ಸ್ ಸಂಘಟನೆಗಳ ಪದಾಧಿಕಾರಿಗಳಾದ ಕಾ॥ ಸುವರಿದಾಸ್, ಜಯರಾಂ, ಅರ್ಜುನನ್, ಕರಿಯಯ್ಯ ಅಬ್ದುಲ್ ಮಜೀದ್ ರವರು ನಿಯೋಗದಲ್ಲಿದ್ದರು.

ಬೀಡಿ ಕಾರ್ಮಿಕರ ಮೇ ದಿನಾಚರಣೆ

ವಾದ್ಯಘೋಷ ಮತ್ತು ವೇಷಭೂಷಣಗಳಿಂದ ವರ್ಣರಂಜಿತವಾದ ಸಹಸ್ರ ಬೀಡಿ ಕಾರ್ಮಿಕರ ಬೃಹತ್ ಮೆರವಣಿಗೆಯೊಂದಿಗೆ ಸಂಭ್ರಮದ ಮೇ ದಿನವನ್ನು ಮಂಗಳೂರಿನ ಬೀಡಿ ಕಾರ್ಮಿಕ ಸಂಘಗಳು ಸಿ.ಐ.ಟಿ.ಯು ಆಚರಿಸಿ ಸಾರ್ವಜನಿಕ ಸಭೆ ನಡೆಸಿದವು. ಸಭೆಯಲ್ಲಿ ಕಾರ್ಮಿಕ ನಾಯಕ ಕಾ॥ ಎಂ.ಎಸ್. ನಾರಾಯಣ, ಸಂಗಯ್ಯ ಅಮಿನಾ ಕಾ॥ಯು.ಬಿ. ಲೋಕಯ್ಯ, ಹೊನ್ನಯ್ಯ, ವಾಸುದೇವ ಆಚಾರಿಯವರು ಮಾತನಾಡಿದರು.

ರೈಸ್‌ಮಿಲ್ಸ್ ಕಾರ್ಮಿಕರ ಉತ್ಸಾಹ ಭರಿತ ಮೇ ದಿನ

ಮೇ 30 ರಂದು ಹೊಸಪೇಟೆಯ ಅನಂತಶಯನ ಗುಡಿಯ ರೈಸ್‌ಮಿಲ್ಸ್ ವರ್ಕರ್ಸ್ ಯೂನಿಯನ್, ಹಮಾಲರು, ಮಹಿಳೆಯರು, ರೈತರು ನೂರಾರು ಸಂಖ್ಯೆಯಲ್ಲಿ ಉತ್ಸಾಹ ಭರಿತ ಮೇ ದಿನಾಚರಣೆಯಲ್ಲಿ ಪಾಲ್ಗೊಂಡರು. ಈ ಸಭೆಯನ್ನುದ್ದೇಶಿಸಿ ಯಮನೂರಪ್ಪ, ರಾಮನಾಥ್, ಯು.ಬಸವರಾಜ್, ಪ್ರಸನ್ನಕುಮಾರ್, [illegible] ಮುಂತಾದವರು ಮಾತನಾಡಿದರು. [illegible] ಶ್ರದ್ಧಾಂಜಲಿ [illegible] ಮಂಡಿಸಿದರು. [illegible] [illegible] [illegible] ಮಾತನಾಡಿದರು. [illegible]

KRNW / BGS-312 MAG(2) PRB DECR 319-78/79

ಬಿ.ಜೆ.ಪಿ.ಯ ಚುನಾವಣಾ ವೇದಿಕೆ

ಪುಟ 1 ರಿಂದ

ಜನತಾಪಕ್ಷದ ಹಾಗೂ ಸರಕಾರದ ಕುಸಿತಕ್ಕೆ ಒಂದು ಕಾರಣವಾದದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಅಂದಿನಿಂದ ಸಿ.ಪಿ.ಐ.(ಎಂ) ಮತ್ತು ಎಡಪಕ್ಷಗಳು ಜನತಾ ಪ್ರಯೋಗದ ಪುನರಾವರ್ತನೆ ಬೇಡವೆಂಬ ನಿಲುವು ತಳೆದಿವೆ. ರಾಷ್ಟ್ರೀಯ ಐಕ್ಯತೆ ಮತ್ತು ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಟದ ವೇದಿಕೆಯ ಮೇಲೆ ಎಡ ಮತ್ತು ಜಾತ್ಯಾತೀತ ಪಕ್ಷಗಳ ಐಕ್ಯತೆಯ ಬದಲಿಯನ್ನು ಅವು ಪ್ರತಿಪಾದಿಸುತ್ತಿವೆ. ವಿರೋಧ ಪಕ್ಷಗಳು ಕೋಮುವಾದ, ಜಾತೀವಾದಕ್ಕೆ ತುಸುವೇ ರಿಯಾಯ್ತಿ ತೋರಿದರೂ ಕಾಂಗ್ರೆಸ್ ಮತ್ತು ಅದರ ಸರ್ಕಾರದ ವಿರುದ್ಧ ಹೋರಾಟ ದುರ್ಬಲಗೊಳ್ಳುತ್ತದೆ. ಕಾಂಗ್ರೆಸ್ ದುರ್ಬಲ ಹಾಗೂ ಅಲ್ಪಸಂಖ್ಯಾತ ವಿಭಾಗಗಳ ಬೆಂಬಲ ಪಡೆಯಲು ನೆರವಾಗುತ್ತದೆ ಎಂದು ನಾವು ಹೇಳುತ್ತಾ ಬಂದಿದ್ದೇವೆ.

ಆದ್ದರಿಂದ ಬಿ.ಜೆ.ಪಿ.ಯನ್ನು ಒಳಗೊಂಡ ಐಕ್ಯತೆಯ ಪ್ರತಿಪಾದಕರೀಗ ಹೊಸ ಮಾರ್ಗ ಹಿಡಿಯಬೇಕಾಗಿ ಬಂದಿದೆ. ಅದೆಂದರೆ ಜನತಾದಳದ ಒಂದು ಮಧ್ಯಪಂಥೀಯ ಪಕ್ಷ ಅಥವಾ ರಾಷ್ಟ್ರೀಯ ರಂಗದಂತಹ ಕೂಟ ಒಂದೆಡೆ ಬಿ.ಜೆ.ಪಿ. ಯೊಂದಿಗೆ, ಇನ್ನೊಂದೆಡೆ ಎಡಪಕ್ಷಗಳೊಂದಿಗೆ ಸ್ಥಾನಗಳ ಹೊಂದಾಣಿಕೆ ಮಾಡಿಕೊಳ್ಳುವುದು. ಸಿ.ಪಿ.ಐ.(ಎಂ)ನ ಮುಖಂಡತ್ವದ ಒಂದು ವಿಭಾಗ ಕೂಡಾ ಇದನ್ನು ಸ್ವೀಕರಿಸಿದೆ ಎಂದು ಹೇಳಿ ಸಿ.ಪಿ.ಐ.(ಎಂ) ನೊಳಗೆ ಪ.ಬಂಗಾಳ ಲೈನು, ಕೇರಳ ಲೈನು, ಎಂದು ಎರಡು ಪರಸ್ಪರ ಹೊಡೆದಾಡುವ ಲೈನುಗಳಿವೆ ಎಂಬ ಸಿದ್ಧಾಂತ ಪ್ರಚಾರ ಮಾಡಲು ಕೂಡಾ ಸಾಕಷ್ಟು ಕಾಗದ, ಪೆನ್ನುಗಳನ್ನು ವ್ಯರ್ಥಗೊಳಿಸಲಾಗಿದೆ.

ಪಾಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿಯ ಸರ್ವಸಮ್ಮತ ನಿರ್ಣಯಗಳು ಈ ಸುಳ್ಳು ಪ್ರಚಾರಕ್ಕೆ ಸರಿಯಾದ ಉತ್ತರ ನೀಡಿವೆ. ಈ ರಾಜಕೀಯ ವಾಸ್ತವತೆಗಳನ್ನು ಮರೆತು ಜನತಾದಳದ ಮುಖಂಡತ್ವದ ಒಂದು ವಿಭಾಗ ಮೊದಲು ಬಿ.ಜೆ.ಪಿ. ಯೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಂಡರೆ ನಂತರ ಎಡ ಪಕ್ಷಗಳೊಂದಿಗೆ "ವ್ಯವಹಾರ ಕುದುರಿಸಬಹುದು" ಎಂಬ ಭ್ರಮೆ ಇಟ್ಟುಕೊಂಡಂತಿದೆ. ಇದು ಅವಾಸ್ತವ ಲೆಕ್ಕಾಚಾರ, ಆತ್ಮಹತ್ಯೆಯ ಕ್ರಮ ಎಂದು ಪಾಲಿಟ್‌ಬ್ಯೂರೋ ಸ್ಪಷ್ಟವಾಗಿ ಸೂಚಿಸಿದೆ.

ಈ ಹಿನ್ನೆಲೆಯಲ್ಲಿ ಬಿ.ಜೆ.ಪಿ. ಯ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆ ಹಿಮಾಚಲ ಪ್ರದೇಶದ ಪಾಲಂಪುರದಲ್ಲಿ ಮೂರು ದಿನ ನಡೆಯಿತು. ಸಭೆಯ ನಂತರ ಪತ್ರಿಕಾ ಕರ್ತರನ್ನುದ್ದೇಶಿಸಿ ಮಾತನಾಡುತ್ತಾ ಬಿ.ಜೆ.ಪಿ. ಅಧ್ಯಕ್ಷ ಅಡ್ವಾಣಿಯವರು ರಾಮಜನ್ಮಭೂಮಿ ಬಗ್ಗೆ ಅದು ನಿಲುವನ್ನು ಲಕ್ಷಾಂತರ ಜನರು ಮೆಚ್ಚಿಗೊಂಡಿರುವುದರಿಂದ ಅದು ಖಂಡಿತಾ ವೋಟುಗಳಾಗಿ ತಮಗೆ ಸಿಗುತ್ತವೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಬಿ.ಜೆ.ಪಿ. ಚುನಾವಣೆಗೆ ಧುಮುಕುತ್ತಿರುವುದು ಇದೊಂದೇ ವಿಷಯದೊಂದಿಗೆ ಅಲ್ಲ. ಸಂವಿಧಾನದ 370ನೇ ವಿಧಿಯನ್ನು ರದ್ದು ಮಾಡುವುದು. ಅಲ್ಪಸಂಖ್ಯಾತ ಆಯೋಗವನ್ನು ಅಂತ್ಯಗೊಳಿಸುವುದು ಅದರ ಇನ್ನೆರಡು ಪ್ರಮುಖ ಚುನಾವಣಾ ಪ್ರಚಾರದ ವಿಷಯಗಳು.

ಆದರೆ ಜನತಾದಳ ಮತ್ತು ರಾಷ್ಟ್ರೀಯ ರಂಗ. ಅಲ್ಪ ಸಂಖ್ಯಾತ ಆಯೋಗವನ್ನು ಕಾಪಾಡುವುದು ಮಾತ್ರವಲ್ಲ, ಅದನ್ನು ಬಲಪಡಿಸುವುದಾಗಿ ಹೇಳಿವೆ. ಸಂವಿಧಾನದ 370ನೇ ವಿಧಿಯನ್ನು ಕಾಯ್ದುಕೊಳ್ಳುವುದಾಗಿ ಹೇಳಿವೆ. ರಾಮಜನ್ಮಭೂಮಿ ಪ್ರಶ್ನೆಯಲ್ಲೂ ಪರಸ್ಪರ ಮಾತುಕತೆಯಿಂದ ಪರಿಹಾರ ಸಿಗದಿದ್ದರೆ ಅದನ್ನು ನ್ಯಾಯಲಯದ ತೀರ್ಪಿಗೆ ಬಿಡಬೇಕೆಂಬ ನಿಲುವನ್ನು ಇವು ತಳೆದಿವೆ. ಹೀಗಿರುವಾಗ ಈ ಮೂರು ವಿಷಯಗಳಲ್ಲಿ ತದ್ವಿರುದ್ಧ ನಿಲುವು ತಳೆದಿರುವ ಒಂದು ಪಕ್ಷದ ಚುನಾವಣಾ ಮಿತ್ರರಾಗುವುದು ಜನತಾದಳ ಅಥವಾ ರಾಷ್ಟ್ರೀಯ ರಂಗಕ್ಕೆ ಹೇಗೆ ಸಾಧ್ಯ?

ಬಿ.ಜೆ.ಪಿ. ಯಿರುವ ಅಥವಾ ಅದರ ಬೆಂಬಲ ಪಡೆದ ಸರಕಾರ ಅಧಿಕಾರಕ್ಕೆ ಬಂದರೆ ಬಿ.ಜೆ.ಪಿ. ಈ ಮೂರು ವಿಷಯಗಳಲ್ಲಿ ತನ್ನ ಮಾರ್ಗ ಹಿಡಿಯುವಂತೆ ಅಂತಹ ಸರಕಾರದ ಮೇಲೆ ವಿಪರೀತ ಒತ್ತಡ ಹಾಕುತ್ತದೆ. ಆದರೆ ಜನತಾದಳ, ರಾಷ್ಟ್ರೀಯ ರಂಗ ಇದಕ್ಕೆ ತದ್ವಿರುದ್ಧವಾದ ಆಶ್ವಾಸನೆಗಳನ್ನು ಜನತೆಗೆ. ಕೊಟ್ಟಿರುತ್ತಾರೆ ಆಗೇನು ಮಾಡುವುದು?

ಭಾಷಾ ಹಾಗೂ ಮತೀಯ ಸಂಕುಚಿತವಾದಕ್ಕೆ ಕುಪ್ರಸಿದ್ಧವಾದ ಇನ್ನೊಂದು ಹಿಂದೂ ಕೋಮುವಾದೀ ಸಂಸ್ಥೆಯಾದ ಮಹಾರಾಷ್ಟ್ರದ ಶಿವಸೇನೆಯೊಂದಿಗೆ ಬಿ.ಜೆ.ಪಿ. ತನ್ನ ಮಿತ್ರತ್ವಕ್ಕೆ ಅಧಿಕೃತ ರೂಪವನ್ನು ಈ ಪಾಲಂಪುರ ಅಧಿವೇಶನದಲ್ಲಿ ನೀಡಿದೆ ಎಂಬುದನ್ನು ಗಮನಿಸಬೇಕು.

ಬಿ.ಜೆ.ಪಿ. ಹಿಂದೂ ಕೋಮುವಾದದ ಒಂದು ಪ್ರತೀಕ ಮಾತ್ರವೇ ಅಲ್ಲ, ಸಾಮಾನ್ಯ ರಾಜಕೀಯ ಪ್ರಶ್ನೆಗಳಲ್ಲಿ ಅದು ಸಾಮ್ರಾಜ್ಯಶಾಹಿ-ಪರ ಎಂಬುದನ್ನು ಅದರ ಪಾಲಂಪುರ ಅಧಿವೇಶನ ತೋರಿಸಿಕೊಟ್ಟಿದೆ.

ಅಲ್ಲಿ ಬಿ.ಜೆ.ಪಿ. ಅಂಗೀಕರಿಸಿದ ವಿದೇಶಾಂಗ ನೀತಿ ಕುರಿತ ನಿರ್ಣಯ ವಿದೇಶಾಂಗ ನೀತಿಯ ಮಾತೇನೋ ಆಡುತ್ತದೆ. ಆದರೆ ಅದರಲ್ಲಿ ಅಮೆರಿಕನ್ ನೇತೃತ್ವದ ವಿಶ್ವ ಸಾಮ್ರಾಜ್ಯಶಾಹಿಯ ವಿರುದ್ಧ ಒಂದು ಪದವೂ ಇಲ್ಲ. ಬಿ.ಜೆ.ಪಿ. ತನ್ನ ಈ ವಿದೇಶಾಂಗ ನೀತಿಯ ರೂಪರೇಷೆ ತಯಾರಿಸುತ್ತಿರುವಾಗಲೇ ಅಮೆರಿಕಾ ಭಾರತ ಸರ್ಕಾರ ರಾಷ್ಟ್ರೀಯ ಅರ್ಥಿಕವನ್ನು ಬಹುರಾಷ್ಟ್ರೀಯ ಕಂಪನಿಗಳ ಅತಿಕ್ರಮಣದಿಂದ ರಕ್ಷಿಸಲು ನಿರ್ಮಿಸಿದ ವ್ಯವಸ್ಥೆಗಳನ್ನೆಲ್ಲಾ ಕಿತ್ತುಹಾಕಬೇಕೆಂದು ಅತ್ಯಂತ ದಾಷ್ಟ್ಯದಿಂದ ಒತ್ತಾಯಿಸುತ್ತಿತ್ತು. ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳ ವಿರುದ್ಧ ಅಮೆರಿಕನ್ ಸಾಮ್ರಾಜ್ಯಶಾಹಿಯ ಈ ಉದ್ದಂಡತನದ ಕ್ರಮದ ವಿರುದ್ಧ ಬಿ.ಜೆ.ಪಿ. ಸೊಲ್ಲೆತ್ತಿಲ್ಲ!

ವಿದೇಶಾಂಗ ನೀತಿಯೆಂದು ಅದು ಕರೆಯುವ ಹೇಳಿಕೆ ವಾಸ್ತವವಾಗಿ ನಮ್ಮ ನೆರೆಕರೆ ದೇಶಗಳನ್ನು ಕುರಿತಂತೆ ಅದರ ನೀತಿಯಷ್ಟೇ. ಸರಕಾರದ ನೀತಿಯಿಂದಾಗಿ ನಮ್ಮ ನೆರೆದೇಶಗಳೆಲ್ಲಾ ನಮ್ಮಿಂದ ದೂರವಾಗುತ್ತಿದ್ದಾರೆ ಎಂದು ಅದು ದೂಷಿಸಿದೆ. ಈ ವಿಶ್ಲೇಷಣೆಯಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹೀ ಭಾರತವನ್ನು ಸುತ್ತುವರಿಯಲು ನೆರೆದೇಶಗಳ ಆಳುವ ವರ್ಗಗಳ ಪೂರ್ವಾಗ್ರಹಗಳನ್ನು ಚಾಣಾಕ್ಷತನದಿಂದ ಬಳಸುತ್ತಿದೆ ಎಂಬ ಅಂಶದ ಪತ್ತೆಯೇ ಇಲ್ಲ! ಸಿಖ್ ಉಗ್ರಗಾಮಿಗಳಿಗೆ ಹಾಗೂ ಕಾಶ್ಮೀರದ ಪ್ರತ್ಯೇಕವಾದಿಗಳಿಗೆ ಪಾಕಿಸ್ತಾನದ ನೆಲವನ್ನು ಬಳಸುವುದರಲ್ಲಂತೂ ಇದು ಸ್ಪಷ್ಟವಾಗಿ ಕಾಣುತ್ತಿದ

ರಾಜೀವ್‌ಗಾಂಧಿ ಸರ್ಕಾರದ ಲೋಪಗಳನ್ನು ಖಂಡಿತ ದೂಷಿಸಬಹುದು. ಆದರೆ ದೇಶದ ಐಕ್ಯತೆಯ ಶತ್ರುಗಳಿಗೆ ನೆರವಾಗುವ ಹಲವಾರು ರಿಯಾಯ್ತಿಗಳನ್ನು ಅಮೆರಿಕನ್ ಸಾಮ್ರಾಜ್ಯಶಾಹಿಗೆ ಅದು ನೀಡಿದೆ ಎಂದೇ ದೂಷಿಸಬೇಕಾಗುತ್ತದೆ. ಆದರೆ ಬಿ.ಜೆ.ಪಿ.ಯ ದೂಷಣೆ ಇದಲ್ಲ. ಅದರ ಮಟ್ಟಿಗೆ ಸಾಮ್ರಾಜ್ಯಶಾಹಿಯೆಂಬುದೇ ಇಲ್ಲ. ವಿಶೇಷವಾಗಿ ಅಮೆರಿಕನ್ ಸಾಮ್ರಾಜ್ಯಶಾಹಿಯೆಂಬುದು ಇಲ್ಲವೇ ಇಲ್ಲ.

ಇನ್ನೊಂದು ಮಹತ್ವದ ಸಂಗತಿಯೆಂದರೆ ಬಿ.ಜೆ.ಪಿ. ರಾಷ್ಟ್ರೀಯ ಕಾರ್ಯಕಾರಿಣಿ ಭಾರತದ ಎಲ್ಲಾ ನೆರೆದೇಶಗಳೊಂದಿಗೆ ಗೆಳೆತನದ ಸಂಬಂಧ ಬೆಳೆಸಬೇಕೆಂದು ಒತ್ತಾಯಿಸಿದರೂ, ಒಂದು ನೆರೆದೇಶದೊಂದಿಗೆ ಮಾತ್ರ ಅದು ಬೇಡ ಎನ್ನುತ್ತದೆ. ಅದೆಂದರೆ ಚೀನಾ ಜನತಾ ಗಣತಂತ್ರ. ಟಿಬೇಟ್ ಪ್ರಶ್ನೆಯ ಮೇಲೆ ಅದು ಚೀಣಾದ ವಿರುದ್ಧ ವಿಷಕಾರುವುದನ್ನು ಮುಂದುವರಿಸಿದೆಯಷ್ಟೇ ಅಲ್ಲ, ಸಂಬಂಧಗಳನ್ನು ಸಾಮಾನ್ಯ ಗೊಳಿಸಲು ಎರಡು ಸರ್ಕಾರಗಳ ನಡುವೆ ನಡೆಯುತ್ತಿರುವ ಮಾತುಕತೆಗಳನ್ನು ಮುರಿಯಬೇಕೆಂದು ಅದು ಕರೆ ನೀಡಿದೆ!

ಅಂತರಿಕವಾಗಿ ಹಿಂದೂ ಪುನರುತ್ಥಾನವಾದ ಮತ್ತು ಕೋಮುವಾದ, ಸಾಮ್ರಾಜ್ಯಶಾಹಿ-ಪರ ವಿದೇಶಾಂಗ ನೀತಿ, ವಿದೇಶಾಂಗ ಸಂಬಂಧಗಳಲ್ಲಿ ಚೀಣಾ-ವಿರೋಧಿ ರಾಜಕೀಯ - ಇದು ಬಿ.ಜೆ.ಪಿ.ಯ ಚುನಾವಣಾ ವೇದಿಕೆಯ ಸಾರಸಂಗ್ರಹ.

ಟೈಲ್ ವರ್ಕರ್ಸ್ ಯೂನಿಯನ್‌ಉಪಾಧ್ಯಕ್ಷ ಕಾ॥ ಡಿ. ಗೋಪಾಲ ನಿಧನ

ಸೌತ್ ಕೆನರಾ ಟೈಲ್ಸ್ ವರ್ಕರ್ಸ್ ಯೂನಿಯನ್ ಉಪಾಧ್ಯಕ್ಷರಾದ ಕಾ॥ ಡಿ.ಗೋಪಾಲರವರು ತಾರೀಖು 10ರಂದು ನಿಧನಗೊಂಡರು. ಅಂದು ಸಂಜೆ ನಡೆದ ಅಂತ್ಯ ಕ್ರಿಯೆಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಹಾಗೂ ಸಿ.ಐ.ಟಿ.ಯು ಮುಂದಾಳುಗಳು ಭಾಗವಹಿಸಿದ್ದರು.

ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್ ನೇತೃತ್ವದಲ್ಲಿ ತಾರೀಖು 12ರಂದು ಸಂಜೆ ಸಂಘದ ಕಛೇರಿಯಲ್ಲಿ ಕಾ॥ ಸಂತಾಪ ಸೂಚಕ ಸಭೆ ನಡೆಯಿತು. ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಕೆ.ಶಂಕರ್, ಉಪಾಧ್ಯಕ್ಷರಾದ ಕಾ॥ ಕೆ. ಮೂಸಬ್ಬ ಹಾಗೂ ಅಧ್ಯಕ್ಷರಾದ ಕಾ॥ ಅಬ್ರಹಾಂ ಕರ್ಕಡರವರು ಮಾತನಾಡಿ, ಕಾರ್ಮಿಕರಾಗಿ ಸುಮಾರು 45 ವರ್ಷಗಳ ಅನುಭವ ಹೊಂದಿ, ಸಂಘಟನೆಗಾಗಿ ಶ್ರಮಿಸಿದ ಹಾಗೂ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಅನಂತರ ಉಪಾಧ್ಯಕ್ಷರಾಗಿ ನಿರಂತರ ಕಾರ್ಮಿಕರ ಮಧ್ಯೆ ಸಂಪರ್ಕವನ್ನಿಟ್ಟುಕೊಂಡ ಒಬ್ಬ ಹಿರಿಯ ಸಂಗಾತಿಯನ್ನು ಕಳೆಕೊಂಡಂತಾಗಿದೆ ಎಂದು ಹೇಳಿದರು.

ಕಾ॥ ಡಿ.ಗೋಪಾಲಯ್ಯನವರ ಆಕಸ್ಮಿಕ ನಿಧನದ ಬಗ್ಗೆ ಒಂದು ನಿಮಿಷ ಮೌನ ಆಚರಿಸಿ, ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಹರಿಜನರಿಗೆ ದ್ರೋಹ ಬಗೆದ ಕಾಂಗ್ರೆ

ವಿರಾಜಪೇಟೆಯ ಬೇಟೋಳಿ ಮಂಡಲ ಪಂಚಾಯ್ತಿ ಇಲ್ಲಿನ ಹರಿಜನ ಗಿರಿಜನರಿಗೆ ದೊರೆಯಬೇಕಾದ ಹಲವು ಪ್ರಯೋಜನಗಳನ್ನು ನೀಡದೆ ದ್ರೋಹ ಬಗೆದಿದೆ. ಈ ಕುರಿತು ಡಿ.ವೈ.ಎಫ್.ಐ. ಹಲವು ಹೋರಾಟ ನಡೆಸಿದೆ. ಮಕ್ಕಳಿಗೆ ಶಾಲಾ ಸೌಲಭ್ಯ ನೀಡುವಲ್ಲಿ, ಮನೆ ಕುಸಿದು ಸಂಕಷ್ಟಕ್ಕೀಡಾದ ಜನರಿಗೆ ಪರಿಹಾರ ನೀಡುವಲ್ಲಿ ಸಂಪೂರ್ಣ ವಿಫಲವಾಗಿದೆ. ಕಾಂಗ್ರೆ ನಾಯಕತ್ವದಲ್ಲಿರುವ ಈ ಪಂಚಾಯ್ತಿ ಕೃತ್ಯದ ವಿರುದ್ಧ ಏಪ್ರಿಲ್ 26 ರಂದು ಕಛೇರಿ ಎದುರು ಧರಣಿ ಮುಷ್ಕರ ನಡೆಸಲಾಯಿತು. ವಿದ್ಯುಚ್ಛಕ್ತಿ. ರಸ್ತೆ. ಕೊಳವೆ ಬಾವಿ. ಪಡಿತರ ಚೀಟಿ. ಮುಂತಾದ ಸೌಲಭ್ಯ ಒತ್ತಾಯಿಸಿ ಮನವಿ ಅರ್ಪಿಸಲಾಯಿತು.

ಚೀನಾದಲ್ಲಿ....

1 ನೇ ಪುಟದಿಂದ

ಪ್ರಶ್ನೆ: ಮಾವೋ ಮತ್ತು ಡೆಂಗ್ ಕ್ಸಿಯಾವೋ ಬಗ್ಗೆ ನಿಮ್ಮ ಪಕ್ಷದ ಸದ್ಯದ ವಿಶ್ಲೇಷಣೆ ಏನು?

ಉತ್ತರ: ಕ್ರಾಂತಿಗೆ ಅತ್ಯುತ್ತಮ ರೀತಿಯಲ್ಲಿ ನೇತೃತ್ವ ನೀಡಿದ ಮಾವೋ ನಂತರದ ಒಂದು ಕಾಲಾವಧಿಯಲ್ಲಿ, ಕೆಲವು ಗಂಭೀರ ತಪ್ಪುಗಳನ್ನು ಮಾಡಿದರು. ಅದನ್ನು ಚೀಣಾ ಪಕ್ಷ ಹೇಳಿದೆ. ಮಾವೋರ ತಪ್ಪುಗಳ ಪರಿಣಾಮಗಳನ್ನು ಮೀರಿ ನಿಲ್ಲುವಲ್ಲಿ ಡೆಂಗ್ ಒಂದು ಪ್ರಮುಖ ಪಾತ್ರ ವಹಿಸಿದರು.

ಪ್ರಶ್ನೆ: ಬಹಳಷ್ಟು ಕಮ್ಯೂನಿಸ್ಟ್ ದೇಶಗಳಲ್ಲಿ ಪೆರೆಸ್ತ್ರೋಯಿಕಾ ಮತ್ತು ಗ್ಲಾಸ್‌ನೋಸ್ಟ್ ಬೇಕೆಂದು ಹೆಚ್ಚೆಚ್ಚು ಒತ್ತಾಯವಿದೆ. ಡೆಂಗ್ ಸ್ವಲ್ಪ ಮಟ್ಟಿಗೆ ಪೆರೆಸ್ತ್ರೋಯಿಕಾ ತಂದರು. ಆದರೆ ಗ್ಲಾಸ್‌ನೋಸ್ಟ್ ತರಲಿಲ್ಲ. ಸ್ವಲ್ಪ ಸಮಯದ ನಂತರ ಚೀಣಾ ಮುಖಂಡತ್ವ ಗ್ಲಾಸ್‌ನೋಸ್ಟ್‌ನ ಬೇಡಿಕೆಗೆ ಮಣಿಯಬೇಕಾಗಬಹುದು ಎಂದು ನಿಮಗೆ ಅನಿಸುತ್ತದೆಯೇ?

ಉತ್ತರ: ಪ್ರತಿಯೊಂದು ಸಮಾಜವಾದೀ ದೇಶವೂ ತನ್ನದೇ ರೀತಿಯಲ್ಲಿ ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳನ್ನು ನಡೆಸುತ್ತಿದೆ. ಯಾವುದೇ ಒಂದು ಸಮಾಜವಾದೀ ದೇಶದಲ್ಲಿ ರೂಪಿಸಿದ ಸುಧಾರಣೆಗಳನ್ನು ಇನ್ನೊಂದು ಸಮಾಜವಾದೀ ದೇಶದಲ್ಲಿ ನಕಲು ಮಾಡಲು ಸಾಧ್ಯವಿಲ್ಲ, ನಕಲು ಮಾಡುತ್ತಿಲ್ಲ. ಪೆರೆಸ್ತ್ರೋಯಿಕಾ ಮತ್ತು ಗ್ಲಾಸ್‌ನೋಸ್ಟ್ ಸೋವಿಯತ್ ಒಕ್ಕೂಟದಲ್ಲಿ ಅಂಗೀಕರಿಸಿದ ಒಂದು ಸೋವಿಯತ್ ವಿಧಾನ. ಇತರ ಸಮಾಜವಾದೀ ದೇಶಗಳು ಸುಧಾರಣೆಗಳ ತಮ್ಮದೇ ವಿಧಾನಗಳನ್ನು ವಿಕಾಸಗೊಳಿಸುತ್ತವೆ. ಚೀಣೀ ಸಂಗಾತಿಗಳು ಆರ್ಥಿಕ ಮತ್ತು ರಾಜಕೀಯ ಸುಧಾರಣೆಗಳ ತಮ್ಮದೇ ಸ್ವರೂಪಗಳನ್ನು ವಿಕಾಸಗೊಳಿಸುತ್ತಾರೆ.

ಪ್ರಶ್ನೆ: ಸೋವಿಯತ್ ಒಕ್ಕೂಟದಲ್ಲಿ ಅಸ್ಟಾಲಿನೀಕರಣದ ಪ್ರಕ್ರಿಯೆ ಸಾಗಿದೆ. ನಿಮ್ಮ ಅಭಿಪ್ರಾಯವೇನು?

ಉತ್ತರ: ಸ್ಟಾಲೀನ್ ಖಂಡಿತವಾಗಿಯೂ ಗಂಭೀರ ತಪ್ಪುಗಳನ್ನು ಮಾಡಿದರು. ಅವಿಭಜಿತ ಪಕ್ಷ 1956 ರ ನಿರ್ಣಯದಲ್ಲಿ ಇದನ್ನು ಒಪ್ಪಿಕೊಂಡಿತ್ತು. ಆದರೆ "ಅ-ಸ್ಟಾಲಿನೀಕರಣ"ವೆಂದರೆ ಸ್ಟಾಲಿನ್‌ರ ಮೂರು ದಶಕಗಳ ನೇತೃತ್ವದಲ್ಲಿ ಸೋವಿಯತ್ ಒಕ್ಕೂಟ ಮತ್ತು ವಿಶ್ವ ಕಮ್ಯೂನಿಸ್ಟ್ ಆಂದೋಲನ ಗಮನಾರ್ಹ ಪ್ರಗತಿ ಸಾಧಿಸಿದವು ಎಂಬ ವಾಸ್ತವ ಸಂಗತಿಯನ್ನು ನಿರಾಕರಿಸುವುದು ಎಂದು ಅದನ್ನು ವಿರೋಧಿಸುತ್ತೇವೆ.

ಪ್ರಶ್ನೆ: ಸದ್ಯದಲ್ಲೇ ನೀವು ಚೀಣಾಕ್ಕಿಂತ ಸೋವಿಯತ್ ಒಕ್ಕೂಟಕ್ಕೆ ಸಮೀಪವಾಗಲಿರುವಿರಾ?

ಉತ್ತರ: ಈ ಪ್ರಶ್ನೆಯೇ ಏಳುವುದಿಲ್ಲ. ಸೋವಿಯತ್ ಒಕ್ಕೂಟ ಮತ್ತು ಚೀಣಾ ಪರಸ್ಪರ ಹತ್ತಿರ ಬರುತ್ತಿವೆ. ನನ್ನ ಪಕ್ಷ ಎಲ್ಲಾ ಸಮಾಜವಾದೀ ದೇಶಗಳೊಂದಿಗೆ, ಕಮ್ಯೂನಿಸ್ಟ್ ಪಕ್ಷಗಳೊಂದಿಗೆ ನಿಕಟ ಸೋದರ ಸಂಬಂಧಗಳನ್ನು ಹೊಂದಿದೆ.

ತುಮಕೂರು ಜಿಲ್ಲೆಯಲ್ಲಿ ಪಕ್ಷದ ಪ್ರಚಾರ ಸಭೆಗಳು

ಪ್ರಸಕ್ತ ರಾಜಕೀಯ ಕುರಿತು ಜನಜಾಗೃತಿ ಮೂಡಿಸಲು ರಾಜ್ಯಾದ್ಯಂತ ಪ್ರಕ್ಷೋಭೆ ನಡೆಸಲು ಪಕ್ಷದ ರಾಜ್ಯಸಮಿತಿಯು ನೀಡಿದ್ದ ಕರೆಯ ಮೇರೆಗೆ ತುಮಕೂರು ಜಿಲ್ಲೆಯ ಹಾಗಲವಾಡಿ ಹೊಸಕೆರೆ ಮತ್ತು ತಿಪಟೂರಿನಲ್ಲಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಲಾಗಿತ್ತು.

ಜೂನ್ 2ರಂದು ಹಾಗಲವಾಡಿಯಲ್ಲಿ ಪಕ್ಷದ ಶಾಖೆ ಕಾರ್ಯದರ್ಶಿ ಮುನಿಶ್ಯಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿದ ಬಹಿರಂಗ ಸಭೆಯನ್ನುದ್ದೇಶಿಸಿ ರಾಜ್ಯಸಮಿತಿ ಸದಸ್ಯ ಕಾ॥ ಎಸ್.ಆರ್ ಆರಾಧ್ಯ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಹೆಚ್.ಸಿ. ಚೆನ್ನಪ್ಪನವರು ಮಾತನಾಡಿದರು. ಮರುದಿನ ಹೊಸಕೆರೆ ಗ್ರಾಮದಲ್ಲಿ ಮತ್ತೊಂದು ಸಭೆಯನ್ನು ಏರ್ಪಡಿಸ ಲಾಗಿತ್ತು. ಪಾರ್ಟಿ ಶಾಖೆ ಕಾರ್ಯದರ್ಶಿ ಕಾ॥ ಸದಾಶಿವಯ್ಯ ಪ್ರಾರಂಭದಲ್ಲಿ ಸ್ವಾಗತಿಸಿದರು. ಜೂನ್ 4 ರಂದು ತಿಪಟೂರಿನಲ್ಲಿ ಜಿಲ್ಲಾ ಸಮಿತಿ ಸದಸ್ಯ ಕಾ॥ ಎಸ್.ಆರ್. ಆರಾಧ್ಯ ಮತ್ತು ಕಾ॥ ಬಿ.ಡಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲೂ ಕಾ॥ಹೆಚ್.ಸಿ. ಚನ್ನಪ್ಪನವರು ಪ್ರಮುಖ ಭಾಷಣ ಕಾರರಾಗಿದ್ದರು.

ಮುಂಬರುವ ಚುನಾವಣೆಯಲ್ಲಿ ಜನವಿರೋಧಿ ರಾಜೀವ್ ಗಾಂಧಿ ಸರ್ಕಾರವನ್ನು ಕಿತ್ತೆಸೆದು ಪರ್ಯಾಯ ಜನತೆ ಚುನಾಯಿಸಿದ ಸರ್ಕಾರವೊಂದನ್ನು ಅಕ್ರಮವಾಗಿ ವಜಾ ಮಾಡಿರುವ ಕಾಂಗ್ರೆಸ್ (ಐ) ರಾಜ್ಯದಲ್ಲಿ ಪುನಃ ಅಧಿಕಾರಕ್ಕೆ ಬಾರದಂತೆ ಎಚ್ಚರ ವಹಿಸಬೇಕೆಂದು ಭಾಷಣಕಾರರು ಜನತೆಗೆ ಮನವಿ ಮಾಡಿದರು.

ಪ್ರಸಾರ ಮಾಧ್ಯಮಗಳ ದುರುಪಯೋಗದ ವಿರುದ್ಧ ಪ್ರತಿಭಟನೆಗೆ ಬೆಂಬಲ

ಜೂನ್ 26ರಂದು ವಿರೋಧಪಕ್ಷಗಳ ರಾಷ್ಟ್ರೀಯ ರಂಗ ಹಾಗೂ ಎಡ ಪಕ್ಷಗಳು ಸರ್ಕಾರಿ ಮಾಧ್ಯಮಗಳ ದುರುಪಯೋಗದ ವಿರುದ್ಧ ದೇಶವ್ಯಾಪಿ ಪ್ರತಿಭಟನೆಗೆ ನೀಡಿರುವ ಕರೆಯನ್ನು ಸಿಪಿಐ (ಎಂ) ಬೆಂಗಳೂರು ಜಿಲ್ಲಾ ಸಮಿತಿಯು ಬೆಂಬಲಿಸಿದೆ.

ಕೇಂದ್ರದಲ್ಲಿನ ಆಡಳಿತ ರೂಢ ಕಾಂಗ್ರೆಸ್ (ಐ) ಪಕ್ಷವು ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮಗಳನ್ನು ತನ್ನ ಖಾಸಗೀ ಪ್ರಚಾರ ಸಾಧನೆಗಳ ರೀತಿಯಲ್ಲಿ ಬಳಸಿಕೊಳ್ಳುತ್ತಿರುವುದನ್ನು ಪಕ್ಷವು ತೀವ್ರವಾಗಿ ಖಂಡಿಸುತ್ತದೆ. ಸರ್ಕಾರಿ ಪ್ರಸಾರ ಮಾಧ್ಯಮಗಳು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವಂತಾಗಲು ಸ್ವಾಯುತ್ತ ಆಡಳಿತ ಮಂಡಳಿಗಳನ್ನು ರಚಿಸಬೇಕೆಂದು ಮತ್ತು ದೂರದರ್ಶನದ ಎರಡನೇ ಚಾನೆಲ್ಲನ್ನು ರಾಜ್ಯ ಸರ್ಕಾರಗಳಿಗೆ ವಹಿಸಿಕೊಡಬೇಕೆಂದು ಪಕ್ಷವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ.

ಚುನಾವಣೆಗಳು ಸಮೀಪಿಸುತ್ತಿರುವ ಹಿನ್ನಲೆಯಲ್ಲಿ ಮುದ್ರಣ ಕಾಗದದ ಬೆಲೆಯನ್ನು ವಿಪರೀತವಾಗಿ ಏರಿಸುವ ಮೂಲಕ ವೃತ್ತ ಪತ್ರಿಕೆಗಳ ಪ್ರಸಾರವನ್ನು ನಿಯಂತ್ರಿಸುವ ದುರುದ್ದೇಶಪೂರಿತ ಕ್ರಮವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಸಹ ಒತ್ತಾಯಿಸುತ್ತದೆ.

ಜೂನ್ 26 ರ ಪ್ರತಿಭಟನಾ ದಿನಾಚರಣೆಯನ್ನು ಬೆಂಗಳೂರು ನಗರದಲ್ಲಿ ಯಶಸ್ವಿಗೊಳಿಸಲು ಮುಂದಾಗಬೇಕೆಂದು ಎಲ್ಲಾ ಪ್ರಜಾ ಪ್ರಭುತ್ವ ಪ್ರೇಮಿ ನಾಗರೀಕ ಬಂಧುಗಳಲ್ಲಿ ಪಕ್ಷ ಮನವಿ ಮಾಡಿದೆ.

Printed and published by P.RAMACHANDRA RAO on behalf of communist party of India (Marxist), Karnataka State committee L-56, K.V. Temple Street, Sulthanpet, Bangalore-560 053. Phone.No. 75331. Editor. P.RAMACHANDRA RAO. M